ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)

# ಚೀನಾ – ಜಪಾನ್ ಇತಿಹಾಸ ಪಕ್ಕೊತ್ತಾಯ
# ಮಿತ್ರ ಆಳ್ವಿಕೆ ಬಾಕ್ಸರ್ ದಂಗೆ
# ಸನ್‌ಯಾತ್ ಸೇನ್
# ಮೆಯ್ಜಿ ಪುನರ್ ಸ್ಥಾಪನೆ
# ಮಂಚೂಕೊ

ಕೋರ್ಸ್ – 5

ಬ್ಲಾಕ್ – 3

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ - 5

ಬ್ಲಾಕ್

# 3

ಘಟಕ - 136
1911 ರ ಕ್ರಾಂತಿ, ಕಾರಣಗಳು ಮತ್ತು ಪರಿಣಾಮಗಳು

ಘಟಕ - 137
1911 ರ ಗಣರಾಜ್ಯ ಮತ್ತು ಯೂವಾನ್ ಷಿಕಾಯ್

ಘಟಕ - 138
ಚೀನಾದ ರಾಜಕೀಯದಲ್ಲಿ ಸನ್‌ಯಾತ್‌ಸೆನ್‌ರ ಪಾತ್ರ

ಘಟಕ - 139
ಮೊದಲನೆ ಮಗಾಯುದ್ಧದ ಕಾಲದಲ್ಲಿ ಚೀನ

ಘಟಕ - 140
ಕುಮಿಂಟಾಂಗ್ ಪಕ್ಷದ ಏಳಿಗೆ ಮತ್ತು ಚಿಯಾಂಗ್ ಕೈ ಷೆಕ್

ಘಟಕ - 141
ಚೀನಾ ಜಪಾನಿನ ಸಂಬಂಧಗಳು ಮತ್ತು ಮಂಚೂರಿಯಾ ಬಿಕ್ಕಟ್ಟು

ಘಟಕ - 142
ಎರಡನೇ ಮಹಾಯುದ್ಧದ ಕಾಲದ ಚೀನ

# ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ


ಪ್ರೊ. ಎಂ.ಜಿ. ಕೃಷ್ಣನ್
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*


## ಪಠ್ಯಕ್ರಮ ನಿರೂಪಕರು


1. *ಘಟಕ ಬರೆದವರು* — ಘಟಕಗಳು 148 ರಿಂದ 152

ಮೂಲ *ಪ್ರೊ. ಎಸ್. ಮೀರ್ ಸಮೀವುಲ್ಲ*
ಇತಿಹಾಸ ಪ್ರಾಧ್ಯಾಪಕರು
ಮೈಸೂರು

ಅನುವಾದಕರು *ಶ್ರೀ. ಕೆ.ಬಿ. ಚಂದ್ರ* — ಘಟಕಗಳು 148 ರಿಂದ 152
ಇತಿಹಾಸ ಪ್ರಾಧ್ಯಾಪಕರು
ಹಾಸನ


## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ


ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೮ - 5

## ಬ್ಲಾಕ್ - 3

### ಪೀಠಿಕೆ

## ಚೀನಾ ಮತ್ತು ಜಪಾನ್ - 1839 ರಿಂದ

ನೀವು ಈಗಾಗಲೇ 2 ನೇ ಬ್ಲಾಕ್‌ನ್ನು ಅಧ್ಯಯನ ಮಾಡಿದ್ದು (ಚೀನ ಮತ್ತು ಜಪಾನ್, 1839 ರಿಂದ ) ಅದರಲ್ಲಿ ನಾವು ಪ್ರಭಾವಿತ ವಲಯಗಳ ಏಳಿಗೆ, 1894-95 ರ ಚೀನ-ಜಪಾನ್ ಯುದ್ಧ, ಮೂರು ದಿವಸಗಳ ಸುಧಾರಣೆ ಮತ್ತು ಬಾಕ್ಸರ್ ದಂಗೆಗಳ ಜೊತೆಗೆ ತೆರೆದ ಬಾಗಿಲ ನೀತಿ (ಮುಕ್ತ ದ್ವಾರ ನೀತಿ) ಮತ್ತು ಅದರ ಪರಿಣಾಮಗಳ ಬಗ್ಗೆ ಸಾಮಗ್ರಿಗಳನ್ನು ನೀಡಿದ್ದೇವೆ.

ಪ್ರಸ್ತುತ 3 ನೇ ಬ್ಲಾಕ್ ನಿಮಗೆ 7 ಘಟಕಗಳನ್ನು ನೀಡುತ್ತದೆ. (136 ರಿಂದ 142 ನೇ ಘಟಕಗಳು). 136ನೇ ಘಟಕವು ಚೀನಾದ ಇತಿಹಾಸದಲ್ಲಿ ಪ್ರಮುಖ ತಿರುವೆನಿಸಿರುವ 1911 ರ ಕ್ರಾಂತಿಯ ವಿವಿಧ ವಿಷಯಗಳನ್ನು ತಿಳಿಸುತ್ತದೆ. ಈ ಕ್ರಾಂತಿಯು ವಿದೇಶಿ-ವಿರೋಧಿ ಮತ್ತು ಸಂಪ್ರದಾಯ ವಿರೋಧಿಯೆಂದು ಹೇಳಲಾಗಿದೆ. ಈ ಕ್ರಾಂತಿಯ ಫಲಿತಾಂಶವೆಂದರೆ ಮಂಚೂ ಸಂತತಿಯ ಅಂತ್ಯ ಮತ್ತು ಚೀನಾದಲ್ಲಿ ಗಣರಾಜ್ಯದ ಸ್ಥಾಪನೆ. 137 ನೇ ಘಟಕವು 1912 ರಲ್ಲಿ ಸ್ಥಾಪಿತವಾದ ಚೀನಾದ ಗಣರಾಜ್ಯದಲ್ಲಿ ಯುವಾನ್ ಷಿಕಾಯಿಯ ಪಾತ್ರ ಮತ್ತು ಅವನು ಅದರ ಮೊದಲ ಅಧ್ಯಕ್ಷನಾದ ಬಗ್ಗೆ ವಿವರಗಳನ್ನು ಒಳಗೊಂಡಿದೆ. ಅವನು ರಾಜಪ್ರಭುತ್ವವನ್ನು ಪುನಃ ಸ್ಥಾಪಿಸಲು ಮತ್ತು ತಾನೇ ಚಕ್ರವರ್ತಿಯಾಗಲು ಪ್ರಯತ್ನಿಸಿದನು. ಆದರೆ ಅವನು ತನ್ನ ಕುತಂತ್ರದಲ್ಲಿ ವಿಫಲನಾದನು.

138 ನೇ ಘಟಕದಲ್ಲಿ ನೀವು ಚೀನಾದ ರಾಜಕೀಯದಲ್ಲಿ ಸನ್‌ಯಾತ್‌ಸೇನ್‌ನ ಪಾತ್ರದ ಬಗ್ಗೆ ತಿಳಿದುಕೊಳ್ಳುವಿರಿ. ಕ್ರಾಂತಿಯನ್ನು ಸಂಘಟಿಸುವಲ್ಲಿ ಅವನು ಗಮನಾರ್ಹ ಪಾತ್ರವನ್ನು ವಹಿಸಿದನು. ಅವನು ಮಹಾಕ್ರಾಂತಿಕಾರಿಯಾಗಿದ್ದು ಮಂಚೂಗಳ ಆಳ್ವಿಕೆಯ ವಿರುದ್ಧ ವಿದೇಶಗಳಲ್ಲಿ ಕ್ರಾಂತಿಯನ್ನು ಸಂಘಟಿಸಿದನು. 1912 ರಲ್ಲಿ ಚೀನಾದಲ್ಲಿ ರಾಜಪ್ರಭುತ್ವ ಕೊನೆಗೊಂಡಿತು. ಯೂವಾನ್ ಷಿಕಾಯ್ ಹೊಸದಾಗಿ ಉದಯಿಸಿದ ಗಮರಾಜ್ಯದ ಮೊದಲ ಅಧ್ಯಕ್ಷನಾದನು. ಚೀನಾದ ಐಕ್ಯತೆಯ ದೃಷ್ಟಿಯಿಂದ ಸನ್‌ಯಾತ್‌ಸೇನ್ ಅವನ ಪರವಾಗಿ ರಾಜೀನಾಮೆ ನೀಡಿದನು.

139 ನೇ ಘಟಕವು ಮೊದಲನೆ ಮಹಾಯುದ್ಧದಲ್ಲಿ ಚೀನಾದ ಭಾಗವಹಿಸುವಿಕೆಯ ಪ್ರಮುಖ ಅಂಶಗಳನ್ನು ಚರ್ಚಿಸುತ್ತದೆ. ಅಮೆರಿಕಾದ ಅಧ್ಯಕ್ಷ ವಿಲ್ಸನ್ನನ ಆದರ್ಶವಾದಿ ಅರ್ಥವಿವರಣೆಯಿಂದಾಗಿ ಮತ್ತು ಜಪಾನಿನ ಆಕಾಂಕ್ಷೆಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಚೀನಾ 1917 ರಲ್ಲಿ ಯುದ್ಧವನ್ನು ಪ್ರವೇಶಿಸಿತು. ಯುದ್ಧದಲ್ಲಿ ಭಾಗವಹಿಸಿದ್ದರಿಂದ ಚೀನಾಕ್ಕೆ ಅಪಾರ ಲಾಭವಾಯಿತು. 140 ನೇ ಘಟಕದಲ್ಲಿ ಕುಮಿಂಟಾಂಗ್ ಪಕ್ಷದ ಏಳಿಗೆ ಮತ್ತು ಸನ್‌ಯಾತ್‌ಸೇನ್‌ನ ಉತ್ತರಾಧಿಕಾರಿಯಾದ ಚಿಯಾಂಗ್ ಕೈ ಷೇಕ್‌ನ ಸಾಧನೆಗಳು ಹಾಗೂ 1949 ರಲ್ಲಿ ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸುವವರೆಗೆ ಮುಂದುವರಿದ ರಾಷ್ಟ್ರೀಯ ಸರ್ಕಾರದ ಬಗ್ಗೆ ವಿವರಿಸಲಾಗಿದೆ.

141 ನೇ ಘಟಕದಲ್ಲಿ ಚೀನಾ-ಜಪಾನ್ ಸಂಬಂಧಗಳು ಮತ್ತು 1931 ರ ಮಂಚೂರಿಯಾ ಬಿಕ್ಕಟ್ಟಿನ ಬಗ್ಗೆ ವಿವರಿಸಲಾಗಿದೆ. ಸೆಪ್ಟೆಂಬರ್ 18, 1930 ರಂದು ಮಂಚೂರಿಯಾದಲ್ಲಿ ಜಪಾನಿಗೆ ಸೇರಿದ್ದ ರೈಲು ಮಾರ್ಗದಲ್ಲಿ ಬಾಂಬೊಂದು ಸ್ಫೋಟಿಸಿತು. ಇದನ್ನೇ ನೆಪವನ್ನಾಗಿ ಮಾಡಿಕೊಂಡ ಜಪಾನ್ ಮಂಚೂರಿಯಾದ ಮೇಲೆ ಆಕ್ರಮಣ ಮಾಡಿ ಒಂದು ವರ್ಷದಲ್ಲಿ ಅದನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿತು. ಕಡೆಯದಾದ 142 ನೇ ಘಟಕವು 2ನೇ ಮಹಾಯುದ್ಧದ ಕಾಲದಲ್ಲಿ ಚೀನಾದ ವಿವಿಧ ವಿಷಯಗಳನ್ನು ವಿವರಿಸುತ್ತದೆ. ಈ ಘಟಕವು ಚೀನಾವು ಮಿತ್ರ ಪಕ್ಷಗಳ ಕಡೆಯಿಂದ ಯುದ್ಧವನ್ನು ಪ್ರವೇಶಿಸುವಂತೆ ಮಾಡಿದ ಸನ್ನಿವೇಶಗಳನ್ನು ಚರ್ಚಿಸುತ್ತದೆ. ಆಗಸ್ಟ್ 10, 1945 ರಂದು ಚೀನಾ ಸೋತು ಶರಣಾಯಿತು. ಚೀನ ಜಪಾನಿನ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಿತು. ಅದು ಹಿಂದಿನ 50 ವರ್ಷಗಳಲ್ಲಿ ಏನನ್ನು ಕಳೆದುಕೊಂಡಿದ್ದಿತೋ ಅದನ್ನು ಮತ್ತೆ ಪಡೆಯಿತು. ಚೀನ ವಿಶ್ವದ ನಾಲ್ಕು ಪ್ರಬಲ ರಾಷ್ಟ್ರಗಳಲ್ಲಿ ಒಂದಾಗಿ ಹೊರಹೊಮ್ಮಿತು.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 136

## 1911 ರ ಕ್ರಾಂತಿ, ಕಾರಣಗಳು ಮತ್ತು ಪರಿಣಾಮಗಳು

ರಚನೆ


136.0 ಉದ್ದೇಶಗಳು

136.1 ಪೀಠಿಕೆ

136.2 ಕ್ರಾಂತಿಗೆ ಕಾರಣಗಳು

136.2.1 ರಾಜಕೀಯ ಅಂಶಗಳು

136.2.2 ಸಾಮಾಜಿಕ ಮತ್ತು ಆರ್ಥಿಕ ಅಂಶಗಳು

136.2.3 ಸೈನಿಕ ಅಂಶಗಳು

136.2.4 ಪಾಶ್ಚಿಮಾತ್ಯ ಪ್ರಭಾವ

136.2.5 ಆಧುನಿಕ ಚೀನಾದ ಬುದ್ದಿಜೀವಿಗಳು

136.2.7 ಕ್ರಾಂತಿಗೆ ತಕ್ಷಣದ ಕಾರಣ

136.3 ಕ್ರಾಂತಿಯ ಹರಡುವಿಕೆ

136.4 ಕ್ರಾಂತಿಯ ಪರಿಣಾಮಗಳು

136.5 ಮುಕ್ತಾಯ

136.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

136.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 136.0 ಉದ್ದೇಶಗಳು

ಈ ಘಟಕದಲ್ಲಿ 1911 ರ ಚೀನಾದ ಕ್ರಾಂತಿಗೆ ಕಾರಣಗಳನ್ನು ತಿಳಿದುಕೊಳ್ಳುವುದು ನಮ್ಮ ಪ್ರಯತ್ನವಾಗಿದೆ. ಈ ಕ್ರಾಂತಿಯು ಚೀನಾದ ಇತಿಹಾಸದಲ್ಲಿ ಒಂದು ಪ್ರಮುಖ ತಿರುವಾಗಿದ್ದಿತು. ಈ ಕ್ರಾಂತಿಯು ಮಂಚೂಗಳ ರಾಜಪ್ರಭುತ್ವವನ್ನು ಕೊನೆಗೊಳಿಸಿ ಡಾ. ಸನ್‌ಯಾತ್‌ಸೇನ್‌ನ ನಾಯಕತ್ವದಲ್ಲಿ ಪ್ರಜಾಪ್ರಭುತ್ವ ಮಾದರಿಯ ಸರ್ಕಾರವನ್ನು ಸ್ಥಾಪಿಸಿತು. ಡಾ. ಸನ್‌ಯಾತ್‌ಸೇನ್‌ರನ್ನು ಚೀನೀ ಗಣರಾಜ್ಯದ ತಾತ್ಕಾಲಿಕ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಬಾಕ್ಸರ್ ದಂಗೆಯ ನಂತರ ಮಂಚು ಸಂತತಿ ಅವನತಿಯ ಹಾದಿಯನ್ನು ಹಿಡಿಯಿತೆಂಬುದನ್ನು ನಾವು ಈಗಾಗಲೇ ತಿಳಿದುಕೊಂಡಿದ್ದೇವೆ. ಮಂಚೂಗಳು ಆಂತರಿಕವಾಗಿ ಆರ್ಥಿಕ ಅವ್ಯವಸ್ಥೆ ಮತ್ತು ಅಧಿಕಾರವರ್ಗದ ಅಸಮರ್ಥತೆಯನ್ನು ಹಾಗೂ ಕರಾವಳಿ ಪ್ರದೇಶಗಳಲ್ಲಿ ಪಾಶ್ಚಿಮಾತ್ಯ ವಿಚಾರಗಳು ಮತ್ತು ಅಧಿಕಾರದ ಪ್ರಭಾವವನ್ನು ಎದುರಿಸಿದರು. ಈ ಪರಿಸ್ಥಿತಿಯಲ್ಲಿ ಚೀನಾದ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ರಚನೆಯಲ್ಲಿ ಮಹತ್ವದ ಹೊಂದಾಣಿಕೆಯ ಅಗತ್ಯವಿತ್ತು. ಮಂಚೂಗಳು ಈ ಕಾರ್ಯಗಳನ್ನು ಕಲ್ಪಿಸಿಕೊಳ್ಳಲು ಇಲ್ಲ. ಇಲ್ಲವೇ ಅನುಷ್ಠಾನಗೊಳಿಸಲೂ ಇಲ್ಲ. ಈ ಬೆದರಿಕೆಯನ್ನೊಡ್ಡಿದ ಅಪಾಯದ ಮುಂದೆ ವೃದ್ಧ ಹಾಗೂ ಅವಕಾಶವಾದಿ ಚಕ್ರವರ್ತಿನಿ ತ್ಜು ಷಿ ಸುಧಾರಣೆಗಳ ಮೊರೆ ಹೋದಳು. ಆದರೆ ಈ ಬದಲಾವಣೆ ಮಂಚೂಗಳ ಘನತೆ ಹಾಗೂ ಪ್ರಾಬಲ್ಯದಲ್ಲಿ ಅವನತಿಯನ್ನು ತಡೆಯಲು ವಿಫಲವಾಯಿತು.

## 136.1 ಪೀಠಿಕೆ

ಸುಧಾರಣೆಯ ಸಂಪೂರ್ಣ ವಿಫಲತೆ ಮತ್ತು ಬಾಕ್ಸರ್ ದಂಗೆಯ ವಿಫಲತೆಗಳು ನೇರವಾದ ಕ್ರಾಂತಿಯೊಂದೇ ಹಳೆಯ ವ್ಯವಸ್ಥೆಯನ್ನು ತೊಡೆದು ಹಾಕಿ ಜಪಾನಿನ ಉದಾಹರಣೆಯಾಗಿ ಹೊಸ ವ್ಯವಸ್ಥೆಯನ್ನು ಸ್ಥಾಪಿಸುವ ಪರಿಹಾರವೆಂದು ಅನೇಕ ಚೀನಿಯರು ಭಾವಿಸಿದರು. ಸನ್‌ಯಾತ್‌ಸೇನ್ (1866-1925) ಈ ಕ್ರಾಂತಿಯ ನಾಯಕನಾಗಿದ್ದನು. ಗಣರಾಜ್ಯವಾದಿಯೂ, ರಾಜಪ್ರಭುತ್ವ ವಿರೋಧಿ ಕಾರ್ಯಕರ್ತನೂ ಆಗಿದ್ದ ಅವನು ಹೊರನಾಡ ಅದರಲ್ಲೂ ಜಪಾನಿನಲ್ಲಿದ್ದ ಚೀನಿಯರು ಮತ್ತು ಚೀನೀ ವಿದ್ಯಾರ್ಥಿಗಳಲ್ಲಿ ಅತ್ಯಂತ ಜನಪ್ರಿಯನಾಗಿದ್ದನು. ಸನ್‌ಯಾತ್‌ಸೇನನು ಜಪಾನಿನಲ್ಲಿ ಚೀನೀ ಕ್ರಾಂತಿಕಾರಿ ಚಳುವಳಿಯ ಮತ್ತೊಬ್ಬ ಜನಪ್ರಿಯ ನಾಯಕನಾಗಿದ್ದ ಹುವಾಂಗ್ ಕ್ಸಿಂಗನೊಂದಿಗೆ 1905 ರಲ್ಲಿ ಟೋಕಿಯೋದಲ್ಲಿ ತುಂಗ್ ಮೆಂಗ್ ಹುಯಿ (ಐಕ್ಯತಾ ಸಂಘ) ಎಂಬ ಕ್ರಾಂತಿಕಾರಿ ಸಂಘವನ್ನು ಸ್ಥಾಪಿಸಿದನು. ಈ ಚಳುವಳಿಗೆ ವಿದೇಶೀ ಚೀನಿಯರ ಉಧಾರವಂತಿಕೆ ಮತ್ತು ನೂರು ದಿನಗಳ ಸುಧಾರಣೆಯ ನಂತರ ದೇಶವನ್ನು ಬಿಟ್ಟು ಓಡಿ ಹೋಗಿದ್ದ ಅನೇಕ ಸುಧಾರಕರು ಮತ್ತು ಪ್ರಾಂತೀಯ ಸೈನ್ಯಾಧಿಕಾರಿಗಳ ಬೆಂಬಲ ದೊರೆಯಿತು. ಸನ್‌ಯಾತ್‌ಸೇನ್‌ನ ತತ್ವಗಳು 1897 ರಲ್ಲಿ ಸಿದ್ಧಾಂತದ ರೂಪವನ್ನು ಪಡೆದವು. ಮೊದಲು 1905 ರಲ್ಲಿ ಟೋಕಿಯೋದಲ್ಲಿ ಪ್ರತಿಪಾದಿಸಲ್ಪಟ್ಟು ನಂತರ 1920 ರ ದಶಕದಲ್ಲಿ ಪರಾಮರ್ಶೆಗೊಂಡವು. ಸನ್‌ಯಾತ್‌ಸೇನ್‌ನ ಸಿದ್ಧಾಂತವು ಜನಸಾಮಾನ್ಯರ ಮೂರು ತತ್ವಗಳಾದ (ಸ್ಯಾನ್ ಮಿನ್ ಝುಯಿ) ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಜನಸಾಮಾನ್ಯರ ಹೊಟ್ಟೆಪಾಡು ಇವುಗಳ ಮೇಲೆ ಕೇಂದ್ರೀಕರಿಸಲ್ಪಟ್ಟಿದ್ದವು. ಮಂಚೂಗಳ ಪದಚ್ಯುತಿ ಮತ್ತು ಚೀನಾದ ಮೇಲೆ ವಿದೇಶೀ ಪ್ರಭುತ್ವವನ್ನು ಕೊನೆಗೊಳಿಸುವುದನ್ನು ರಾಷ್ಟ್ರೀಯತೆಯೆಂದು ಕರೆಯಲಾಗಿತ್ತು. ಎರಡನೇ ತತ್ವವಾದ ಪ್ರಜಾಪ್ರಭುತ್ವವನ್ನು ಸನ್‌ಯಾತ್‌ಸೇನ್‌ನ ಜನಪ್ರಿಯ ಚುನಾಯಿತ ಗಣರಾಜ್ಯ ಮಾದರಿಯ ಸರ್ಕಾರದ ಗುರಿಯನ್ನು ವಿವರಿಸಲು ಬಳಸಲಾಯಿತು. ಸಮಾಜವಾದ (ಆರ್ಥಿಕ ಸಮಾನತೆಯ ತತ್ವ) ವೆಂದು ಸಾಮಾನ್ಯವಾಗಿ ಕರೆಯಲಾಗುತ್ತಿದ್ದ ಜನರ ಜೀವನ ಉತ್ಪಾದನೆ ಮತ್ತು ಭೂಮಿಯ ಒಡೆತನಗಳನ್ನು ನಿಯಂತ್ರಣದ ಮೂಲಕ ಜನಸಾಮಾನ್ಯರಿಗೆ ನೆರವು ನೀಡುವ ಉದ್ದೇಶವನ್ನು ಹೊಂದಿದ್ದಿತು.

## 136.2 ಕ್ರಾಂತಿಯ ಕಾರಣಗಳು .

1911 ರ ವೇಳೆಗೆ ಚೀನಾ ಅತ್ಯಂತ ಹೀನಾಯ ಸ್ಥಿತಿಯಲ್ಲಿತ್ತು. ಅದರ ಆರ್ಥಿಕ ವ್ಯವಸ್ಥೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಶೋಷಣೆಯಿಂದಾಗಿ ಸಂಪೂರ್ಣವಾಗಿ ಛಿದ್ರವಾಗಿತ್ತು. ಜನರ ಜೀವನ ಮಟ್ಟ ಅತ್ಯಂತ ಕೆಳಹಂತದಲ್ಲಿತ್ತು ಮತ್ತು ದೇಶದ ರಾಷ್ಟ್ರೀಯರಿಗೆ (ಚೀನಿಯರಿಗೆ) ಪ್ರಪಂಚದ ಯಾವುದೋ ಭಾಗದಲ್ಲಿ ಗೌರವವಿರಲಿಲ್ಲ. ರಾಜಕೀಯವಾಗಿ ಅದರ ದುರ್ಬಲತೆ ಬಹಿರಂಗವಾಗಿತ್ತು ಮತ್ತು ಅದರ ಸೈನಿಕ ದೌರ್ಬಲ್ಯಗಳು ಇಡೀ ವಿಶ್ವಕ್ಕೇ ತಿಳಿದಿದ್ದವು. ಸಾಮಾಜಿಕ ಪಿಡುಗುಗಳು ಸಮಾಜವನ್ನು ಒಳಗಿನಿಂದಲೇ ಭಕ್ಷಿಸತೊಡಗಿದ್ದವು. ಈ ಪರಿಸ್ಥಿತಿಯಲ್ಲಿ ಚೀನಿಯರು ತಮ್ಮ ಚಕ್ರವರ್ತಿಗಳ ವಿರುದ್ಧ ದಂಗೆಯೆದ್ದರು.

### 136.2.1 ರಾಜಕೀಯ ಕಾರಣಗಳು

ಸರ್ಕಾರದ ಆಡಳಿತ ದಕ್ಷತೆಯಲ್ಲಿ ಅಧೋಗತಿ ಕಂಡು ಬಂದಿತು. ಅಧಿಕಾರಿಗಳ ಮೇಲ್ವಿಚಾರಣೆಗೆ ದಕ್ಷ ಚಕ್ರವರ್ತಿಯಿಲ್ಲದೆ, ಅವರು ಹೆಚ್ಚು ಅಸಮರ್ಥರಾಗಿದ್ದರು. ಸ್ವಾಭಾವಿಕವಾಗಿಯೇ ಅಸಮರ್ಥ ಉನ್ನತ ಅಧಿಕಾರಿಗಳು ಅಸಮರ್ಥ ಕೆಳದರ್ಜೆಯ ಅಧಿಕಾರಗಳನ್ನೇ ಆಯ್ಕೆ ಮಾಡಿಕೊಂಡರು. ಅಸಮರ್ಥತೆಯ ದುಷ್ಪರಿಣಾಮಗಳು ಅವನತಿಗೆ ಕಾರಣವಾದವು.

ದಂಗೆಗಳನ್ನು ಅಡಗಿಸಲು ಅಥವಾ ಸರ್ಕಾರದ ಖರ್ಚು ವೆಚ್ಚಗಳನ್ನು ಭರಿಸಲು ಹಣದ ಕೊರತೆಯಿಂದಾಗಿ ಚಿಂಗ್ ಆಸ್ಥಾನವು ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲು ಸರ್ಕಾರಿ ಹುದ್ದೆಯ ಮಾರಾಟವನ್ನು ಹೆಚ್ಚಾಗಿ ಅವಲಂಬಿಸಿತ್ತು. ಈ ಮಾರ್ಗದಿಂದ ಹೆಚ್ಚು ಹೆಚ್ಚು ಜನರು ಸರ್ಕಾರಿ ಹುದ್ದೆಗಳನ್ನು ಪಡೆದರು. ಅಧಿಕಾರಿಗಳಾದ ನಂತರ ಅವರು ಜನಸಾಮಾನ್ಯರಿಂದ ಸಾಧ್ಯವಾದಷ್ಟು ಹಣವನ್ನು ಹಿಂಡಿದರು. ಸರ್ಕಾರದಲ್ಲಿ ಭ್ರಷ್ಟಾಚಾರ ತೀವ್ರವಾಯಿತು. ಉನ್ನತಾಧಿಕಾರಿಗಳು ಕೆಳವರ್ಗದ ಅಧಿಕಾರಿಗಳಿಂದ ಉಡುಗೊರೆಗಳನ್ನು ಪಡೆದರು. ಪ್ರತಿಯಾಗಿ ಕೆಳವರ್ಗದ ಅಧಿಕಾರಿಗಳು ಸರ್ಕಾರದ ಹಣವನ್ನು ತಮ್ಮ ಜೇಬುಗಳಿಗೆ ಇಳಿಸಿದರು. ಜನರ ಮೇಲೆ ಹೆಚ್ಚಿನ ತೆರಿಗೆಗಳನ್ನು ಹೊರಿಸಿದ್ದರಿಂದ ಅವರು ಆರ್ಥಿಕ ಸಂಕಷ್ಟಗಳಿಗೆ ಗುರಿಯಾದರು.

ರಾಜಕೀಯವು ಅತಿಯಾಗಿ ಭ್ರಷ್ಟಾಚಾರ ಮತ್ತು ನೈತಿಕ ಅಧಃಪತನಗಳಿಗೀಡಾಗಿದ್ದು, ರಾಜಕೀಯ ಅಧಿಕಾರವು ಬಹಳ ಕಾಲ ಪೀಕಿಂಗ್‌ನಲ್ಲಿ ಕೇಂದ್ರೀಕೃತವಾಗಿರಲಿಲ್ಲ. ರಾಜಕೀಯ ವಿಕೇಂದ್ರೀಕರಣ ತೈಪಿಂಗ್ ದಂಗೆಯ ಕಾಲದಿಂದಲೂ (1851-1864) ಬೆಳವಣಿಗೆ ಹೊಂದತೊಡಗಿತ್ತು. ಆ ಸಮಯದಲ್ಲಿ ಚಿಂಗ್ ಆಸ್ಥಾನವು ದಂಗೆಗಳನ್ನು ಅಡಗಿಸಲು ಪ್ರಾದೇಶಿಕ ಸೇನೆಗಳ ರಚನೆಗೆ ಅನುಮತಿ ನೀಡಿತು. ಸಾಂಪ್ರದಾಯಿಕ ಅಷ್ಟ-ಧ್ವಜದ ಪಡೆಗಳು ದುರ್ಬಲ ಮತ್ತು ಅನುಪಯುಕ್ತವಾಗಿದ್ದವು. ಈ ಪ್ರಾದೇಶಿಕ ಸೇನೆಗಳು ಸ್ಥಳೀಯವಾಗಿ ನೆಲೆಗೊಂಡಿದ್ದವು. ಸ್ಥಳೀಯ ಹಣಕಾಸು ಮತ್ತು ಸೆಂಗ್ ಕುಯೋ ಫಾನ್, ಲೀ ಹಂಗ್ ಚಂಗ್ ಮುಂತಾದ ಸ್ಥಳೀಯ ಪ್ರಾಂತಗಳ ಅಧಿಕಾರಿಗಳಿಗೆ ವಿಧೇಯವಾಗಿರುವಂತೆ ತರಬೇತಿ ಪಡೆದಿದ್ದವು. ಅವುಗಳ ಮೇಲೆ ಪೀಕಿಂಗ್‌ನ ಹತೋಟಿ ನಿಷ್ಪ್ರಯೋಜಕವಾಗಿತ್ತು. ಈ ಅಂಶವು 1911 ರಲ್ಲಿ ಪ್ರಾಂತಗಳು ಏಕೆ ಸ್ವಾತಂತ್ರವನ್ನುಯ ಘೋಷಿಸಿಕೊಂಡವೆಂಬುದನ್ನು ಭಾಗಶಃ ವಿವರಿಸುತ್ತದೆ.

### 136.2.2 ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು

ಅತಿಯಾದ ಜನಸಂಖ್ಯೆ ಮತ್ತು ನೈಸರ್ಗಿಕ ವಿಪತ್ತುಗಳೂ ಕ್ರಾಂತಿಯ ಆರಂಭಕ್ಕೆ ಕಾರಣವಾದವು. ಅತಿಯಾದ ಜನಸಂಖ್ಯೆಯ ಸಮಸ್ಯೆಯು ಚೀನಾಕ್ಕೆ ಒಂದು ಮಹಾಶಾಪವಾಗಿದ್ದು ಅಲ್ಲಿನ ಎಲ್ಲಾ ಚಳುವಳಿಗಳಿಗೆ ಪ್ರಮುಖ ಕಾರಣವಾಗಿತ್ತು. ಹೆಚ್ಚುತ್ತಿದ್ದ ಜನಸಂಖ್ಯೆಯು ದೇಶದ ಆರ್ಥಿಕ ಸ್ಥಿರತೆಯನ್ನು ಭಂಗಪಡಿಸಿತು. ಈ ಜನರಲ್ಲಿ ಕೆಲವರು ಮಂಚೂರಿಯಾದಲ್ಲಿ ನೆಲೆಸಿದರೆ ಮತ್ತೆ ಕೆಲವರು ವಿರಳವಾದ ಜನಸಂಖ್ಯೆಯಿದ್ದ ಪ್ರದೇಶದಲ್ಲಿ ನೆಲೆಸಿದರು. ಅವರಲ್ಲಿ ಕೆಲವರು ಇಂಡೋ ಚೀನಾ, ಮಲಯ, ಮುಂತಾದ ದೇಶಗಳಿಗೆ ವಲಸೆ ಹೋದರು. ಜನಸಂಖ್ಯಾ ಸ್ಫೋಟದ ಜೊತೆಗೆ, 1910 ಮತ್ತು 1911 ನೇ ವರ್ಷಗಳು ಕೆಟ್ಟ ಋತುಗಳ ಸರಣಿಯನ್ನು ಕಂಡವು. ಪರಿಣಾಮವಾಗಿ ಭಯಂಕರ ಬರಗಾಲವುಂಟಾಯಿತು. ಸಹಸ್ರಾರು ಜನರು ಮರಣ ಹೊಂದಿದರು ಮತ್ತು ಹಲವು ಮಿಲಿಯನ್ ಜನರು ಹಸಿವಿನ ದವಡೆಗೆ ಸಿಲುಕಿದರು. ಏಳು ಪ್ರಾಂತಗಳ ಆರು ಲಕ್ಷ ಕುಟುಂಬಗಳು ಹಸಿವು ಮತ್ತು ಸಾವಿಗೆ ಗುರಿಯಾದರು. ಇದೇ ಸಮಯದಲ್ಲಿ ಉಂಟಾದ ನೆರೆ ಹಾವಳಿಯಿಂದ ಅನೇಕ ಪ್ರಾಂತಗಳು ನೆಲಸಮವಾದವು ಮತ್ತು ಉತ್ಪಾದನೆಯ ಸಹಜ ಸ್ಥಿತಿಗೆ ಇದರಿಂದ ತೀವ್ರವಾದ ಧಕ್ಕೆಯಾಯಿತು. ಈ ಸಂಕಷ್ಟದ ಸಮಯದಲ್ಲಿ ಸರ್ಕಾರ ದಿವ್ಯ ನಿರ್ಲಕ್ಷವನ್ನು ತೋರಿತು. ನೈಸರ್ಗಿಕ ವಿಪತ್ತುಗಳಲ್ಲಿ ಅಳಿದುಳಿದವರು ತಮಗೆ ನೆಮ್ಮದಿಯ ಭರವಸೆಯನ್ನು ನೀಡುವ ಯಾವುದೇ ಚಳುವಳಿಗೆ ಬೆಂಬಲ ನೀಡಲು ಮಾನಸಿಕವಾಗಿ ಸಿದ್ಧರಾದರು.

ಆರ್ಥಿಕ ಅತೃಪ್ತಿ ಮತ್ತು ತೆರಿಗೆಯ ಹೊರೆ ಜನರ ಅತೃಪ್ತಿಗೆ ಮತ್ತೊಂದು ಪ್ರಮುಖ ಕಾರಣವಾಯಿತು. ಹೆಚ್ಚಿದ ತೆರಿಗೆಗಳಿಂದ ಚೀನದಾದ್ಯಂತ ಅಸಮಧಾನದ ಅಲೆಯೆದ್ದಿತು. ಸುಧಾರಣಾ ಕಾರ್ಯಕ್ರಮದ ಪ್ರತಿಯೊಂದು ಕ್ರಮಕ್ಕೂ ಅಪಾರ ಆಧಾಯದ ಅಗತ್ಯವಾಯಿತು. ಸುಧಾರಣೆಗಳ ಭರವಸೆಗಳನ್ನು ಈಡೇರಿಸಲು ಮತ್ತು ಹೊಸ ಸೈನ್ಯದ ಸೃಷ್ಟಿ, ಹೊಸ ರೈಲು ಮತ್ತು ರಸ್ತೆ ಮಾರ್ಗಗಳ ನಿರ್ಮಾಣ, ಹೊಸ ಶಿಕ್ಷಣ ವ್ಯವಸ್ಥೆಯ ಅನುಷ್ಠಾನ ಮುಂತಾದ ಪುನರ್ ಸಂಘಟನೆಯ ಕಾರ್ಯಕ್ರಮಗಳಿಗೆ ಬೃಹತ್ ಮೊತ್ತದ ಹಣವನ್ನು ಖರ್ಚು ಮಾಡಬೇಕಾಯಿತು. 1894-95 ಚೀನಾ- ಜಪಾನ್ ಯುದ್ಧದಲ್ಲಿ ಸೋಲಿನ ನಂತರ ಜಪಾನಿಗೆ ಕೊಡಬೇಕಾಗಿದ್ದ ಬೃಹತ್ ಯುದ್ಧ ವೆಚ್ಚ ಪರಿಹಾರ ಮತ್ತು ಬಾಕ್ಸರ್ ದಂಗೆಯ ಪರಿಹಾರಗಳು ಚೀನಾದ ಖಜಾನೆಯ ಮೇಲೆ ಮತ್ತಷ್ಟು ಹೊರೆಯನ್ನು ಹಾಕಿದವು. ಈ ಬೃಹತ್ ಪರಿಹಾರದ ವೆಚ್ಚಗಳು ದೇಶದ ಸಂಪತ್ತನ್ನು ಬರಿದು ಮಾಡಿದವು ಮತ್ತು ಪ್ರಾಯೋಗಿಕವಾಗಿ ಅದರ ವಾಣಿಜ್ಯ

ತೆರಿಗೆ ಹಾಗೂ ಇತರ ಕೆಲವು ಆದಾಯ ಮೂಲಗಳನ್ನು ನುಂಗಿಹಾಕಿದವು. ಈ ವೆಚ್ಚವನ್ನು ಭರಿಸಲು ಹೊಸ ತೆರಿಗೆಗಳನ್ನು ವಿಧಿಸುವುದು ಅನಿವಾರ್ಯವಾಯಿತು. ಇದು ಮಂಚೂ ಸಂತತಿಯ ವಿರುದ್ಧ ಅತೃಪ್ತಿ ಮತ್ತು ಅಸಮಧಾನಗಳ ಪ್ರಮಾಣದ ತೀವ್ರವಾಗಿ ಕೊಬ್ಬುವಂತೆ ಮಾಡಿತು.

ಸರ್ಕಾರದ ದುರ್ಬಲ ಆರ್ಥಿಕ ಪರಿಸ್ಥಿತಿಯೂ 1911 ರ ಕ್ರಾಂತಿಯ ಆರಂಭಕ್ಕೆ ಕಾರಣವಾಯಿತು. ಸಮಾಜದಲ್ಲಿ ಬಡತನವಿದ್ದ ರಿಂದ ರಾಜಸಂತತಿಯು ಸಂಗ್ರಹಿಸಬಹುದಾಗಿದ್ದ ತೆರಿಗೆಯ ಮೊತ್ತವೂ ಮಿತವಾಗಿತ್ತು. ಅಲ್ಲದೆ ಸರ್ಕಾರದಲ್ಲಿ ತೀವ್ರವಾದ ಭ್ರಷ್ಟಾಚಾರದಿಂದ ಸಂಗ್ರಹಿಸಲಾದ ತೆರಿಗೆಗಳ ಬಹುಭಾಗವನ್ನು ಕಬಳಿಸುತ್ತಿದ್ದಿತು. ಸಮಾಜದಲ್ಲಿ ಬಲಿಷ್ಠರಾಗಿದ್ದ ಭೂಮಾಲೀಕರು ಸರ್ಕಾರಕ್ಕೆ ತೆರಿಗೆಗಳನ್ನು ವಂಚಿಸುವ ಮೂಲಕ ತೆರಿಗೆಯ ಹೆಚ್ಚಿನ ಹೊರೆಯನ್ನು ರೈತರ ಮೇಲೆ ಹೇರುತ್ತಿದ್ದರು. ತುಳಿತಕ್ಕೊಳಗಾದ ರೈತರು ದಂಗೆಯೆದ್ದಾಗ, ರಾಜಸಂತತಿಯು ಅವ್ಯವಸ್ಥೆಯನ್ನು ಸರಿಪಡಿಸಲು ಹೆಚ್ಚಿನ ಹಣವನ್ನು ವೆಚ್ಚ ಮಾಡುವ ಮೂಲಕ ಹಣಕಾಸಿನ ಪರಿಸ್ಥಿತಿ ಮತ್ತಷ್ಟು ಹದಗೆಡುವಂತೆ ಮಾಡಿತು. 19 ನೇ ಶತಮಾನದ ಮಧ್ಯಭಾಗದಿಂದ ರಾಜಕೀಯ, ವಿಕೇಂದ್ರೀಕರಣದ ಸಮಸ್ಯೆಯು ದೇಶದಾದ್ಯಂತ ತೆರಿಗೆ ಸಂಗ್ರಹಣೆ ಅತ್ಯಂತ ಕಠಿಣವಾಗುವಂತೆ ಮಾಡಿತು. ಆಡಳಿತ ಅಸಮರ್ಥತೆ ಹಣಕಾಸಿನ ನಿರ್ವಹಣೆಯ ಗೊಂದಲಕ್ಕೆ ಕಾರಣವಾಯಿತು. ತನ್ನ ಹಣದ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರ ತೆರಿಗೆಗಳನ್ನು ಹೆಚ್ಚಿಸಿತು ಮತ್ತು ತನ್ನ ಹೆಚ್ಚಿನ ಹುದ್ದೆಗಳನ್ನು ಮಾರಾಟ ಮಾಡಿತು. ಹೀಗೆ ಹೆಚ್ಚಿನ ಸಾಮಾಜಿಕ ಸಂಕಷ್ಟಗಳು, ಹೆಚ್ಚಿನ ಭ್ರಷ್ಟಾಚಾರಗಳು ಹೆಚ್ಚಿನ ದಂಗೆಗಳಿಗೆ ಕಾರಣವಾದವು.

### *136.2.3 ಸೈನಿಕ ಕಾರಣಗಳು*

ಮಂಚು ಅರಸರು ಅವಲಂಭಿಸಿದ್ದ ಸೇನಾಪಡೆಗಳಲ್ಲಿ ಎರಡು ಬಗೆಗಳಿದ್ದವು: ಮಂಚುಗಳು ಚೀನಾವನ್ನು ಗೆಲ್ಲಲು ಬಳಸಿದ ಮಂಚು ಅಷ್ಟ ಧ್ವಜದ ಪಡೆಗಳು (Eight - Banner Forces): ಮತ್ತು ಮಂಚುಗಳು ಚೀನಾವನ್ನು ಪ್ರವೇಶಿಸಿದ ನಂತರ ನೇಮಕ ಮಾಡಿಕೊಂಡ ಚೀನಾದ ಹಸಿರು (ಲೂ-ಯಿಂಗ್) 19 ನೇ ಶತಮಾನದ ವೇಳೆಗೆ ಈ ಎಲ್ಲಾ ಪಡೆಗಳು ಉಪಯೋಗವಿರಲಿಲ್ಲ.

ಅಸಮರ್ಥ ಆಡಳಿತ ಮತ್ತು ಸಹಕಾರದ ಕೊರತೆ: ಸೇನಾ ಅವಿಧೇಯತೆಯ ಭಯದಿಂದ ಚಿಂಗ್ ಆಸ್ಥಾನವು ಚೀನಾದ ಒಂದು ನಿರ್ದಿಷ್ಟ ಪ್ರದೇಶದ ಸೈನ್ಯವು ವಿವಿಧ ವಿಭಿನ್ನ ಧ್ವಜದ ಸೈನಿಕರನ್ನು ಒಳಗೊಂಡಿರುವಂತೆ ಎಚ್ಚರ ವಹಿಸಿದ್ದರು. ಅಷ್ಟ ಧ್ವಜಗಳ ಸೈನಿಕರು ಪರಸ್ಪರ ವಿರೋಧಿಗಳು ಮತ್ತು ದ್ವೇಷಿಗಳಾದ್ದರಿಂದ, ಅವುಗಳ ನಡುವೆ ಸಹಕಾರ ಕುಸಿಯಿತು. ಸೇನಾ ಸಾಮರ್ಥ್ಯ ಕಡಿಮೆಯಾಯಿತು. ಕೇಂದ್ರ ನಾಯಕತ್ವದ ಕೊರತೆ ಮತ್ತು ಭ್ರಷ್ಟಾಚಾರದ ದುಷ್ಪರಿಣಾಮವಾಗಿ ಹಸಿರು ಇದೇ ಸಂಭವಿಸಿತು.

*ಸೈನಿಕರ ಬಡತನ*

ಮಂಚುಗಳ ಆಳ್ವಿಕೆಯ ಪ್ರಾರಂಭದಲ್ಲಿ ಧ್ವಜ ಸೈನಿಕರ ವೇತನವನ್ನು ನಿಗಧಿಪಡಿಸಲಾಗಿದ್ದು ನಂತರ ಹತ್ತೊಂಭತ್ತನೇ ಶತಮಾನದವರೆಗೂ ಅದು ಹಾಗೆಯೇ ಉಳಿಯಿತು. ಪರಿಣಾಮವಾಗಿ ಅವರ ಜೀವನ ಕಷ್ಟಕರವಾಯಿತು. ಆದರೂ ಧ್ವಜ ಸೈನಿಕರು ಇತರ ಕಸುಬುಗಳಲ್ಲಿ ತೊಡಗುವುದನ್ನು ಕಾನೂನು ಪ್ರತಿಬಂಧಿಸಿತು. ಹಸಿರು ಭ್ರಷ್ಟಾಚಾರ ಹೆಚ್ಚಿ ಸಹ ತನ್ನ ಹೋರಾಟದ ಶಕ್ತಿಯನ್ನು ಕಳೆದುಕೊಂಡಿತು. ಸೈನಿಕರು ಜನರನ್ನು ದೋಚತೊಡಗಿ ಸಾಮಾಜಿಕ ಅವ್ಯವಸ್ಥೆಯನ್ನು ಸೃಷ್ಟಿಸಿದರು.

### *136.2.4 ಪಾಶ್ಚಿಮಾತ್ಯ ಪ್ರಭಾವ*

ಜನಸಂಖ್ಯೆ ಒತ್ತಡವು ವಲಸೆಗೆ ಕಾರಣವಾಯಿತು ಮತ್ತು ಅಪಾರ ಜನರು ತಮ್ಮ ಜೀವನೋಪಾಯವನ್ನು ಹುಡುಕಿಕೊಂಡು ವಿದೇಶಗಳಿಗೆ ಹೋದರು. ವಿದೇಶಗಳಿಗೆ ಹೋಗಿ ನೆಲೆಸಿದ ಚೀನಿಯರು ಅಲ್ಲಿನ ಜನರ ಭಾವನೆಗಳ ಸಂಪರ್ಕಗಳಿಂದ ಪ್ರಭಾವಿತರಾದರು. ಅವರು ಪಾಶ್ಚಿಮಾತ್ಯ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ಭಾವನೆಗಳಿಂದ ಆಕರ್ಷಿತರಾದರು. ಅವರಲ್ಲಿ ಅನೇಕರು ಕ್ರಾಂತಿಕಾರಿ ಇಂತಹ ಭಾವನೆಗಳ ಪ್ರಚಾರಕ್ಕೆ ನಿಧಿಯನ್ನು ಸಂಗ್ರಹಿಸಿದರು. ಅವರು ತಮ್ಮ ದೇಶದ ಬಡತನದ ಸ್ಥಿತಿ ಮತ್ತು ಅಸಹಾಯಕತೆಯಿಂದ ಮುಜುಗರಗೊಂಡರು. ಅವರು ತಮ್ಮ ದೇಶವನ್ನು ಪಾಶ್ಚಿಮಾತ್ಯ ಮಾದರಿಯಲ್ಲಿ ಪುನರ್ ರೂಪಿಸಲು ಬಯಸಿದರು ಮತ್ತು ಆ ಉದ್ದೇಶದಿಂದ ಚೀನಾದಲ್ಲಿ ಪಾಶ್ಚಿಮಾತ್ಯ ವಿಚಾರಗಳನ್ನು ಹರಡಲು ನೆರವಾದರು. ಡಾ. ಸನ್‌ಯಾತ್‌ಸೆನ್‌ರ ಕ್ರಾಂತಿಕಾರಿ ಚಟುವಟಿಕೆಗಳು ಮತ್ತು ಚಿಂತನೆಗಳು ಚೀನೀ ವಲಸೆಗಾರರ ಹೃದಯದಲ್ಲಿ ಪ್ರತಿಕ್ರಿಯೆಯ ಅಲೆಯನ್ನು ಎಬ್ಬಿಸಿದವು. ಅವರು ಕ್ರಾಂತಿಗಾಗಿ ತಮ್ಮ ನಾಯಕನಿಗೆ ಜನ ಹಣ ಮತ್ತು ವಸ್ತುಗಳನ್ನು ಒದಗಿಸಿದರು. ಕ್ರಾಂತಿಕಾರಿ ಚಿಂತನೆಗಳನ್ನು ಹರಡುವಲ್ಲಿ ಕ್ರೈಸ್ತ ಧಾರ್ಮಿಕ ಸಂಘಗಳು

ಮತ್ತು ಅವುಗಳ ಶಾಲೆಗಳು ಪ್ರಮುಖ ಪಾತ್ರ ವಹಿಸಿದವು. ಈ ಸಂಸ್ಥೆಗಳು ಪ್ರಜಾಸತ್ತಾತ್ಮಕ ಒಲವು ಮತ್ತು ವಿಗ್ರಹಾರಾಧನೆ ವಿರೋಧಿ ಭಾವನೆಗಳನ್ನು ಪೋಷಿಸಿದವು. ಅಲ್ಲದೆ ಈ ಸಂಸ್ಥೆಗಳು ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆರಿಸಿ ಅವರನ್ನು ಸಮಾನತೆ ಮತ್ತು ಸ್ವಾತಂತ್ರ್ಯದ ಗಾಳಿಯನ್ನು ಆಹ್ವಾದಿಸುವ ಕುಡಿಯುವ ಮೂಲಕ ಅವರನ್ನು ಹಳೆಯ ಪ್ರತಿಗಾಮಿ ವ್ಯವಸ್ಥೆಯಿಂದ ಬೇರ್ಪಡಿಸಲು ಉನ್ನತ ಶಿಕ್ಷಣಕ್ಕಾಗಿ ವಿದೇಶಗಲಿಗೆ ಕಳುಹಿಸಿದರು. ಪರಿಣಾಮವಾಗಿ, ಕನ್‌ಫ್ಯೂಷಿಯಸ್ ಧರ್ಮ, ತಾವೋ ಧಮ ಮತ್ತು ಬೌದ್ಧ ಧರ್ಮಗಳ (ವಿಧಿಗಳು) ನಿಯಮಗಳು ತಮ್ಮ ಸಾಂಪ್ರದಾಯಿಕ ವಿಚಾರಗಳೊಂದಿಗೆ ಮೇಲ್ವರ್ಗದ ಜನರ ಮೇಲೆ ತಮ್ಮ ಹಿಡಿತವನ್ನು ಕ್ರಮೇಣ ಕಳೆದುಕೊಳ್ಳತೊಡಗಿದವು. ವಿದೇಶಗಳಲ್ಲಿ ವಿದ್ಯಾಭ್ಯಾಸ ಪಡೆದ ವಿದ್ಯಾರ್ಥಿಗಳು ತಮಗೆ ಸೂಕ್ತವಾದ ಸರ್ಕಾರಿ ಉದ್ಯೋಗಗಳು ದೊರೆಯದಿದ್ದಾಗ ಭ್ರಮನಿರಸನಗೊಂಡರು. ಅಸ್ತಿತ್ವದಲ್ಲಿದ್ದ ಸಾಮಾಜಿಕ, ರಾಜಕೀಯ ವ್ಯವಸ್ಥೆಯಿಂದ ಅಸಮಾಧಾನಗೊಂಡ ಅವರನ್ನು ನಿರಂತರವಾಗಿ ಬೆಳೆಯುತ್ತಿದ್ದ ಕ್ರಾಂತಿಕಾರಿ ಪ್ರಚಾರ ಆಕರ್ಷಿಸಿತು.

ಪಾಶ್ಚಿಮಾತ್ಯ ಪ್ರಭಾವದಿಂದ ಚೀನಾದಲ್ಲಿ ಅನೇಕ ಬದಲಾವಣೆಗಳಾದವು. ಪಾಶ್ಚಿಮಾತ್ಯ ವಸ್ತುಗಳು ಮತ್ತು ವಿಚಾರಗಳ ಮೂಲಕ ಚೀನಾದ ಮೇಲೆ ಪಾಶ್ಚಿಮಾತ್ಯ ಪ್ರಭಾವ ಉಂಟಾಗುವಂತೆ ಮಾಡಲಾಯಿತು. ಒಪ್ಪಂದದ ರೇವು ಪಟ್ಟಣಗಳು ಪಾಶ್ಚಿಮಾತ್ಯ ಪ್ರಭಾವದ ಅತ್ಯಂತ ಪ್ರಮುಖ ಕೇಂದ್ರಗಳಾಗಿದ್ದು, ಹೊಸ ಆರ್ಥಿಕ ಮತ್ತು ಬೌದ್ಧಿಕ ಜೀವನದಲ್ಲಿ ಭಾಗವಹಿಸಲು ಚೀನಾದ ಒಳ ಜಿಲ್ಲೆಗಳಿಂದ ಸಾಹಸೀ ಜನರನ್ನು ಆಕರ್ಶಿಸಿದವು. ಅವು ಪಾಶ್ಚಿಮಾತ್ಯ ಸಾಮಾಜಿಕ ವ್ಯವಸ್ಥೆಯ ಜೀವಂತ ಉದಾಹರಣೆಗಳಾಗಿದ್ದವು. ಪಾಶ್ಚಿಮಾತ್ಯ ಪ್ರಾಬಲ್ಯದ ಪ್ರದೇಶಗಳಾಗಿದ್ದ ಅಲ್ಲಿ ಚೀನಿ ನಾಗರೀಕರು ಪಾಶ್ಚಿಮಾತ್ಯ ಕಾನೂನು, ಆರ್ಥಿಕ ನಡವಳಿಕೆಗಳು ಮತ್ತು ಸಾಮಾಜಿಕ ಸಂಸ್ಥೆಗಳ ಅನುಭವವನ್ನು ಪಡೆಯಬಹುದಾಗಿದ್ದಿತು. ಒಪ್ಪಂದದ ಬಂದರು ಪಟ್ಟಣಗಳಲ್ಲಿ ಚೀನಾ ಮತ್ತು ಪಾಶ್ಚಿಮಾತ್ಯ ಜಗತ್ತಿನ ವಸ್ತುಗಳ ಭಾರೀ ವಿನಿಮಯ ನಡೆಯುತ್ತಿದ್ದಿತು. ಅನೇಕ ಚೀನಿಯರೇ ಅವುಗಳಲ್ಲಿ ಕೆಲವು ವಸ್ತುಗಳ ವ್ಯಾಪಾರವನ್ನು ಆರಂಭಿಸಿದರು. ಪರಿಣಾಮವಾಗಿ ವ್ಯಾಪಾರ ವ್ಯವಹಾರಗಳ ಬಗ್ಗೆ ವಿಶೇಷವಾದ ಪಾಶ್ಚಿಮಾತ್ಯ ದೃಷ್ಟಿಕೋನವನ್ನು ಹೊಂದಿದ ಚೀನಿ ವರ್ತಕರ ಒಂದು ವರ್ಗ ಬೆಳವಣಿಗೆ ಹೊಂದಿತು. 20 ನೇ ಶತಮಾನದ ಮೊದಲ ದಶಕದಲ್ಲಿ ಒಪ್ಪಂದದ ರೇವು ಪಟ್ಟಣಗಳು ಕೈಗಾರಿಕಾ ಉತ್ಪಾದನೆಯ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಲು ಪ್ರಾರಂಭಿಸಿದವು. ವಿದೇಶೀ ಹಿತಾಸಕ್ತಿಗಳು ಈ ಕೈಗಾರಿಕೀಕರಣವನ್ನು ಮೊದಲು ಪ್ರಾರಂಭಿಸಿವವು. ಅನೇಕ ಚೀನಿ ಹತ್ತಿ ಬಟ್ಟೆ ಗಿರಣಿಗಳು ಸ್ಥಾಪಿತವಾದವು. ಈ ಗಿರಣಿಗಳ ಜೊತೆಗೆ ಅಪಾರ ಸಂಖ್ಯೆಯ ರೇಷ್ಮೆ ಕಾರ್ಖಾನೆಗಳು, ಉಣ್ಣೆ ಗಿರಣಿಗಳು, ಹಿಟ್ಟಿನ ಗಿರಣಿಗಳು, ಹೊಗೆಸೊಪ್ಪಿನ ಗಿರಣಿಗಳು, ಕಾಗದದ ಕಾರ್ಖಾನೆಗಳು ಮತ್ತು ರಾಸಾಯನಿಕ ಕಾರ್ಖಾನೆಗಳು ಸ್ಥಾಪಿತವಾದವು. ಚೀನಿಯರು ಮತ್ತು ವಿದೇಶೀ ಬಂಡವಾಳದಿಂದ ಈ ಹೊಸ ಕೈಗಾರಿಕೆಗಳನ್ನು ಒಪ್ಪಂದದ ಬಂದರು ಪಟ್ಟಣಗಳಲ್ಲಿ ಸ್ಥಾಪಿಸಲಾಯಿತು. ಈ ನಗರಗಳಲ್ಲಿ ಅನೇಕ ಹೆಂಗಸರು ಮತ್ತು ಮಕ್ಕಳನ್ನೊಳಗೊಂಡ ಚೀನಾದ ಕೈಗಾರಿಕಾ ಬಲ ಕೇಂದ್ರೀಕೃತವಾಗಿದ್ದು ಕೂಲಿಕಾರರಿಗೆ ಅತ್ಯಂತ ಕಡಿಮೆ ಕೂಲಿ ನೀಡಲಾಗುತ್ತಿದ್ದಿತು. ಹೊಸ ವಾತಾವರಣದಲ್ಲಿ ಜೀವಿಸಲು ಮತ್ತು ಅಭಿವೃದ್ಧಿ ಹೊಂದತೊಡಗಿದ ಈ ಕೆಲಸಗಾರರು ಚೀನಾದ ಸರ್ಕಾರದ ಹತೋಟಿಯಿಂದ ದೂರ ಉಳಿದಿದ್ದರು. ಅಲ್ಲದೆ ಅವರ ಸಾಮಾಜಿಕ ಜೀವನದಲ್ಲಿ ಸಂಪೂರ್ಣ ಬದಲಾವಣೆವುಂಟಾಯಿತು. ಉದ್ಯೋಗಸ್ಥ ಮಹಿಳೆಯರು ಆರ್ಥಿಕವಾಗಿ ಹೆಚ್ಚು ಸ್ವತಂತ್ರರಾದರು. ಅವರು ಹೊಸ ಸಾಮಾಜಿಕ ಸ್ಥಾನವನ್ನು ಪಡೆದರು. ಇಂತಹ ಪರಿಸ್ಥಿತಿಯಿಂದ ಕನ್‌ಫ್ಯೂಷಿಯಸ್‌ನ ಕುಟುಂಬ ವ್ಯವಸ್ಥೆಯ ಪುರುಷ ಪ್ರಾಬಲ್ಯದ ಪ್ರಭುತ್ವದ ವಿರುದ್ಧ ಪ್ರತಿಭಟನೆ ತಲೆಯೆತ್ತಿತ್ತು. ಒಪ್ಪಂದದ ರೇವು ಪಟ್ಟಣಗಳಲ್ಲಿದ್ದ ಚೀನಿಯರು ಪಾಶ್ಚಿಮಾತ್ಯ ಜೀವನ ಕ್ರಮಕ್ಕೆ ಹೆಚ್ಚು ಹೆಚ್ಚಾಗಿ ಹೊಂದಿಕೊಂಡರು. ಒಪ್ಪಂದದ ರೇವು ಪಟ್ಟಣಗಳಲ್ಲಿದ್ದ ಚೀನಿ ವ್ಯಾಪಾರಸ್ಥರು ತಮ್ಮ ಮಕ್ಕಳನ್ನು ಪಾಶ್ಚಿಮಾತ್ಯ ಕ್ರೈಸ್ತ ಧಾರ್ಮಿಕ ಶಾಲೆಗಳಿಗೆ ಕಳುಹಿಸಿದರು. ಅಲ್ಲಿ ಅವರು ಆಂಗ್ಲಭಾಷೆ ಮತ್ತು ವ್ಯಾಪಾರಕ್ಕೆ ಸಿದ್ಧತೆಯಾಗಿ ಪ್ರಾಯೋಗಿಕ ಸೇವೆಗಳನ್ನು ಕಲಿತರು. ಈ ಶಾಲೆಗಳಿಂದ ಬಂದ ಅನೇಕ ವಿದ್ಯಾರ್ಥಿಗಳು ವಿದೇಶಗಳಲ್ಲಿ ಅಮೆರಿಕ, ಯುರೋಪ್ ಮತ್ತು ವಿಶೇಷವಾಗಿ ಆಧುನೀಕತೆಯಲ್ಲಿ ಚೀನಾವನ್ನು ಹಿಂದೆ ಹಾಕಿದ್ದ ಜಪಾನಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಈ ಶೈಕ್ಷಣಿಕ ಹಿನ್ನೆಲೆಯಿಂದ ಚೀನಾದ ಬುದ್ಧಿಜೀವಿಗಳ ಮೊದಲ ಗುಂಪು ಹೊರ ಬಂದಿತು.

### *136.2.5 ಆಧುನಿಕ ಚೀನಾದ ಬುದ್ಧಿ ಜೀವಿಗಳು*

ಚೀನಾದ ಆಧುನೀಕರಣಕ್ಕೆ ಆಸಕ್ತಿ ತೋರಿದ ಮತ್ತೊಂದು ಗುಂಪೆಂದರೆ ಸಮುದ್ರದಾಚೆಯ ಚೀನಿಯರು. ಚೀನಿಯರು ಫಿಲಿಪ್ಪೀನ್ಸ್, ಇಂಡೋನೇಷ್ಯ, ಇಂಡೋಚೀನ ಮತ್ತು ಥಾಯ್ಲೆಂಡ್‌ಗಳಲ್ಲಿ ಕ್ರಿಯಾಶೀಲರಾಗಿದ್ದು, ಸಿಂಗಪುರ ಚೀನಾದ ನಗರವೇ ಆಗಿತ್ತು. ಅಮೆರಿಕಾದ ಹವಾಯಿ ದ್ವೀಪದಲ್ಲಿ ಅಪಾರ ಸಂಖ್ಯೆಯ ಚೀನಿಯರಿದ್ದರು ಮತ್ತು ಅಮೆರಿಕಾದ ಪಶ್ಚಿಮ ಕರಾವಳಿಯ ನಗರಗಳಿಗೆ ಭಾರೀ ಸಂಖ್ಯೆಯ

ಚೀನಿಯರು ಬಂದರು. ಅವರಲ್ಲಿ ಅನೇಕರು ಚೀನಾ ಆಧುನೀಕರಣಗೊಳ್ಳಬೇಕೆಂದು ಬಯಸಿದ್ದರು. ಚೀನಾದ ದುರ್ಬಲತೆ ಅವರಿಗೆ ಅವಮಾನವೆನಿಸಿತ್ತಲ್ಲದೆ, ಆಗಿಂದಾಗ್ಗೆ ತಾವು ಗುರಿಯಾಗುತ್ತಿದ್ದು ತಾರತಮ್ಯದ ವಿರುದ್ಧ ಯಾವುದೇ ರಕ್ಷಣೆಯಿಲ್ಲದಂತೆ ಮಾಡಿದ್ದಿತು. ಬಂದರು ಪಟ್ಟಣಗಳು ಮತ್ತು ದೇಶದ ಹೊರಗೆ ಅನೇಕ ಚೀನೀ ಗುಪ್ತ ಸಂಘಗಳು ಶಾಖೆಗಳು ಸ್ಥಾಪಿತವಾದವು. ಚೀನಾದ ಅಂಗಡಿಗಳ ಮಾಲೀಕರು, ಕೆಲಸಗಾರರು, ವರ್ತಕರು ಮತ್ತು ಬುದ್ಧಿಜೀವಿಗಳಲ್ಲಿ, ಕೆಲವು ವೇಳೆ ಅವು ಸಂಘಗಲ ಅಥವಾ ಕಾರ್ಮಿಕ ಕಾರ್ಯನಿರ್ವಹಿಸುತ್ತಿದ್ದವು ಹಾಗೂ ಮತ್ತೆ ಕೆಲವು ಅಪರಾಧ ಚಟುವಟಿಕೆಗಳಲ್ಲಿ ತೊಡಗುವ ಮೂಲಕ ಗಲಭೆಗಳು ಮತ್ತು ಗುಂಪು ಘರ್ಷಣೆಗೆ ಕಾರಣವಾಗುತ್ತಿದ್ದವು. ಈ ಸಂಘಗಳು ದೇಶದ ಒಳಗೆ ಮತ್ತು ಹೊರಗೆ ರಾಜಕೀಯ ಚಳುವಳಿಗಳಿಗೆ ಸೂಕ್ತ ಅಸ್ತ್ರಗಳಾಗಿದ್ದವು. ಈ ಹಿನ್ನೆಲೆ ಮತ್ತು ಸಂಘಟನೆಗಳಿಂದ ಕ್ರಾಂತಿಕಾರಿ ಚಟುವಟಿಕೆಗಳು ತಮ್ಮ ಬೆಂಬಲಿಗರನ್ನು ಮತ್ತು ಹಣಕಾಸಿನ ಬೆಂಬಲವನ್ನು ಪಡೆದವು.

ಚೀನಾದ ಸಾಂಕ್ರಾಮಿಕ ಆರ್ಥಿಕ ತೊಂದರೆಗಳು ಮತ್ತು ಅಪಮಾನಗಳು ಕ್ರಾಂತಿಕಾರಿ ಭಾವನೆಗಳಿಗೆ ಶೀಘ್ರ ಗ್ರಹಿಕೆಯ ಸ್ಥಿತಿಯನ್ನು ಸೃಷ್ಟಿಸಿತು. ವ್ಯಕ್ತಿಗಳು ಮತ್ತು ಸಂಘಟಿತ ಗುಂಪುಗಳು ಸುಧಾರಣೆ ಮತ್ತು ಕ್ರಾಂತಿಗೆ ಬೊಬ್ಬೆಯಿಡತೊಡಗಿದವು. ಕ್ರಾಂತಿಕಾರಿ ಸಂಘಟನೆಗಳು ಜಪಾನಿನಲ್ಲಿ ಬಹುಮಟ್ಟಿಗೆ ಕೇಂದ್ರೀಕೃತವಾಗಿದ್ದು ಅಲ್ಲಿಂದ ಅವರು ತಮ್ಮ ಪ್ರಚಾರವನ್ನು ಕೈಗೊಂಡರು. ಕುಂಗ್-ಯು-ವೀ ಮುಂತಾದ ವ್ಯಕ್ತಿಗಳು 1898 ರಲ್ಲಿ ಸುಧಾರಣೆಗಳನ್ನು ತರಲು ಮಾಡಿದ ಪ್ರಯತ್ನಗಳ ವಿಫಲವಾದ ನಂತರ, ಕ್ರಾಂತಿಕಾರಿ ಸಂಘಟನೆಗಳು ಕ್ರಾಂತಿಯನ್ನು ಪ್ರತಿಪಾದಿಸಿದವು. ಸನ್‌ಯಾತ್‌ಸೆನರು ಅನೇಕ ಕ್ರಾಂತಿಕಾರಿ ಸಂಘಗಳನ್ನು ತುಂಗ್-ಮಿಂಗ್-ಹುಯಿಯಲ್ಲಿ ಬೆಸೆದರು. ಈ ರಹಸ್ಯ ಸಂಘಟನೆಯು ಕ್ರಾಂತಿಯ ಅನೇಕ ವಿಫಲ ಪ್ರಯತ್ನಗಳ ನಂತರ 1911 ರಲ್ಲಿ ಅಂತಿಮವಾಗಿ ಯಶಸ್ವಿಯಾಯಿತು.

### *136.2.6 ಸರ್ಕಾರದ ವಿರುದ್ಧ ದೂರುಗಳು*

ಸಮಾಜದ ಬಹುತೇಕ ಎಲ್ಲಾ ವರ್ಗಗಳು ಸರ್ಕಾರದ ವಿರುದ್ಧ ದೂರುಗಳನ್ನು ಹೊಂದಿದ್ದವು. ಸರ್ಕಾರ ತಮಗೆ ಸಾಕಷ್ಟು ಆಹಾರ, ವಸತಿ ಮತ್ತು ಉದ್ಯೋಗವನ್ನು ಒದಗಿಸದಿದ್ದುದರಿಂದ ಜನಸಾಮಾನ್ಯರು ಅಸಮಧಾನಗೊಂಡಿದ್ದರು. ಕೇಂದ್ರ ಸರ್ಕಾರವು ತಮ್ಮ ಸ್ವಾಯತ್ತತೆಯನ್ನು ಹತ್ತಿಕ್ಕಲು ಪ್ರಯತ್ನಿಸಿದ್ದರಿಂದ ಪ್ರಾಂತಗಳು ಅತೃಪ್ತವಾಗಿದ್ದವು. ವಿದ್ಯಾವಂತ ಜನರು ಉದ್ಯೋಗದ ಮಾರ್ಗಗಳನ್ನು ತಮಗೆ ತೆರೆದಿಲ್ಲವೆಂಬ ಕಾರಣದಿಂದ ಅತೃಪ್ತರಾಗಿದ್ದರು. ಹಳೆಯ ವ್ಯವಸ್ಥೆಯ ಅನುಯಾಯಿಗಳು ಪ್ರಚಲಿತವಾಗಿದ್ದ ಶಿಕ್ಷಣ ವ್ಯವಸ್ಥೆಗೆ ಬದಲಾಗಿ ಪಾಶ್ಚಿಮಾತ್ಯ ಶಿಕ್ಷಣ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರಿಂದ ಅತೃಪ್ತರಾಗಿದ್ದರು. ಪಂಡಿತರು ಮತ್ತು ವಿದ್ಯಾವಂತ ಜನರು ಎಲ್ಲಾ ಹಂತಗಳು ಮತ್ತು ಎಲ್ಲಾ ಕಾಲಗಳಲ್ಲೂ ರಾಜವಂಶ ಅಪಮಾನಕರವಾದ ಸೋಲುಗಳನ್ನನುಭವಿಸಿದ್ದರಿಂದ ಅತೃಪ್ತರಾಗಿದ್ದರು. ವರ್ತಕರು ಮತ್ತು ಭೂಮಾಲೀಕರು ಯುದ್ಧ ಪರಿಹಾರವನ್ನು ನೀಡಲು ಹಣ ಸಂಗ್ರಹಣೆಗಾಗಿ ತಮ್ಮ ಮೇಲೆ ವಿಧಿಸಿದ್ದ ಅಪಾರ ತೆರಿಗೆಯ ಹೊರೆಯಿಂದ ಅಸಮಧಾನಗೊಂಡಿದ್ದರು. ಸರ್ಕಾರ ಜಾರಿಗೆ ತಂದಿದ್ದ ಕೆಲವು ಸುಧಾರಣೆಗಳು ಒಪ್ಪಿಗೆಯಾಗದಿದ್ದುದರಿಂದ ಸೈನ್ಯವೂ ತೃಪ್ತಿಯಿಂದಿರಲಿಲ್ಲ. ಈ ರೀತಿಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಅತೃಪ್ತಿಯಿದ್ದಿತು. ಕ್ರಾಂತಿ ಆರಂಭವಾದಾಗ ಕೇವಲ ಉತ್ತರದ ಸೇನಾಪಡೆಗಳು ರಾಜವಂಶಕ್ಕೆ ವಿಧೇಯತೋಯಿಂದಿದ್ದು, ಹೆಚ್ಚಿನ ಭಾಗದ ಸೈನಿಕರು ಪಕ್ಷಾಂತರಗೊಂಡರೆಂಬ ಅಂಶವು ಸೇನೆಯಲ್ಲಿದ್ದ ಅತೃಪ್ತಿಯನ್ನು ತೋರಿಸುತ್ತದೆ.

### *136.2.7 ಕ್ರಾಂತಿಯ ತಕ್ಷಣದ ಕಾರಣ*

ಕ್ರಾಂತಿಕಾರಿಗಳು ತಮ್ಮದೇ ಆದ ರೀತಿಯಲ್ಲಿ ಅತ್ಯಂತ ಚಟುವಟಿಕೆಯಿಂದಿದ್ದರು ಮತ್ತು ಕ್ರಾಂತಿಗೆ ನೆಲೆ ಅತ್ಯಂತ ಫಲವತ್ತಾಗಿತ್ತು. ಕ್ರಾಂತಿಯನ್ನು ಹತ್ತಿರ ತರಲು ಆರಂಭಕ್ಕೆ ಕೆಲವು ಆಳವಾದ, ಗಾಢವಾದ ಕಾರಣಗಳಿದ್ದವು. ಆದರೆ ಕ್ರಾಂತಿಯ ತಕ್ಷಣದ ಕಾರಣವೆಂದರೆ ರೈಲುಮಾರ್ಗಗಳ ರಾಷ್ಟ್ರೀಕರಣ. ಪೀಕಿಂಗ್ ಸರ್ಕಾರವು ರೈಲುಮಾರ್ಗಗಳ ನಿರ್ಮಾಣವನ್ನು ಕೆಲವು ವಿದೇಶಿ ರಾಷ್ಟ್ರಗಳಿಗೆ ವಹಿಸಿಕೊಟ್ಟಿತು ಮತ್ತು ಈ ಉದ್ದೇಶಕ್ಕಾಗಿ ಕೇಂದ್ರ, ದಕ್ಷಿಣ ಮತ್ತು ನೈರುತ್ಯ ಚೀನಾಗಳಲ್ಲಿ ಖಾಸಗಿ ರೈಲುಮಾರ್ಗಗಳ ನಿರ್ಮಾಣದ ಹಕ್ಕನ್ನು ರಾಷ್ಟ್ರೀಕರಣಗೊಳಿಸಲಾಯಿತು. ಈ ವೇಳೆಗೆ ಕೆಲವು ಚೀನಿ ಬಂಡವಾಳಷಾಹಿಗಳು ರೈಲುಮಾರ್ಗಗಳ ನಿರ್ಮಾಣದ ಉದ್ದೇಶದಿಂದ ಹಣಕಾಸಿನ ನಿಗಮಗಳನ್ನು ಸ್ಥಾಪಿಸಿದ್ದರು. ಆದ್ದರಿಂದ ಸ್ಥಳೀಯ ಬಂಡವಾಳಗಾರರು ಮತ್ತು ಲೇವಾದೇವಿಗಾರರು ರಾಷ್ಟ್ರೀಕರಣವನ್ನು ವಿರೋಧಿಸಿದರು. ಅವರಿಗೆ ಪ್ರಾಂತಗಳ ರಾಜ್ಯಪಾಲರ ಬೆಂಬಲವೂ ಇದ್ದಿತು. ಅವರು ವಿದೇಶಿ ಸರ್ಕಾರಗಳಿಗೆ ರೈಲುಮಾರ್ಗಗಳ ನಿರ್ಮಾಣದ ಕೆಲಸವನ್ನು ಗುತ್ತಿಗೆ ನೀಡುವುದರಿಂದ ತಮ್ಮ ಅಧಿಕಾರ ಮತ್ತು ಸ್ವಾಯತ್ತತೆಗೆ ಧಕ್ಕೆಯುಂಟಾಗುವುದೆಂದು ಭಾವಿಸಿದರು.

ಸ್ಥಳೀಯ ಲೇವಾದೇವಿಗಾರರು ಉದ್ದೇಶಿತ ಚೆಂಗ್ತ್-ಚುಂಕಿಂಗ್ ರೈಲು ಮಾರ್ಗದ ನಿರ್ಮಾಣದ ವಿರುದ್ಧ ಪ್ರದರ್ಶನವನ್ನು ಸಂಘಟಿಸಿದ್ದರಿಂದ ಸೆಜೆಕ್ವಾನ್ ಪ್ರಾಂತದಲ್ಲಿ ಪರಿಸ್ಥಿತಿ ಹದಗೆಟ್ಟಿತು. ಪ್ರದರ್ಶನಕಾರರನ್ನು ಬಂಧಿಸಲಾಯಿತು ಮತ್ತು ಅವರ ಮೇಲೆ ಗುಂಡು ಹಾರಿಸಲಾಯಿತು. ಆದರೆ ಅಕ್ಟೋಬರ್ 10, 1911 ರಂದು ಸೇನಾ ಪಡೆಗಳು ಸಹ ಹ್ಯಾಂಕೋದಲ್ಲಿ ದಂಗೆಯೆದ್ದಾಗ ಕ್ರಾಂತಿ ದೇಶವ್ಯಾಪಿಯಾಗಿ ಆರಂಭವಾಯಿತು.

## 136.3 ಕ್ರಾಂತಿಯ ಹರಡುವಿಕೆ (ವಿಸ್ತರಣೆ)

ಅಕ್ಟೋಬರ್ 10, 1911 ರಂದು ಹುಬೈ ಪ್ರಾಂತದ ರಾಜಧಾನಿ ವುಚಾಂಗ್‌ನಲ್ಲಿ ಅತೃಪ್ತ ಆಧುನಿಕ ಸೇನಾ ಘಟಕಗಳ ಕ್ವಿಂಗ್ ವಿರೋಧಿ ಪಿತೂರಿಯನ್ನು ಪತ್ತೆ ಹಚ್ಚಿದಾಗ ಗಣರಾಜ್ಯವಾದಿಗಳ ಕ್ರಾಂತಿ ಆರಂಭವಾಯಿತು. ಈ ನಂತರ ಅನೇಕ ವಿಚಿದ್ರಕಾರಿ ದಂಗೆಗಳು ಮತ್ತು ವ್ಯವಸ್ಥಿತ ಪ್ರತಿಭಟನೆಗಳು ಚೀನಾದ ಒಳಗೆ ನಡೆದವು. ದಂಗೆಯು ಬಹುಬೇಗನ ನೆರೆಯ ನಗರಗಳಿಗೆ ಹಬ್ಬಿತು ಮತ್ತು ತುಂಗ್ ಮೆಂಗ್ ಹುಯಿಯ ಸದಸ್ಯರು ದೇಶದಾದ್ಯಂತ ವುಚಾಂಗ್ ಕ್ರಾಂತಿಕಾರಿ ಪಡೆಗಳಿಗೆ ಬೆಂಬಲವಾಗಿ ದಂಗೆಯೆದ್ದರು. ನವೆಂಬರ್ ಕಡೆಯ ವೇಳೆಗೆ 24 ಪ್ರಾಂತಗಳ ಪೈಕಿ 15 ಪ್ರಾಂತಗಳು ಕ್ವಿಂಗ್ ಸಾಮ್ರಾಜ್ಯದಿಂದ ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡವು. ಒಂದು ತಿಂಗಳ ನಂತರ ಸನ್‌ಯಾತ್‌ಸೇನ್ ಅಮೆರಿಕಾದಿಂದ ಚೀನಾಕ್ಕೆ ಹಿಂದಿರುಗಿದನು. ಅದುವರೆಗೆ ಅವನು ಕ್ರಾಂತಿಗೆ ಸಮುದ್ರದಾಚೆಯ (ವಿದೇಶಗಳಲ್ಲಿದ್ದ) ಚೀನಿಯರು ಮತ್ತು ಅಮೆರಿಕಾದ ಸಹಾನುಭೂತಿಯುಳ್ಳವರಿಂದ ನಿಧಿ ಸಂಗ್ರಹಣೆಯಲ್ಲಿ ತೊಡಗಿದ್ದನು. ಜನವರಿ 1, 1912 ರಂದು ಸನ್‌ಯಾತ್‌ಸೇನ್‌ನು ನಾನ್‌ಕಿಂಗ್‌ನಲ್ಲಿ ಹೊಸ ಚೀನಿ ಗಣರಾಜ್ಯದ ಅಧ್ಯಕ್ಷನಾಗಿ ಚೀನಾದ ಗಣರಾಜ್ಯವನ್ನು ಉದ್ಘಾಟಿಸಿದನು. ಆದರೆ ಬೀಜಿಂಗ್ ಈಗಾಗಲೇ ಸಾಮ್ರಾಜ್ಯ ಸೇನೆಯ ಪ್ರಧಾನ ದಂಡನಾಯಕನಾಗಿದ್ದ ಯೂವಾನ್ ಷಿಕಾಯಿಯ ಗತೋಟಿಯಲ್ಲಿದ್ದುದರಿಂದ ಅಂತರ್ಯುದ್ಧವನ್ನು ಮತ್ತು ಬಾಲ್ಯಾವಸ್ಥೆಯ ಗಣರಾಜ್ಯವನ್ನು ಕಡೆಗಣಿಸಿ ವಿದೇಶಿ ಹಸ್ತಕ್ಷೇಪದ ಸಾಧ್ಯತೆಯನ್ನು ತಡೆಯಲು ಸನ್‌ಯಾತ್‌ಸೇನನು ಯೂವಾನ್ ಷಿಕಾಯಿಯ ನೇತೃತ್ವದಲ್ಲಿ ಚೀನಾವನ್ನು ಒಂದುಗೂಡಿಸಲು ಅವನನ್ನು ಸರ್ಕಾರದ ಮುಖ್ಯಸ್ಥನೆಂದು ಒಪ್ಪಿಕೊಂಡು ಫೆಬ್ರವರಿ 12, 1912 ರಂದು ಕೊನೆಯ ಮಂಚು ದೊರೆ, ಬಾಲಕ ಪು.ಯಿ ಸಿಂಹಾಸನವನ್ನು ತ್ಯಜಿಸಿದನು. ಮಾರ್ಚ್ 10 ರಂದು ಬೀಜಿಂಗ್‌ನಲ್ಲಿ ಯೂವಾನ್ ಷಿಕಾಯಿಯಾ ಚೀನಾ ಗಣರಾಜ್ಯದ ಅಧ್ಯಕ್ಷನಾಗಿ ಪ್ರಮಾಣವಚನವನ್ನು ಸ್ವೀಕರಿಸಿದನು.

## 136.4 ಕ್ರಾಂತಿಯ ಪರಿಣಾಮಗಳು

ಚೀನಾದಲ್ಲಿ 267 ವರ್ಷಗಳ ಮಂಚೂಗಳ ಆಡಳಿತವನ್ನು ಕೊನೆಗೊಳಿಸಿದ 1911 ರ ಕ್ರಾಂತಿ ಬಹುಶಃ ಅನಿವಾರ್ಯವಾಗಿತ್ತು. ಅತಿಯಾದ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಸಮರ್ಥತೆ, ಅದಕ್ಷತೆ ಮತ್ತು ಕೊನೆಯದಾಗಿ ವಿದೇಶಿ ಆಕ್ರಮಣದ ವಿರುದ್ಧ ಅದರ ವಿಫಲತೆಗಳಿಂದ ಮಂಚೂ ಸಂತತಿ ಚೀನಾವನ್ನು ಆಳುವ ತನ್ನ ನೈತಿಕ ಆಧಾರವನ್ನೇ ಕಳೆದುಕೊಂಡಿತು. ಪಾಶ್ಚಿಮಾತ್ಯ ಪ್ರಭಾವದಿಂದ ಜಾಗೃತವಾಗಿದ್ದ ರಾಷ್ಟ್ರೀಯ ಚೇತನವು ಹೊರಗಿನ ಮತ್ತು ಸಾವಿನ ಹಾಸಿಗೆಯಲ್ಲಿದ್ದ ಮಂಚು ಸಂತತಿಯನ್ನು ಬಹುಕಾಲ ಸಹಿಸಿಕೊಳ್ಳಲಾಗಲಿಲ್ಲ ಮತ್ತು ಅದನ್ನು ಬಲವಂತವಾಗಿ ಅಧಿಕಾರವನ್ನು ತ್ಯಜಿಸುವಂತೆ ಮಾಡಿತು. ಮಂಚೂ ಸಂತತಿಯನ್ನು ಕ್ರಾಂತಿಕಾರಿ ಕಾರಣಗಳಿಗಿಂತಲೂ ಅದರ ಅಂತರ್ಗತ ದೌರ್ಬಲ್ಯ ಮತ್ತು ನಿರುಪಯುಕ್ತತೆಗಳಿಂದಾಗಿ ಅಧಿಕಾರದಿಂದಿಳಿಸಲಾಯಿತು. ರಾಜಪ್ರಭುತ್ವದಿಂದ ಗಣರಾಜ್ಯ ವ್ಯವಸ್ಥೆಗೆ ರಾಜಕೀಯ ಸಂಕ್ರಮಣದ ಶಾಂತಿಯುತ ಪ್ರಕ್ರಿಯೆಯು ಮೋಸವಾಗಿತ್ತು. ಚೀನ ಅನೇಕ ದಶಕಗಳ ಅವ್ಯವಸ್ಥೆ ಮತ್ತು ಅಶಾಂತಿಗಳಿಂದಾಗಿ ಗಣರಾಜ್ಯಕ್ಕೆ ಮಾರು ಹೋಯಿತು. ನಿಸ್ಸಂಶಯವಾಗಿಯೂ 1911 ರ ಕ್ರಾಂತಿಯು ತಕ್ಷಣವೇ ಚೀನಾದ ಅತ್ಯಂತ ಆಶಾದಾಯಕ ಯುಗದ ಪ್ರಾರಂಭಕ್ಕೆ ಕಾರಣವಾಗಲಿಲ್ಲ. ಆದಾಗ್ಯೂ ಅದರ ಪ್ರಾಮುಖ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅದು ಸಂಪ್ರದಾಯವಾದ, ಮಧ್ಯಕಾಲೀನವಾದ ಮತ್ತು ಕ್ಷುಲ್ಲಕ ಶಕ್ತಿಗಳ ಕೊನೆಯನ್ನು ಸೂಚಿಸುತ್ತದೆ. ಸುಮಾರು 2000 ವರ್ಷಗಳ ಕಾಲ ಬಲವಾಗಿ ಅಂಟಿಕೊಂಡಿದ್ದ ಫೋಂಗಸ್‌ನಂತಹ ರಾಜಪ್ರಭುತ್ವವನ್ನು ಚೀನಾ ತ್ಯಜಿಸಿತು. ಅದು ಹಳೆಯ ಅಡೆತಡೆಗಳನ್ನು ಮುರಿಯಿತು ಮತ್ತು ಸಂಕುಚಿತವಾದದ ದೇಶವಾಗಿದ್ದ ಚೀನಾವನ್ನು ಆಧುನಿಕ ಪ್ರಪಂಚಕ್ಕೆ ಪರಿಚಯಿಸಿತು. ಕ್ರಾಂತಿಯು ಚೀನಾವನ್ನು "ವಿಶ್ವದ ಮೂರನೇ ಪ್ರಬಲ ರಾಷ್ಟ್ರ"ವನ್ನಾಗಿ ಮಾಡಿದ ಕಾಲದ ಉದಯವನ್ನು ಉದ್ಘಾಟಿಸಿತು. ತುಂಗ್ ಮೆಂಗ್ ಹುಯಿಯ ಪರಿಷ್ಕೃತ ರೂಪವಾಗಿದ್ದ ಕುಮಿಂಟಾಂಗ್ ಪಕ್ಷ ಕ್ರಾಂತಿಯ ಅತ್ಯಮೂಲ್ಯ ಕೊಡುಗೆಯಾಗಿದ್ದು, ಅದು ಚೀನಾದ ಏಕೀಕರಣದಾರನಾದ ಚಿಯಾಂಗ್ ಕೈ ಷೆಕ್‌ನ ನಾಯಕತ್ವದಲ್ಲಿ ಚೀನಾದ ಬಹುಭಾಗವನ್ನು ಒಂದು ಭಾಗವಾಗಿ ಸಂಘಟಿಸಿತು.

ಬಹುತೇಕ ರಕ್ತರಹಿತ ಕ್ರಾಂತಿಯಾಗಿದ್ದ 1911 ರ ದಂಗೆಯು ಮಂಚೂ ವಿರೋಧಿ, ವಿದೇಶೀ ವಿರೋಧಿ ಮತ್ತು ಸಂಪ್ರದಾಯ ವಿರೋಧಿ ಲಕ್ಷಣದಿಂದ ಕೂಡಿತ್ತು. "ಮಂಚೂಗಳನ್ನು ಇಳಿಸಿ ಮಿಂಗ್‌ನ್ನು ಏರಿಸಿ" ಎಂಬುದು ದಕ್ಷಿಣದ ರಹಸ್ಯ ಸಂಘಗಳ ಘೋಷಣೆಯಾಗಿತ್ತು. ಕ್ರಾಂತಿಯ ನಾಯಕರಾಗಿದ್ದ ಡಾ. ಸನ್‌ಯಾತ್‌ಸೆನ್‌ರು ಚೀನಾದ ಕಡೆಯ ದೊರೆಯಾಗಿದ್ದ ಮಿಂಗ್ ಚಕ್ರವರ್ತಿಯ ಚೈತನ್ಯವನ್ನು ಕ್ರಾಂತಿಯು ವಿದೇಶೀಯರ ಕೈಯಲ್ಲಿ ಅವಮಾನಕ್ಕೆ ಗುರಿಯಾಗಿದ್ದ ತಮ್ಮ ದೇಶದ ಬಗ್ಗೆ ನೊಂದಿದ್ದ ರಾಷ್ಟ್ರೀಯವಾದಿಗಳ ಸಾಧನೆಯಾಗಿತ್ತು. ಆದ್ದರಿಂದ ಕ್ರಾಂತಿಯು ಚೀನಾದ ನಿರ್ದಾಕ್ಷಿಣ್ಯ ಶೋಷಣೆಯಲಿ ತೊಡಗಿದ್ದ ವಿದೇಶಿಯರ ವಿರುದ್ಧ ಗುರಿಯಾಗಿದ್ದ ಒಂದು ಸ್ಫೋಟವಾಗಿತ್ತು. ಡಾ. ಸನ್‌ಯಾತ್‌ಸೆನ್ ಜನಸಾಮಾನ್ಯರ ಮೂರು ತತ್ವಗಳಾದ (ಸ್ಯಾನ್-ಮಿನ್-ಚುಯಿ) ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಮತ್ತು ಜನಸಾಮಾನ್ಯರ ಹೊಟ್ಟೆಪಾಡು ಅಥವಾ ಸಮಾಜವಾದವು ಮುಂದಿನ ಭವಿಷ್ಯದ ಚೀನಾದ ನಿರ್ಮಾಪಕರಿಗೆ ಸೈದ್ಧಾಂತಿಕ ತಳಹದಿಯನ್ನು ಒದಗಿಸಿತು.

## 136.5 . ಮುಕ್ತಾಯ

ಈ ಘಟಕದಲ್ಲಿ ನಾವು 1911 ರ ಚೀನಾದ ಕ್ರಾಂತಿಯ ಮುಖ್ಯ ಲಕ್ಷಣಗಳನ್ನು ಗುರುತಿಸಿದೆವು. ಕ್ರಾಂತಿಯ ಕಾರಣಗಳು ಮತ್ತು ಪರಿಣಾಮಗಳಿಗೆ ಸಂಬಂಧಿಸಿದ ವಿಷಯವನ್ನು ಚರ್ಚಿಸಿದೆವು. ಅಲ್ಲದೆ 1911 ರ ಕ್ರಾಂತಿಯು ಚೀನಾದ ಇತಿಹಾಸದ ಮುಖ್ಯ ತಿರುವೆಂಬುದನ್ನು ಪರಿಶೀಲಿಸಿದೆವು. ಈ ಕ್ರಾಂತಿಯು ಮಂಚೂಗಳ ಕಾಲದವರೆಗೂ ಚೀನಾದಲ್ಲಿ ಉಳಿದುಕೊಂಡು ಬಂದಿದ್ದ ಹಳೆಯ ಊಳಿಗಮಾನ್ಯ ವ್ಯವಸ್ಥೆಯನ್ನು ಕೊನೆಗೊಳಿಸಿತು. ಕ್ರಾಂತಿಕಾರಿಗಳು ರಾಜಪ್ರಭುತ್ವ ಬೆಂಬಲಿಗರೊಂದಿಗೆ ಹೊಂದಾಣಿಕೆ ಮಾಡಿಕೊಂಡರಾದರೂ, ಕ್ರಾಂತಿಯ ಮಂಚೂ ಮನೆತನದ ಆಳ್ವಿಕೆಯನ್ನು ಕೊನೆಗೊಳಿಸಿತು. ಕ್ರಾಂತಿಯು ಮಂಚೂ ವಿರೋಧಿ, ವಿದೇಶಿ ವಿರೋಧಿ ಮತ್ತು ಸಂಪ್ರದಾಯವಾದಿಗಳ ವಿರೋಧಿಯೆಂದು ಹೇಳಲಾಗಿದೆ. ಯುವಾನ್ ಷಿಕಾಯಿಯ ಆಡಳಿತದಲ್ಲಿ ತಮ್ಮ ಹಿತಾಸಕ್ತಿಗಳ ಸುರಕ್ಷಿತವೆಂದು ಭಾವಿಸಿದ್ದರಿಂದ ವಿದೇಶಿಯರ ಈ ಹೋರಾಟದಲ್ಲಿ ತಟಸ್ಥವಾಗಿ ಉಳಿದರು. ಯುವಾನ್ ಷಿಕಾಯಿಯು ಕ್ರಾಂತಿಕಾರಿಗಳೊಂದಿಗೆ ಚಕ್ರವರ್ತಿಯ ಪ್ರಮುಖ ಸಂಧಾನಕಾರನೆಂಬುದನ್ನು ನಾವು ಚರ್ಚಿಸಿದ್ದೇವೆ. ಸಾಮ್ರಾಜ್ಯಶಾಹಿಗಳು ಮತ್ತು ಕ್ರಾಂತಿಕಾರಿಗಳಿಬ್ಬರೂ ಹಣಕಾಸಿನ ತೊಂದರೆಗಳಿಂದಾಗಿ ತಾವು ಹೋರಾಟವನ್ನು ಬಹಳ ಕಾಲ ಮುಂದುವರಿಸಲು ಸಾಧ್ಯವಿಲ್ಲವೆಂಬುದನ್ನು ಬಹುಬೇಗನ ಅರಿತುಕೊಂಡರು. ಚೀನಾದ ಚಕ್ರವರ್ತಿಯು ಅಧಿಕಾರವನ್ನು ತ್ಯಜಿಸುವಂತೆ ಮಾಡುವ ಜವಾಬ್ದಾರಿಯನ್ನು ಯುವಾನನಿಗೆ ವಹಿಸಲಾಯಿತು ಮತ್ತು ಇದಕ್ಕೆ ಪ್ರತಿಯಾಗಿ ಅವನಿಗೆ ಹೊಸ ಗಣರಾಜ್ಯದ ಅಧ್ಯಕ್ಷ ಪದವಿಯನ್ನು ನೀಡಲಾಯಿತು. ಫೆಬ್ರವರಿ 12, 1912 ರಂದು ಅವನು ಚಕ್ರವರ್ತಿಯು ಸಿಂಹಾಸನವನ್ನು ತ್ಯಜಿಸುವಂತೆ ಮಾಡಿದನು.

## 136.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ - ಉತ್ತರಗಳು

***I*** *ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.*

1. ತುಂಗ್ ಮಿಂಗ್ ಹುಯಿ
2. ಜನಸಾಮಾನ್ಯರ ಮೂರು ತತ್ವಗಳು
3. ಪು-ಯಿ
4. ಕುಮಿಂಟಾಂಗ್

***II*** *ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ.*

1. ಚೀನಾದ ಕ್ರಾಂತಿಗೆ ಕಾರಣವಾದ ವಿವಿಧ ಅಂಶಗಳನ್ನು ವಿವರಿಸಿ ಮತ್ತು ಅದರ ಪರಿಣಾಮಗಳನ್ನು ಗುರುತಿಸಿ.
2. 1911 ರ ಕ್ರಾಂತಿ ವಿಫಲವಾಯಿತೆಂದು ಪರಿಗಣಿಸಲಾಗಿದೆ. ಅದನ್ನು ನೀವು ಹೇಗೆ ವಿಶ್ಲೇಶಿಸುವಿರಿ?
3. 1911 ರ ಕ್ರಾಂತಿಯ ಸ್ವರೂಪ ಮತ್ತು ಸಾಧನೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

## 136.7 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. S.L. Roy : **A Short History of the Far East**
2. K.S. Latourette : **The Chinese, their History and Culture**
3. Immanuel .C.Y. : **The rise of Modern China**

## ಟಿಪ್ಪಣಿ

# ಘಟಕ - 137

## 1912 ರ ಗಣರಾಜ್ಯ ಮತ್ತು ಯೂವಾನ್ ಷಿಕಾಯ್

ರಚನೆ


137.0 ಉದ್ದೇಶಗಳು

137.1 ಪೀಠಿಕೆ

137.2 ಯೂವಾನ್ ಷಿಕಾಯಿಯ ಏಳಿಗೆ

137.3 ಯೂವಾನ್‌ನ ಸರ್ಕಾರ

137.4 ಯೂವಾನ್ ಮತ್ತು ಸಂಸತ್ತು

137.5 ಅಧ್ಯಕ್ಷೀಯ ಸರ್ವಾಧಿಕಾರ

137.6 ಯೂವಾನ್ ಷಿಕಾಯಿಯ ಸಾಧನೆಗಳು

137.7 ಮುಕ್ತಾಯ

137.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ - ಉತ್ತರಗಳು

137.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 137.0 ಉದ್ದೇಶಗಳು

ಈ ಘಟಕದಲ್ಲಿ ನಾವು ಗಣರಾಜ್ಯದ ಕಾಲದಲ್ಲಿ ಚೀನಾದ ಕೆಲವು ಪ್ರಮುಖ ವಿಷಯಗಳನ್ನು ಚರ್ಚಿಸಲಿದ್ದೇವೆ. 1912 ರ ಚೀನಾದಲ್ಲಿ ರಾಜಪ್ರಭುತ್ವ ಕೊನೆಗೊಂಡಿತು ಮತ್ತು ಯೂವಾನ್ ಷಿಕಾಯಿಯು ಹೊಸದಾಗಿ ಸ್ಥಾಪಿತವಾದ ಗಣರಾಜ್ಯದ ಮೊದಲ ಅಧ್ಯಕ್ಷನಾದನು. ಸನ್‌ಯಾತ್‌ಸೆನ್‌ನು ಯೂವಾನ್‌ನ ಪರವಾಗಿ ಹೊಸ ಗಣರಾಜ್ಯದ ಹಂಗಾಮಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದನು. ಆದರೆ ಗಣರಾಜ್ಯದ ಆಡಳಿತದ ಕಾಲದಲ್ಲಿ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಯೂವಾನ್ ಷಿಕಾಯಿಯ ಗಣರಾಜ್ಯಕ್ಕೆ ಪ್ರಾಮಾಣಿಕತೆಯಿಂದಿರಲಿಲ್ಲ ಮತ್ತು ಅವನು ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳಲು ಪ್ರಯತ್ನಿಸಿದನು. ಅಲ್ಲದೆ ಈ ಘಟಕದಿಂದ ನಾವು ಯೂವಾನ್ ಷಿಕಾಯಿಯ ಮಹತ್ವಾಕಾಂಕ್ಷಿಯಾಗಿದ್ದನು ಮತ್ತು ಅವನು ಸಮರ್ಥ ಅಧ್ಯಕ್ಷನಾಗಿ ಉಳಿಯುವ ಬದಲು ಬಲಿಷ್ಠ (ಪ್ರಭಾವಶಾಲಿ) ಚಕ್ರವರ್ತಿಯಾಗಲು ನಿರ್ಧರಿಸಿದನೆಂಬುದನ್ನು ತಿಳಿದೆವು. ಅವನು ಚೀನಾದಲ್ಲಿ ರಾಜಪ್ರಭುತ್ವವನ್ನು ಪುನಃ ಸ್ಥಾಪಿಸಲು ಬಯಸಿದನು. ಆದರೆ ದೇಶ ಅದಕ್ಕೆ ಸಿದ್ಧವಾಗಿರಲಿಲ್ಲ. 1914 ರಲ್ಲಿ ಮೊದಲನೆ ಮಹಾಯುದ್ಧ ಪ್ರಾರಂಭವಾಯಿತು ಮತ್ತು ಜಪಾನ್ ತನ್ನ ವಿಸ್ತರಣಾ ನೀತಿಗನುಗುಣವಾಗಿ, ತನ್ನ ಪ್ರಸಿದ್ಧ 21 ಬೇಡಿಕೆಗಳನ್ನು ಚೀನಾದ ಮುಂದಿಟ್ಟಿತು. ಅವುಗಳ ಮೂಲಕ ಜಪಾನ್ ಚೀನಾವನ್ನು ವಸಾಹತುವಿನ ಸ್ಥಾನಕ್ಕಿಳಿಸಲು ಬಯಸಿದ್ದಿತು. ಪರಿಷ್ಕರಿಸಲಾದ ರೂಪದಲ್ಲಿ ಯೂವಾಗ್ ಷಿಕಾಯ್ ಅವುಗಳನ್ನು ಒಪ್ಪಿಕೊಳ್ಳಬೇಕಾಗಿತ್ತು. ಇವುಗಳೆಲ್ಲವೂ ಅವನಿಗೆ ವಿರುದ್ಧವಾದವು ಮತ್ತು ಅವನ ವಿರುದ್ಧ ದೇಶವ್ಯಾಪಿ ಪ್ರತಿಭಟನೆ ವ್ಯಕ್ತವಾಯಿತು. ಅವನು ಮೂತ್ರಜನಕಾಂಗದ ವೈಫಲ್ಯದಿಂದ ಜೂನ್, 6, 1916 ರಂದು ಇದ್ದಕ್ಕಿದ್ದಂತೆ ಮರಣ ಹೊಂದಿದನು.

## 137.1 ಪೀಠಿಕೆ

ಚೀನ-ಜಪಾನ್' ಯುದ್ಧ ಮತ್ತು ಬಾಕ್ಸರ್ ದಂಗೆಗಳು ಚೀನಾ ಸಾಮ್ರಾಜ್ಯದ ದಿವಾಳಿತನವನ್ನು ಪ್ರದರ್ಶಿಸಿದವು. ಚಕ್ರವರ್ತಿನಿ ತ್ಸು ಷಿ ಮತ್ತು ಅವಳ ಸಂಕುಚಿತವಾದ ಗುಂಪು ಇದಾದ ನಂತರ ಸುಧಾರಣೆಯ ನೀತಿಯನ್ನು ಆರಂಭಿಸಿದರು. ಶಿಕ್ಷಣ ನೀತಿಯನ್ನು ಸಮಗ್ರವಾಗಿ ಬದಲಾಯಿಸಲಾಯಿತು. ಸೈನಿಕ ಸುಧಾರಣೆಗಳು ಜಾರಿಗೆ ಬಂದವು. ಪ್ರಮುಖ ಸಚಿವರ ಹುದ್ದೆಗಳು ಸೃಷ್ಟಿಯಾದವು. ಏಪ್ರಿಲ್ 1908 ರಲ್ಲಿ ಚಕ್ರವರ್ತಿನಿಯು ಸಂವಿಧಾನಾತ್ಮಕ ನೀತಿಗಳ ಒಂದು ಕಂತನ್ನು ಬಿಡುಗಡೆ ಮಾಡಿದಳು. ಆದರೆ ನವೆಂಬರ್ 14, 1908 ರಲ್ಲಿ ಅವಳು ಮರಣವು ಚೀನಾದಲ್ಲಿ ಮಂಚೂಗಳ ಆಳ್ವಿಕೆಯ ಅಂತ್ಯದ ಸಂಕೇತವಾಯಿತು. ನಂತರ 37 ವರ್ಷದ ಚಕ್ರವರ್ತಿ ಕುವಾಂಗ್-ಸು ನ ಅನುಮಾನಸ್ಪದ ಸಾವಿನಿಂದ ಸಂವಿಧಾನಾತ್ಮಕ ರಾಜಪ್ರಭುತ್ವವಾಗಿ ಚೀನಾದ ಬದಲಾವಣೆಯ ಉತ್ತಮ ಅವಕಾಶವೂ ಕೈ ತಪ್ಪಿತು.

1906, 1908 ಮತ್ತು 1910 ರಲ್ಲಿ ಅಲ್ಲಲ್ಲಿ ದಂಗೆಗಳು ನಡೆದವು. ಮಿಗಿಲಾಗಿ ಹದಗೆಟ್ಟ ಆರ್ಥಿಕ ಪರಿಸ್ಥಿತಿಯಿಂದ ದೇಶ ಅಪಾಯವನ್ನು ಎದುರಿಸಬೇಕಾಯಿತು. ಸೆಪ್ಟೆಂಬರ್ 1911 ರಲ್ಲಿ ಸೆಜಚುವಾನ್ ಪ್ರಾಂತದಲ್ಲಿ ದಂಗೆಯೊಂದು ನಡೆಯಿತು. ನಂತರ ವುಚಾಂಗ್ ಸೇನಾ ನೆಲೆಯಲ್ಲಿ ದಂಗೆಯುಂಟಾಗಿ ಅದು ಬಹು ಬೇಗನ ದೇಶದ ವಿವಿಧ ಭಾಗಗಳಿಗೆ ಹರಡಿತು. ಸನ್‌ಯಾತ್‌ಸೆನ್ ಬ್ರಿಟನ್ನಿನಿಂದ ಹಿಂದಿರುಗಿದ ನಂತರ ಅವನನ್ನು ಚೀನಾದ ಗಣರಾಜ್ಯದ ಹಂಗಾಮಿ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಯಿತು. ಚಕ್ರವರ್ತಿ ಕುವಾಂಗ್ ಸು ಅಧಿಕಾರವನ್ನು (ಸಿಂಹಾಸನವನ್ನು) ತ್ಯಜಿಸಿದನು. ಹೀಗೆ ಸುಮಾರು 267 ವರ್ಷಗಳ ಆಳ್ವಿಕೆಯ ನಂತರ ಮಂಚೂಗಳ ಆಳ್ವಿಕೆ ಕೊನೆಗೊಂಡಿತು.

ಸನ್‌ಯಾತ್‌ಸೆನ್‌ನು ತನಗಿಂತಲೂ ಯೂವಾನ್ ಷಿಕಾಯಿಯ ನಾಯಕತ್ವದಲ್ಲಿ ಚೀನಾ ಗಣರಾಜ್ಯದ ಐಕ್ಯತೆಯನ್ನು ಉತ್ತಮವಾಗಿ ಬಲಪಡಿಸಬಹುದೆಂಬ ನಿರೀಕ್ಷೆಯಿಂದ ಯೂವಾನ್ ಷಿಕಾಯಿಯ ಪರವಾಗಿ ಹಂಗಾಮಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದನು. ಆದರೆ ಬಹುಬೇಗನೆ ಯೂವಾನ್ ಷಿಕಾಯ್ ಮತ್ತು ಕ್ರಾಂತಿಕಾರಿಗಳ ನಡುವೆ ಬಿಕ್ಕಟ್ಟು ಆರಂಭವಾಯಿತು. ಸುಂಗ್ ಚಿಯಾವೋ ಜೆನ್ನನ ನಾಯಕತ್ವದಲ್ಲಿ ತುಂಗ್ ಮೆಂಗ್ ಹುಯಿಯ ಒಂದು ಗುಂಪು ಬ್ರಿಟಿಷ್ ಮಾದರಿಯ ಸಂಸದೀಯ ಸರ್ಕಾರ ವ್ಯವಸ್ಥೆಯನ್ನು ಪ್ರತಿಪಾದಿಸಿತು. ಈ ಧ್ಯೇಯದ ಸಾಧನೆಗಾಗಿ ಸುಂಗನು ಕುಮಿಂಟಾಂಗ್ ಪಕ್ಷವೆಂಬ ರಾಜಕೀಯ ಪಕ್ಷವನ್ನು ರಚಿಸಿದನು. ಫೆಬ್ರವರಿ 1913 ರಲ್ಲಿ ನಡೆದ ರಾಷ್ಟ್ರೀಯ ಚುನಾವಣೆಯಲ್ಲಿ ದ್ವಿಸದನ ಸಂಸತ್ತಿನಲ್ಲಿ ಕುಮಿಂಟಾಂಗ್ ಪಕ್ಷಕ್ಕೆ ಬಹುಮತ ದೊರೆಯಿತು. ಆದರೆ ಯೂವಾನನು ಸುಂಗ್ ಚಿಯಾವೋ ಜೆನ್ನನನ್ನು ಕೊಲ್ಲಿಸಿ (ಮಾರ್ಚ್ 20, 1913) ಅವನನ್ನು ತೊಡೆದು ಹಾಕಿದ್ದರಿಂದ ಸಂಸದೀಯ ಪ್ರಜಾಪ್ರಭುತ್ವದ

ಭವಿಷ್ಯ ನಾಶವಾಯಿತು. 1913 ರಲ್ಲಿ ಗಣರಾಜ್ಯದ ಬೆಂಬಲಿಗರೊಂದಿಗೆ ಅವನ ಭಿನ್ನಾಭಿಪ್ರಾಯಗಳು ಮತ್ತಷ್ಟು ಹೆಚ್ಚಿದವು. ಅವನ ಕಾಲದಲ್ಲಿ ಮಂಗೋಲಿಯ ಸ್ವತಂತ್ರವಾಯಿತು. ಅವನು ಜಪಾನಿನ 21 ಪ್ರಮುಖ ಬೇಡಿಕೆಗಳಲ್ಲಿ ಕೆಲವನ್ನು ಒಪ್ಪಿಕೊಳ್ಳಬೇಕಾಯಿತು. ಅವನು ರಾಜಪ್ರಭುತ್ವವನ್ನು ಪುನಃ ಸ್ಥಾಪಿಸಲು ಪ್ರಯತ್ನಿಸಿದನು. ಆದರೆ ಇದು ದೇಶವ್ಯಾಪಿ ವಿರೋಧವನ್ನು ಜಾಗೃತಗೊಳಿಸಿತು. ಈ ಹಂತದಲ್ಲಿ ಅವನು 1916 ರಲ್ಲಿ ಮರಣ ಹೊಂದಿದನು.

## 137.2 ಯೂವಾನ್ ಷಿಕಾಯಿಯ ಪ್ರಾಬಲ್ಯ (ಏಳಿಗೆ) - 1859-1916

ಯೂವಾನ್ ಷಿಕಾಯ್ 1859 ರಲ್ಲಿ ಹೆನಾನ್ ಪ್ರಾಂತದ ಸೆಯಾಂಗ್ ಚೆಂಗ್ ಜಿಲ್ಲೆಯಲ್ಲಿ ಜನಿಸಿದನು. ಕೊರಿಯಾದಲ್ಲಿದ್ದ ಚೀನಾದ ಸ್ಥಿರವಾದ ಪಡೆಗಳ ದಂಡನಾಯಕನಾಗಿ ಮೊದಲನೆ ಚೀನಾ-ಜಪಾನ್ ಯುದ್ಧದಲ್ಲಿ ಭಾಗವಹಿಸುವ ಮೂಲಕ ಅವನು ಪ್ರಸಿದ್ಧಿಗೆ ಬಂದನು. ಚೀನೀ ಪಡೆಗಳ ಮೇಲೆ ದಾಳಿ ನಡೆಯುವ ಸ್ವಲ್ಪ ದಿವಸಗಳ ಹಿಂದೆಯಷ್ಟೇ ಅವನನ್ನು ಬೀಜಿಂಗಿಗೆ ಪುನಃ ಕರೆಸಿಕೊಂಡಿದ್ದರಿಂದ ಅದೃಷ್ಟವಶಾತ್ ಅವನು ಯುದ್ಧದಲ್ಲಿ ಚೀನಾದ ಪಡೆಗಳ ಅಪಮಾನಕರ ಸೋಲನ್ನು ತಪ್ಪಿಸಿದನು.

ಚಕ್ರವರ್ತಿನಿ ತ್ಸು-ಷಿಗೆ ವಿಧೇಯತೆಯನ್ನು ತೋರಿಸುವ ಮೂಲಕ ಅವನು 1895 ರಲ್ಲಿ ಮೊದಲ ಹೊಸ ಸೈನ್ಯದ ದಂಡನಾಯಕನಾಗಿ ನೇಮಕಗೊಂಡನು. ಚೀನಾದ ರಕ್ಷಣಾ ನೆಲೆಗಳು ರಾಜಧಾನಿಗೆ ಹತ್ತಿರವಾಗಿದ್ದುದರಿಂದ ಮತ್ತು ಅದರ ಪರಿಣಾಮದಿಂದ ಮಂಚೂ ಆಸ್ಥಾನವು ಅವನ ಸೈನ್ಯವನ್ನೇ ಬಹಳವಾಗಿ ಅವಲಂಬಿಸಿದ್ದಿತು. ಈ ನಂಬಿಕೆಯ ಪೂರ್ಣ ಪ್ರಯೋಜನ ಪಡೆದು, ಯೂವಾನನು ಆಸ್ಥಾನಕ್ಕೆ ಅತ್ಯಂತ ಅಗೌರವದಿಂದ ನಡೆದುಕೊಳ್ಳತೊಡಗಿದನು ಮತ್ತು ತನ್ನ ಲಾಭಕ್ಕಾಗಿ ವಿವಿಧ ಪಕ್ಷಗಳ ನಡುವೆ ಪಕ್ಷ ಬದಲಾವಣೆಯಲ್ಲಿ ತೊಡಗಿದನು. ವಿಶೇಷವಾಗಿ ನೂರು ದಿವಸಗಳ ಸುಧಾರಣೆಯನ್ನು ಕೊನೆಗೊಳಿಸಿದ ದಂಗೆಯ ನಂತರ ಅವನು ಚಕ್ರವರ್ತಿಯ ಖಾಯಂ ಶಾಶ್ವತ ಶತೃವಾದನು.

ಜೂನ್ 25, 1902 ರಂದು ಅವನಿಗೆ ಬೈಯಾಂಗ್‌ನ ಸಚಿವ ಸ್ಥಾನವನ್ನು ನೀಡಲಾಯಿತು. (ಆಧುನಿಕ ಲಿಯೋನಿಂಗ್, ಹೆಬೀ ಪ್ರದೇಶಗಳು ಮತ್ತು ಷಾಂಟುಂಗ್ ಪ್ರಾಂತ) ಬಾಕ್ಸರ್ ದಂಗೆಯನ್ನು ಅಡಗಿಸಲು ವಿದೇಶಿಯರಿಗೆ ನೀಡಿದ ನೆರವಿನ ಲಾಭ ಪಡೆದು ಅವನು ತನ್ನ "ಬೈಯಾಂಗ್ ಪಡೆಗಳನ್ನು" ಚೀನಾದಲ್ಲಿ ಅತ್ಯಂತ ಬಲಿಷ್ಠ ಸೇನೆಯನ್ನಾಗಿ ಬೆಳೆಸಲು ಅನೇಕ ಸಾಲಗಳನ್ನು ಪಡೆಯುವಲ್ಲಿ ಯಶಸ್ವಿಯಾದನು. ಚಕ್ರವರ್ತಿನಿ ತ್ಸು-ಷಿ ಮತ್ತು ಚಕ್ರವರ್ತಿನಿ ಕುವಾಂಗ್ ಸು ನ ಮರಣಾನಂತರ ತಕ್ಷಣವೇ ಬಹುಶಃ ಕುವಾಂಗ್ ಸು ನ ಗುಪ್ತ ಮರಣಾಶಾಸನದ ಮೇರೆಗೆ ರಾಜಪ್ರತಿನಿಧಿ ಪು-ಫೆಂಗ್ ಅವನನ್ನು ಎಲ್ಲಾ ಹುದ್ದೆಗಳಿಂದ ಬಿಡುಗಡೆಗೊಳಿಸಿದನು. ಆದಾಗ್ಯೂ ಹೆನಾನ್‌ಗೆ ಹಿಂತಿರುಗಿದ ನಂತರ ಅವನು ತನ್ನ ಬೀಯಾಂಗ್ ಸೇನೆಗಳ ಮೇಲೆ ಅಪಾರ ಪ್ರಭಾವವನ್ನು ಉಳಿಸಿಕೊಂಡನು.

1912 ರಲ್ಲಿ ಚೀನೀ ಗಣರಾಜ್ಯದ ಸ್ಥಾಪನೆಯಲ್ಲಿ ಯೂವಾನನು ಗಂಭೀರವಾದ ಪಾತ್ರವನ್ನು ವಹಿಸಿದ್ದನು. ಆ ವೇಳೆಯಲ್ಲಿ ದಕ್ಷಿಣದ ಪ್ರಾಂತಗಳು ಚೀನಿ ಸಾಮ್ರಾಜ್ಯದಿಂದ ಸ್ವಾತಂತ್ರವನ್ನು ಘೋಷಿಸಿಕೊಂಡವು. ಆದರೆ ಉತ್ತರದ ಪ್ರಾಂತಗಳಾಗಲೀ ಯೂವಾನನ ನಿಲುವನ್ನು ಹೊಂದಿರಲಿಲ್ಲ. ಮಂಚೂ ಆಸ್ಥಾನ ಮತ್ತು ಯೂವಾನರಿಬ್ಬರೂ ಸೈನ್ಯವೆಂಬುದನ್ನು ಅರಿತಿದ್ದರು. ಆದ್ದರಿಂದ ಒಂದು ಕಡೆ ಯೂವಾನನು ಮಂಚೂ ಆಸ್ಥಾನದಿಂದ ಉನ್ನತ ರಾಜಕೀಯ ಅಂತಸ್ತನ್ನು (ಹುದ್ದೆ) ಬೇಡಿದರೆ, ಮತ್ತೊಂದು ಕಡೆ ಅವನ ಪಡೆಗಳು ವುಚಾಂಗ್‌ನ ಮೇಲೆ ದಾಳಿಗೆ ಪೂರ್ವ ಸಿದ್ಧತೆಯಾಗಿ ನವೆಂಬರ್ 1911 ರಲ್ಲಿ ಹ್ಯಾಂಕೊ ಮತ್ತು ಹನ್ಯಾಂಗ್‌ಗಳನ್ನು ವಶಪಡಿಸಿಕೊಂಡು, ಕ್ರಾಂತಕಾರಿಗಳು ಸಂಧಾನಕ್ಕೆ ಬರುವಂತೆ ಒತ್ತಡ ಹೇರಿದವು.

ಚಕ್ರವರ್ತಿ ಪುಯಿಯ ಕೈಕೆಳಗೆ ಯೂವಾನನು ಪ್ರಧಾನಿಯಾದನು ಮತ್ತು ದಂಗೆಗಳನ್ನು ಅಡಗಿಸಲು ಅವನಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಯಿತು. ಕ್ರಾಂತಿಕಾರಿಗಳುಸೈನಿಕವಾಗಿ ದುರ್ಬಲ ಸ್ಥಿತಿಯಲ್ಲಿದ್ದರು ಮತ್ತು ಒಲ್ಲದ ಮನಸ್ಸಿನಲ್ಲಿ ಯೂವಾನನೊಂದಿಗೆ ಸಂಧಾನ ಮಾಡಿಕೊಂಡರೂ ಸನ್‌ಯಾತ್‌ಸ್‌ನನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದರು. ಯೂವಾನನು ಕ್ರಾಂತಿಕಾರಿಗಳಿಗೆ ನೀಡಿದ್ದ ಭರವಸೆಯನ್ನು ಈಡೇರಿಸಿದನು ಮತ್ತು ಗಣರಾಜ್ಯದ ಅಧ್ಯಕ್ಷನಾಗಲು ಬಾಲಕ ಪುಯಿಯ ಸಿಂಹಾಸನ ತ್ಯಾಗಕ್ಕೆ ವ್ಯವಸ್ಥೆ ಮಾಡಿದನು. ತನ್ನ ಬೀಯಾಂಗ್ ಸೇನೆಯ ವಿಶ್ವಾಸನೀಯ ಅಧೀನ ದಂಡನಾಯಕರಲ್ಲೊಬ್ಬನಾದ ಕಾವೊ ಕುನ್‌ನು ಯೂವಾನನ ಆದೇಶದ ಮೇರೆಗೆ ಚಿ-ಲಿಯಲ್ಲಿ ತನ್ನ ಪ್ರಭಾವಿತ ವಲಿಯವನ್ನು ತ್ಯಜಿಸಿದಂತೆ ಒಂದು ನೆಪವನ್ನು ಒದಗಿಸಲು ಬೀಯಾಂಗ್

ಮತ್ತು ತಿಯಾನ್‌ಜಿನ್‌ಗಳಲ್ಲಿ ಒಂದು ಅಣಕು ದಂಗೆಯನ್ನು ರೂಪಿಸಿದನು. ಕ್ರಾಂತಿಕಾರಿಗಳು ಮತ್ತೊಮ್ಮೆ ಸಂಧಾನ ಮಾಡಿಕೊಂಡರು ಮತ್ತು ಬೀಜಿಂಗ್‌ನಲ್ಲಿ ಹೊಸ ಗಣರಾಜ್ಯದ ರಾಜಧಾನಿಯನ್ನು ಸ್ಥಾಪಿಸಲಾಯಿತು.

ಫೆಬ್ರವರಿ 1913 ರಲ್ಲಿ ರಾಷ್ಟ್ರೀಯ ಸಭೆಗೆ ಚುನಾವಣೆಗಳು ನಡೆದು ಅದರಲ್ಲಿ ಚೀನಾದ ರಾಷ್ಟ್ರೀಯ ಪಕ್ಷ ಅಥವಾ ಕುಮಿಂಟಾಂಗ್ ಪಕ್ಷ ಹೆಚ್ಚಿನ ಸ್ಥಾನಗಳನ್ನು ಗಳಿಸಿತು. ಕುಮಿಂಟಾಂಗ್ ಪಕ್ಷದಲ್ಲಿ ಸನ್‌ಯಾತ್‌ಸೆನ್‌ನ ಉಪ ಸಹೋದ್ಯೋಗಿಯಾಗಿದ್ದ ಸುಂಗ್ ಚಿಯಾವೋ ಜೆನ್ನನು ಸಚಿವ ಸಂಪುಟ ವ್ಯವಸ್ಥೆಯನ್ನು ಉತ್ಸಾಹದಿಂದಲೇ ಬೆಂಬಲಿಸಿದರು ಮತ್ತು ಅವನನ್ನು ಪ್ರಧಾನಿ ಹುದ್ದೆಯ ಅಭ್ಯರ್ಥಿಯೊಂದು ವ್ಯಾಪಕವಾಗಿ ಪರಿಗಣಿಸಲಾಗಿತ್ತು. ಯೂವಾನನು ಸುಂಗನನ್ನು ತನ್ನ ಅಧಿಕಾರಕ್ಕೆ ಕಂಠಕಪ್ರಾಯನೆಂದು ಪರಿಗಣಿಸಿದನು ಮತ್ತು ಮಾರ್ಚ್ 30, 1913 ರಲ್ಲಿ ಸುಂಗನ ಹತ್ಯೆಯ ನಂತರ, ಇದಕ್ಕೆ ಯೂವಾನನೇ ಕಾರಣನೆಂಬ ಉಹಾಪೋಹಗಳು ಮಾಧ್ಯಮಗಳಲ್ಲಿ ಕಾಣಿಸಿಕೊಂಡವು.

ಕುಮಿಂಟಾಂಗ್ ಪಕ್ಷ ಮತ್ತು ಯೂವಾನನ ನಡುವೆ ಉದ್ವಿಗ್ನತೆ ತೀವ್ರವಾಗಿ ಮುಂದುವರಿದು ಯೂವಾನನು ತನ್ನ ಸೇನೆಯ ಬಲದಿಂದ ಸರ್ಕಾರವನ್ನು ವಹಿಸಿಕೊಳ್ಳುವಂತೆ ಮತ್ತು ನಂತರ ರಾಷ್ಟ್ರೀಯ ಮತ್ತು ಪ್ರಾಂತೀಯ ಶಾಸನ ಸಭೆಗಳೆರಡನ್ನೂ ವಿಸರ್ಜಿಸುವಂತೆ ಪ್ರೇರೇಪಿಸಿತು. ಕುಮಿಂಟಾಂಗ್ ಪಕ್ಷವು ಯೂವಾನನ ವಿರುದ್ಧ "ಎರಡನೆ ಕ್ರಾಂತಿ" ಯನ್ನು ಯಶಸ್ವಿಯಾಗಿ ನಡೆಸಲು ಪ್ರಯತ್ನಿಸಿತು. ಆದರೆ ಸೇನೆಯ ಬೆಂಬಲದಿಂದ ಯೂವಾನನು ದಂಗೆಯನ್ನು ಸುಲಭವಾಗಿ ಅಡಗಿಸಿದನು ಮತ್ತು ಸನ್‌ಯಾತ್‌ಸೆನನೂ ಸೇರಿದಂತೆ ಕುಮಿಂಟಾಂಗ್ ಪಕ್ಷದ ನಾಯಕರು ಜಪಾನಿಗೆ ಓಡಿಹೋಗುವಂತೆ ಮಾಡಿದನು.

ನಂತರ ಯೂವಾನನು ಒಂದು ಭಾರೀ ರಾಜಕೀಯ ಅಪರಾಧವನ್ನು ಎಸಗಿದನು. ಅವನು ಹಾಂಕ್ಸಿಯನ್ ಯುಗ ಎಂಬ ಹೆಸರಿನಲ್ಲಿ ತನ್ನನ್ನು ಚೀನಾದ ಸಾಮ್ರಾಜ್ಯದ ಚಕ್ರವರ್ತಿಯಾಗಿ ಘೋಷಿಸಿಕೊಳ್ಳುವ ಮೂಲಕ ರಾಜಪ್ರಭುತ್ವವನ್ನು ಪುನಃ ಸ್ಥಾಪಿಸಿದನು. ಅವನು ಡಿಸೆಂಬರ್ 12, 1915 ರಿಂದ ಮಾರ್ಚ್ 22, 1916 ರವರೆಗೆ ಅತ್ಯಲ್ಪ ಕಾಲದವರೆಗೆ ಚೀನಾದ ಚಕ್ರವರ್ತಿಯಾಗಿದ್ದನು. ಇದನ್ನು ಕ್ರಾಂತಿಕಾರಿಗಳು ಮಾತ್ರವಲ್ಲದೆ ಬಹುಮುಖ್ಯವಾಗಿ ಯೂವಾನನ ಅಧೀನ ಸೇನಾ ದಂಡನಾಯಕನೂ ವಿರೋಧಿಸಿದರು. ಅವರು ಚೀನಾದ ಚಕ್ರವರ್ತಿಯಾಗಿ ಯೂವಾನನು ಸೈನ್ಯವನ್ನು ಅವಲಂಬಿಸದೆಯೇ ಆಳುವನೆಂದು ನಂಬಿದ್ದರು. ಸಾರ್ವತ್ರಿಕ ವಿರೋಧವನ್ನು ಎದುರಿಸಿದ ಯೂವಾನನು ಹಿಮ್ಮೆಟ್ಟಿದನು ಮತ್ತು ಕೆಲವು ತಿಂಗಳ ನಂತರ ಮರಣ ಹೊಂದಿದನು. ಯೂವಾನನ ಮರಣದೊಂದಿಗೆ ಚೀನಾದಲ್ಲಿ ಯಾವ ಮಾನ್ಯತೆ ಪಡೆದ ಕೇಂದ್ರದ ಅಧಿಕಾರವಿಲ್ಲದಂತಾಯಿತು ಮತ್ತು ಸೈನ್ಯವು ಬಹುಬೇಗನೆ ಪರಸ್ಪರ ಜಗಳದಲ್ಲಿ ತೊಡಗಿದ ಯುದ್ಧ ನಾಯಕರ ಪಡೆಗಳಾಗಿ ಹಂಚಿ ಹೋಯಿತು.

## 137.3 ಯೂವಾನನ ಸರ್ಕಾರ

1912 ರಲ್ಲಿ ನಾನ್‌ಕಿಂಗ್‌ನಲ್ಲಿ ಸಭೆ ಸೇರಿದ ಕ್ರಾಂತಿಕಾರಿ ಪಕ್ಷವು ಸಿದ್ಧಪಡಿಸಿದ ಸರ್ಕಾರದ ಹೊಸ ಯೋಜನೆಯಂತೆ, ಅದನ್ನು ಅಧ್ಯಕ್ಷನ ಮೇಲೆ ಪಾರ್ಲಿಮೆಂಟಿನ (ಸಂಸತ್ತಿನ) ಪರಮಾಧಿಕಾರವನ್ನು ಸ್ಥಾಪಿಸಲು ರೂಪಿಸಲಾಗಿದ್ದಿತು. ಹೀಗೆ ಅಧ್ಯಕ್ಷನಿಗೆ ಬದಲಾಗಿ ದ್ವಿಸದನದ ಶಾಸಕಾಂಗ ಸಭೆಗೆ ಜವಾಬ್ದಾರಿಯನ್ನು ಹೊಂದಿದ ಒಂದು ಮಂತ್ರಿಮಂಡಲಕ್ಕೆ ಅವಕಾಶ ಮಾಡಲಾಗಿತ್ತು. ಪ್ರತಿಯೊಂದು ಅಧ್ಯಕ್ಷೀಯ ಕಾಯಿದೆಗೆ ಪ್ರತಿ ಸಹಿಯ ಅವಶ್ಯಕತೆಯ ಮೂಲಕ ಅಧ್ಯಕ್ಷನನ್ನು ನಿಯಂತ್ರಿಸುವ ಕಾರ್ಯಾಂಗದ ಅಧಿಕಾರವನ್ನು ಅದು ಚಲಾಯಿಸಬೇಕಾಗಿದ್ದಿತು.

ಹೊಸದಾಗಿ ಸ್ಥಾಪಿಸಲಾಗಿದ್ದ ಗಣರಾಜ್ಯಕ್ಕೆ ತಕ್ಷಣವೇ ಎದುರಾದ ಎರಡು ಪ್ರಮುಖ ಸಮಸ್ಯೆಗಳೆಂದರೆ :

1) ಪೀಕಿಂಗ್ ಮತ್ತು ಪ್ರಾಂತಗಳಲ್ಲಿ ಹಳೆಯ ಸರ್ಕಾರ ಮತ್ತು ಆಡಳಿತ ಯಂತ್ರವನ್ನು ಪುನರ್ ರಚಿಸುವುದರ ಮೂಲಕ ಸೈನಿಕ ಹತೋಟಿಗೆ ಬದಲಾಗಿ ನಾಗರೀಕ ಹತೋಟಿಯನ್ನು ಏರ್ಪಡಿಸುವುದು ಮತ್ತು

2) ಅದಕ್ಕೆ ಬೇಕಾಗುವ ಹಣಕಾಸನ್ನು ಪೂರೈಸಲು ಮಾರ್ಗಗಳನ್ನು ಹುಡುಕುವುದು. ಎರಡನೇ ಪ್ರಮುಖ ಸಮಸ್ಯೆಯಾದ ಹಣಕಾಸಿನ ಕಡೆಗೆ ನೋಡಿದಾಗ ಪರಿಹಾರ ಅತ್ಯಂತ ಕಷ್ಟವಾಗಿತ್ತು. ರಾಷ್ಟ್ರದ ಖಜಾನೆ ಬರಿದಾಗಿತ್ತು ಮತ್ತು ಅದನ್ನು ಸಹಜ ಸ್ಥಿತಿಗೆ ತರಲು ಸ್ವಲ್ಪ ಸಮಯ ಬೇಕಾಗಿತ್ತು. ಆದ್ದರಿಂದ ಗಣರಾಜ್ಯದ ಅಧ್ಯಕ್ಷನು ತಕ್ಷಣದ ಆಡಳಿತ ಅಗತ್ಯಗಳನ್ನು

ಪೂರೈಸಲು ಸಾಲವನ್ನು ಪಡೆಯುವುದು ಅನಿವಾರ್ಯವಾಯಿತು. ಚಕ್ರವರ್ತಿಯು ಅಧಿಕಾರವನ್ನು ತ್ಯಜಿಸಿದ ನಂತರ ಸಾಲಗಳ ಮೇಲೆ ವಿಧಿಸಲಾಗಿದ್ದ ನಿಶೇಧವನ್ನು ತೆಗೆದು ಹಾಕಿರುವುದಾಗಿ ವಿದೇಶಿ ತಿಳಿಸಿದ ತಕ್ಷಣವೇ ಆರು ರಾಷ್ಟ್ರಗಳನ್ನೊಳಗೊಂಡ ಹಣಕಾಸಿನ ಸಂಸ್ಥೆಗಳ ಗುಂಪುಗಳೊಂದಿಗೆ ಬೃಹತ್ ಸಾಲಕ್ಕಾಗಿ ಮಾತುಕತೆಗಳನ್ನು ಆರಂಭಿಸಲಾಯಿತು. ರಷ್ಯ ಮತ್ತು ಜಪಾನುಗಳನ್ನು ಸೇರಿಸಿಕೊಳ್ಳಲು ಈ ಗುಂಪನ್ನು ವಿಸ್ತರಿಸಲಾಯಿತು.

## 137.4 ಯೂವಾನ್ ಮತ್ತು ಸಂಸತ್ತು

ಹೊಸದಾಗಿ ಚುನಾಯಿತವಾದ ಶಾಸನ ಸಭೆಯು ಅತ್ಯಂತ ಕಠಿಣ ಸಭೆಯಾಗಿದ್ದು ಅದರೊಂದಿಗೆ ವ್ಯವಹರಿಸಲು ಅಧ್ಯಕ್ಷನಿಗೆ ಕಷ್ಟವಾಯಿತು. 1913 ರಲ್ಲಿ ಸಮಾವೇಶಗೊಂಡ ಸಂಸತ್ತು ಕ್ರಾಂತಿಕಾರಿಗಳ ಪ್ರಾಬಲ್ಯಕ್ಕೊಳಪಟ್ಟಿದ್ದು ಅತ್ಯಂತ ಕಠಿಣವಾದ ಸಮಸ್ಯೆಯೊಂದನ್ನು ಮುಂದಿಟ್ಟಿತು. ವಿದೇಶಗಳಿಂದ ಪಡೆದ ಸಾಲದಿಂದ ಬಲವನ್ನು ಪಡೆದಿದ್ದ ಅಧ್ಯಕ್ಷನು ತನ್ನ ಅಧಿಕಾರವನ್ನು ಕ್ರೋಢೀಕರಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿದನು. ಸಂಸತ್ತು ಇದರ ವಿರುದ್ಧ ನಿರಂತರವಾದ ಹೋರಾಟವನ್ನು ನಡೆಸಿತು. ಪೀಕಿಂಗ್‌ನಲ್ಲಿ ಈ ವಿರೋಧವಿದ್ದರೂ, ಯೂವಾನನು ಪ್ರಾಂತಗಳಲ್ಲಿ ಕ್ರಮೇಣ ತನ್ನ ಮೇಲುಗೈ ಸಾಧಿಸಿದನು. ಅವನು ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ಸಾಧ್ಯವಾದ ಎಲ್ಲಾ ಮಾರ್ಗಗಳನ್ನು ಬಳಸಿಕೊಂಡನು. ಅವನು ಮಧ್ಯ ಮತ್ತು ದಕ್ಷಿಣ ಚೀನಾದ ಪಡೆಗಳಿಗೆ ಬದಲಾಗಿ ತನಗೆ ವಿಧೇಯತೆಯಿಂದಿದ್ದ ಪಡೆಗಳನ್ನು ಕ್ರಮೇಣ ನೇಮಿಸಿಕೊಂಡನು. ದೇಶದಾದ್ಯಂತ ಪರಿಸ್ಥಿತಿಯ ಬಗ್ಗೆ ತನಗೆ ವರದಿ ನೀಡಲು ಎಲ್ಲಾ ಕಡೆಗಳಲ್ಲೂ ಮಧ್ಯವರ್ತಿಗಳನ್ನು ನೇಮಿಸಿದನು. ಅವನ ವಿರೋಧಿಗಳ ಪ್ರಕಾರ ರಾಜಕೀಯ ಉದ್ದೇಶಕ್ಕೆ ಅವನು ಕೊಲೆಗಳಲ್ಲಿಯೂ ತೊಡಗಿದನು.

ಅಧ್ಯಕ್ಷನ ವಿರುದ್ಧ ಪೀಕಿಂಗ್‌ನಲ್ಲಿ ಏನನ್ನು ಮಾಡಲು ಸಾಧ್ಯವಾಗದೆ ವಿರೋಧ ಪಕ್ಷವು ಪುನಃ ಕ್ರಾಂತಿಕಾರಿ ಮತ್ತು ಹಿಂಸಾಮಾರ್ಗಗಳಿಗೆ ಇಳಿಯಿತು. ಆದಾಗ್ಯೂ ಇದು ಕೇವಲ ವಿರೋಧಿಗಳ ದೌರ್ಬಲ್ಯವನ್ನು ಮತ್ತು ಅಧ್ಯಕ್ಷನ ಬಲವನ್ನು ಪ್ರದರ್ಶಿಸಿತು. ಯೂವಾನನ ಪಡೆಗಳು ದಂಗೆಗಳನ್ನು ಅತ್ಯಂತ ಸುಲಭವಾಗಿ ಅಡಗಿಸಿದವು ಮತ್ತು ಅವನು ಅಂತಿಮವಾಗಿ ಕುಮಿಂಟಾಂಗ್ ಪಕ್ಷವನ್ನೇ ವಿಸರ್ಜಿಸಲು ಆಜ್ಞಾಪಿಸಿದನು ನಂತರ ಒಂದು ಅಧ್ಯಕ್ಷೀಯ ಸುಗ್ರೀವಾಜ್ಞೆಯ ಮೂಲಕ ಅವನು ಶಾಸನ ಸಭೆಯನ್ನು ವಿಸರ್ಜಿಸಿ ಅದರ ಸ್ಥಾನದಲ್ಲಿ ತನ್ನದೇ ಆದ ಸಮಿತಿಯನ್ನು ರಚಿಸಿದನು. ಈ ಸಮಿತಿಯು ಮೇ 1 ರಂದು ತನ್ನದೆ ಆದ ಸಂವಿಧಾನವನ್ನು ಹೊರತಂದಿತು ಮತ್ತು ಯೂವಾನನನ್ನು ಚೀನಾದ ಖಾಯಂ ಅಧ್ಯಕ್ಷನನ್ನಾಗಿ ಮಾಡಿತು. ಜನರು ಶಾಸನ ಸಭೆಯ ವಿಸರ್ಜನೆಯ ಬಗ್ಗೆ ಆಕ್ಷೇಪಣೆಯನ್ನು ಎತ್ತದೆ ಬದಲಾವಣೆಯ ಬಗ್ಗೆ ನಿರ್ಲಕ್ಷವನ್ನು ತೋರಿದರೆಂಬುದನ್ನು ನಾವು ಗಮನಿಸಬಹುದಾಗಿದೆ. ಸಂಸತ್ತನ್ನು ಸಮರ್ಥಿಸಿಕೊಳ್ಳುತ್ತ ಅದು ಅನುಭವವಿಲ್ಲದ ಯುವಕರ ಹತೋಟಿಯಲ್ಲಿದ್ದಿತೆಂದು ಹೇಳಬಹುದಾಗಿದೆ.

*ಅಧ್ಯಕ್ಷೀಯ ಸರ್ವಾಧಿಕಾರ*

ಶಾಸಕಾಂಗ ಸಭೆಯನ್ನು ವಿಸರ್ಜಿಸಿದ ನಂತರ, ಗಣರಾಜ್ಯದ ಆಳ್ವಿಕೆಯ ತನ್ನದೇ ಆದ ಕಲ್ಪನೆಯನ್ನು ಸಾಕಾರಗೊಳಿಸಲು ಮುಂದಾದನು. ಅಧ್ಯಕ್ಷನಿಗೆ ನಿಷ್ಠೆಯನ್ನು ಹೊಂದಿದ್ದ ಸಂವಿಧಾನ ಸಮಿತಿಯು ಹೊಸ ವ್ಯವಸ್ಥೆಗೆ ಸಂವಿಧಾನ ಬದ್ಧ ಸ್ಥಾನಮಾನವನ್ನು ನೀಡುವ ಉದ್ದೇಶದಿಂದ ನಾನ್‌ಕಿಂಗ್ ಸಂವಿಧಾನಕ್ಕೆ ಸಲಹೆ ಮಾಡಿತು. ಅದು ಸುಧೀರ್ಘ ಸಂವಿಧಾನವನ್ನು ರಚಿಸಿತು. ಅದು ಚೀನಾದ ಎರಡನೇ ತಾತ್ಕಾಲಿಕ ಗಣರಾಜ್ಯದ ಸಂವಿಧಾನವಾಗಿದ್ದು ಅಧ್ಯಕ್ಷನ ಕೈಯಲ್ಲಿ ಕೇಂದ್ರೀಕೃತವಾಗಿದ್ದವು ಮತ್ತು ತನ್ನ ಅಧಿಕಾರಾವಧಿಯನ್ನು ವಿಸ್ತರಿಸುವ ಅಥವಾ ತನ್ನ ಉತ್ತರಾಧಿಕಾರಿಯನ್ನು ಸೂಚಿಸುವ ಅಧಿಕಾರವನ್ನು ಅಧ್ಯಕ್ಷನಿಗೆ ನೀಡಿದ್ದವು. ಮಂತ್ರಿ ಮಂಡಲದ ಸ್ಥಾನವನ್ನು ಅಧ್ಯಕ್ಷನು ನೇಮಿಸಿದ ಮತ್ತು ಅವನಿಗೆ ಜವಾಬ್ದಾರಿಯಾಗಿದ್ದ ಕಾರ್ಯದರ್ಶಿಯು ಆಕ್ರಮಿಸಿದನು. ಶಾಸಕಾಂಗ ಸಭೆಗೆ ಕೇವಲ ಸಲಹಾ ಅಧಿಕಾರವನ್ನು ನೀಡಲಾಯಿತು.

ಆದರೆ ಇದನ್ನು ವಿರೋಧಿಸುವ ವಿದೇಶಿ ಶತೃಗಳು ಮತ್ತು ಆಂತರಿಕ ವಿರೋಧಿಗಳು ಇದ್ದರು. ಮಂಗೋಲಿಯಾದಲ್ಲಿ ಗಲಭೆ ಉಂಟಾಯಿತು. ಚೀನಿ ಅರಸರ ವಿರುದ್ಧ ರಷ್ಯಾದ ಸಕ್ರಿಯ ಪಿತೂರಿಯೂ ನಡೆದಿದ್ದಿತು. ಮೊದಲನೆ ಮಹಾಯುದ್ಧ ಆರಂಭವಾಗಿ ಯುದ್ಧದಲ್ಲಿ ಜಪಾನ್ ಭಾಗವಹಿಸಿದ್ದರಿಂದ ಗಂಭೀರ ಪರಿಸ್ಥಿತಿ ತಲೆದೋರಿತು. ಇದು ಜಪಾನಿನ ಬಗ್ಗೆ ವ್ಯಾಪಕ ಹಗೆತನವನ್ನು ತಲೆಯೆತ್ತುವಂತೆ ಮಾಡಿತು ಮತ್ತು ಅಧ್ಯಕ್ಷನಿಗೆ ಸಂಘಟಿತ ಬೆಂಬಲ ಬೆಳೆಯಿತು. ಮಾತುಕತೆಗಳ ಸಮಯದಲ್ಲಿ ಜಪಾನ್ ರಾಜಪ್ರಭುತ್ವದ

ಮರು ಸ್ಥಾಪನೆಗೆ ಸಹಾನುಭೂತಿಯನ್ನು ಹೊಂದಿರುವುದೆಂದು ಯೂವಾನನಿಗೆ ಸೂಚಿಸಿದಂತೆ ಕಂಡುಬಂದಿತು. ಯೂವಾನನು ಈ 'ರಾಜಪ್ರಭುತ್ವದ ಸಲಹೆಯನ್ನು' ತನ್ನ ಪರವಾದ ಅಭಿಪ್ರಾಯದ ಪ್ರಕಟಣೆಯೆಂದು ಪರಿಗಣಿಸಿದನು ಮತ್ತು ಇದು ಒಂದು ಹೊಸ ರಾಜಸಂತತಿಯ ಸ್ಥಾಪನೆಗೆ ಅವನಿಗೆ ಒಂದು ಅವಕಾಶವನ್ನು ಒದಗಿಸಿತು. ಹೀಗೆ ರಾಜಪ್ರಭುತ್ವದ ಮರುಸ್ಥಾಪನೆಯ ಪರವಾದ ಸಕ್ರಿಯ ಪ್ರಚಾರವನ್ನು 1915 ರಲ್ಲಿ ಅವನ ನಿಕಟವರ್ತಿಗಳು ಕೈಗೊಂಡರು.

ನಂತರ ಯೂವಾನನು ಒಂದು ಮಹಾ ರಾಜಕೀಯ ಅಪರಾಧವನ್ನು ಎಸಗಿದನು. ಅವನು ರಾಜ ಪ್ರಭುತ್ವವನ್ನು ಪುನಃ ಜಾರಿಗೆ ತಂದನು. ಡಿಸೆಂಬರ್ 12, 1915 ರಿಂದ ಮಾರ್ಚ್ 22, 1916 ರ ಅಲ್ಪ ಅವಧಿಯ ಹಾಂಗ್ಸಿಯಾನ್ ಯುಗದ ಹೆಸರಿನಲ್ಲಿ ಅವನು ತನ್ನನ್ನು ಚೀನಾ ಸಾಮ್ರಾಜ್ಯದ ಚಕ್ರವರ್ತಿಯೆಂದು ಘೋಷಿಸಿಕೊಂಡನು. ಇದಕ್ಕೆ ತೀವ್ರವಾದ ಪ್ರತಿಭಟನೆ ವ್ಯಕ್ತವಾಯಿತು. ಈ ನಡುವೆ ಯೂವಾನನು 1916 ರಲ್ಲಿ ಮರಣ ಹೊಂದಿದನು. ಯೂವಾನನ ಮರಣದೊಂದಿಗೆ ಚೀನಾದಲ್ಲಿ ಎಲ್ಲರ ಮಾನ್ಯತೆ ಪಡೆದ ಕೇಂದ್ರ ಸರ್ಕಾರವೊಂದು ಇಲ್ಲದಂತಾಯಿತು ಮತ್ತು ಸೇನೆಯು ಪರಸ್ಪರ ಕಚ್ಚಾಟದಲ್ಲಿ ತೊಡಗಿದ್ದ ಸೈನಿಕ ನಾಯಕರ ನಡುವೆ ಹಂಚಿಹೋಯಿತು.

## 137.6 ಯೂವಾನ್ ಷಿಕಾಯಿಯ ಸಾಧನೆಗಳು

ಫೆಬ್ರವರಿ 1912 ರಲ್ಲಿ ಮಂಚೂಗಳು ಅಧಿಕಾರವನ್ನು ತ್ಯಜಿಸಿದ ಎರಡು ದಿವಸಗಳ ನಂತರ ಡಾ. ಸನ್‌ಯಾತ್‌ಸೆನರು ಗಣರಾಜ್ಯದಲ್ಲಿ ಐಕ್ಯತೆ ಮತ್ತು ಶಾಂತಿಯನ್ನು ಕಾಪಾಡುವ ನಿರೀಕ್ಷೆಯಿಂದ ತನ್ನ ಹಂಗಾಮಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಯೂವಾನ್ ಷಿಕಾಯ್ ಹೊಸ ಗಣರಾಜ್ಯದ ಅಧ್ಯಕ್ಷನಾದನು ಮತ್ತು ಅವನು ಪೀಕಿಂಗ್‌ನನ್ನು ರಾಜಧಾನಿಯನ್ನಾಗಿ ಉಳಿಸಿಕೊಂಡನು. ಅದನ್ನು ಪಿಂಪಿಂಗ್ ಎಂದು ಮರುನಾಮಕರಣ ಮಾಡಲಾಯಿತು.

1913 ರಲ್ಲಿ ಬ್ರಿಟನ್, ಫ್ರಾನ್ಸ್, ಜರ್ಮನಿ, ಜರ್ಮನಿ ಮತ್ತು ಝಾರನ ರಷ್ಯಗಳು ಐದು ರಾಷ್ಟ್ರಗಳ ಒಂದು ತಾತ್ಕಾಲಿಕ ಒಕ್ಕೂಟವನ್ನು ರಚಿಸಿಕೊಂಡು ಯುವಾನ್ ಷಿಕಾಯಿಯ ಪ್ರತಿಗಾಮಿ ಸರ್ಕಾರವನ್ನು ಬೆಂಬಲಿಸಲು ಬೃಹತ್ ಪ್ರಮಾಣದ ವಿಷಯಗಳನ್ನು ನೀಡಿದವು. ಯುವಾನನು ಸಾಲದ ಷರತ್ತುಗಳಾಗಿ ಚೀನಾದ ಹಣಕಾಸಿನ ವಿಷಯಗಳನ್ನು ಐದು ರಾಷ್ಟ್ರಗಳ ಒಕ್ಕೂಟಕ್ಕೆ ವಹಿಸುವ ಭರವಸೆ ನೀಡಿದನು. ಯುವಾನನು ಮುಖ್ಯವಾಗಿ ತನ್ನ ಸೈನ್ಯವನ್ನು ವಿಸ್ತರಿಸುವ ಮತ್ತು ಇಡೀ ದೇಶದ ಮೇಲೆ ತನ್ನ ಪ್ರತಿಗಾಮಿ ಆಳ್ವಿಕೆಯನ್ನು ಹೇರುವ ಉದ್ದೇಶಗಳಿಗೆ ಈ ಸಾಲವನ್ನು ಬಳಸಿಕೊಂಡನು.

ಅದೇ ವರ್ಷ ಗಣರಾಜ್ಯದ ಪರಿಷ್ಕೃತ ಹೊಸ ಸಂವಿಧಾನವನ್ನು ಘೋಷಿಸಲಾಯಿತು. ಅದು ಮತದಾನಕ್ಕೆ ಆಸ್ತಿಯ ಅರ್ಹತೆಯನ್ನು ಒಳಗೊಂಡಿದ್ದು, ಬಹುಸಂಖ್ಯಾತ ಜನರಿಗೆ ಮತಧಾನದ ಹಕ್ಕನ್ನು ನಿರಾಕರಿಸುವುದಾಗಿದ್ದಿತು. ಅದು ಭೂಮಾಲೀಕತ್ವವನ್ನು ಸಮಾನಗೊಳಿಸುವ ಪ್ರಶ್ನೆಯನ್ನು ಕಡೆಗಣಿಸಿತು. ಅದು ಪುರುಷರು ಮತ್ತು ಸ್ತ್ರೀಯರ ನಡುವೆ ಸಮಾನತೆಯ ಅವಕಾಶವನ್ನು ಹಿಂತೆಗೆದುಕೊಂಡಿತು. ವಾಸ್ತವವಾಗಿ, ದೊರೆಯ ಹೆಸರಿನ ಹೊರತಾಗಿ, ಸ್ವಲ್ಪವೇ ಬದಲಾವಣೆಯನ್ನು ಮಾಡಲಾಯಿತು. ಹಿಂದಿನಂತೆಯೇ ರಾಜಸಂತತಿಯ ಬದಲಾವಣೆಯ ಮೂಲಭೂತ ಸಮಸ್ಯೆಗಳು ಬಗೆಹರಿಯದಂತೆ ಉಳಿಸಿತು. ಕೃಷಿ ಸಮಸ್ಯೆ, ಆಸೆಬುರುಕ ದುರಾಸೆಯ ಭೂಮಾಲೀಕರು ನಿರ್ದಯಿ ಅಧಿಕಾರಿಗಳು ಮತ್ತು ನಿರ್ಗತಿಕ ರೈತರು ಹಾಗೇ ಉಳಿದರು. ಮಿಗಿಲಾಗಿ ಗಣರಾಜ್ಯವು ಚೀನಾದ ಸಂಪನ್ಮೂಲಗಳನ್ನು ವಿದೇಶಿ ಬಡ್ಡಿಗೆ ಅಡವಿಡುವುದನ್ನು ಮುಂದುವರಿಸಿತು. ಅಲ್ಲದೆ ಅದು ಸೇನೆಯ ನಾಯಕ ಯಾವಾಗ್ ಷಿಕಾಯಿಯು ತನ್ನದೇ ಆದ ರಾಜಸಂತತಿಯನ್ನು ಸ್ಥಾಪಿಸಲು ಅವಕಾಶವನ್ನು ಕಲ್ಪಿಸಿತು. ಅವನು ಸೈನಿಕ ಸರ್ವಾಧಿಕಾರಿಯಾದನು. ಬಾಡಿಗೆ ಮತ್ತು ತೆರಿಗೆಗಳ ಸಂಗ್ರಹವನ್ನು ಜಾರಿಗೊಳಿಸಲು ತನ್ನ ದಂಡನಾಯಕರು ಮತ್ತು ಸೈನ್ಯವನ್ನು ಬಳಸಿಕೊಂಡನು. ಹತ್ಯೆಯ ಮೂಲಕ ರಾಜಕೀಯ ವಿರೋಧಿಗಳನ್ನು ತೊಡೆದು ಹಾಕಿದನು ಮತ್ತು ಇತರ ವಿರೋಧವನ್ನು ಖಡ್ಗದ ಬಲದಿಂದ ಬಹುಬೇಗನೆ ಅಡಗಿಸಿದನು. ಯೂವಾನ್ ಷಿಕಾಯಿಯ ವೈಯುಕ್ತಿಕ ಮಹದಾಸೆಗಳು ಬಹಿರಂಗಗೊಳ್ಳಲು ಬಹಳ ಕಾಲ ಹಿಡಿಯಲಿಲ್ಲ. 1914 ರ ಪ್ರಾರಂಭದ ವೇಳೆಗೆ, ಅವನನ್ನು ಆಜೀವಪರ್ಯಂತ ಅಧ್ಯಕ್ಷನನ್ನಾಗಿ ಮಾಡಲು ಮತ್ತು ಹುದ್ದೆಯನ್ನು ವಂಶಪಾರಂಪರ್ಯವಾಗುವಂತೆ ಮಾಡುವ ಮೂಲಕ ತನ್ನ ಮಗನಿಗೆ ಸಿಗುವಂತೆ ಮಾಡಲು, ಸಂವಿಧಾನವನ್ನು ಬದಲಾಯಿಸಲಾಯಿತು. ಮಂತ್ರಿಮಂಡಲದ ಜಾಗದಲ್ಲಿ ಅಧ್ಯಕ್ಷನಿಂದ ನೇಮಕಗೊಂಡು ಅಧ್ಯಕ್ಷನಿಗೆ ಜವಾಬ್ದಾರನಾದ ರಾಜ್ಯದ ಕಾರ್ಯದರ್ಶಿಯನ್ನು ನೇಮಿಸಲಾಯಿತು. ಹಾಗೆಯೇ ಎಲ್ಲಾ ಇಲಾಖೆಗಳು ಮತ್ತು ಮಂಡಳಿಗಳನ್ನು ಬದಲಾಯಿಸಲಾಯಿತು. ಶಾಸಕಾಂಗ ಸಭೆಗೆ ಸಲಹೆಯ ಅಧಿಕಾರಗಳನ್ನು ಮಾತ್ರವೇ ನೀಡಲಾಯಿತು.

ಯೂವಾನನ ಅಧಿಕಾರವು ಯಾಂಗ್ಟ್ಸಿಯ ಉತ್ತರದಲ್ಲಿ ನೆಲೆಗೊಳಿಸಲಾಗಿದ್ದ ಉತ್ತರದ ಚೀನಾದ ಸೇನೆಯ ಮೇಲಿನ ಅವನ ಹಿಡಿತವನ್ನು ಅವಲಂಬಿಸಿತ್ತು ಮತ್ತು ಯೂವಾನನಿಗೆ ಆ ಪ್ರದೇಶದ ತೆರಿಗೆಗಳನ್ನು ಖಾತ್ರಿಗೊಳಿಸಿತು. ಒಮ್ಮೆ ಅಧಿಕಾರವನ್ನು ಭದ್ರವಾಗಿ ಸ್ಥಾಪಿಸಿದ ನಂತರ ಯೂವಾನನು ಉತ್ತರ ಚೀನಾದ ಅಧಿಕಾರಿಗಳು ಮತ್ತು ವ್ಯಾಪರಸ್ಥರ ಬೆಂಬಲವನ್ನು ಪಡೆದನು. ಅಧ್ಯಕ್ಷನಾಗಿ ಯೂವಾನ್ ಷಿಕಾಯಿಯು ವಿದೇಶಿ ರಾಷ್ಟ್ರಗಳ ಬೆಂಬಲವನ್ನು ಸಹ ಗಳಿಸಿದನು. ವಿದೇಶಿ ಪ್ರತಿನಿಧಿಗಳ ಮತ್ತು ವ್ಯಾಪಾರಸ್ಥರ ವರ್ಗಗಳು ಯೂವಾನನ್ನು ಬಲಿಷ್ಠ ವ್ಯಕ್ತಿಯೆಂದು ಪರಿಗಣಿಸಿದರು. ಆದರೆ ಅವರು ತಮ್ಮ ವಾಣಿಜ್ಯ ಮತ್ತು ಇತರ ಹಿತಾಸಕ್ತಿಗಳನ್ನು ಬೆಳೆಸಿಕೊಳ್ಳಲು ಅಗತ್ಯವಾಗಿದ್ದ ಶಾಂತಿ ಮತ್ತು ಸುವ್ಯವಸ್ಥೆಯನ್ನು ಪುನಃ ಸ್ಥಾಪಿಸುವಲ್ಲಿ ಅವನು ವಿಫಲನಾದನು.

ಹೀಗೆ 1914 ನೇ ವರ್ಷದ ಪ್ರಾರಂಭದಲ್ಲಿ ರಾಜಕೀಯ ವಿಚಾರದಲ್ಲಿ ಚೀನಾ 1909 ರಲ್ಲಿದ್ದ ಸ್ಥಾನಕ್ಕೆ ಹಿಂತಿರುಗಿತೆಂಬುದು ಸ್ಪಷ್ಟವಾಗಿತ್ತು. ಮುಖ್ಯ ವ್ಯವಸ್ಥೆಯೆಂದರೆ ಚೀನಾ ದುರ್ಬಲ ದೊರೆಗೆ ಬದಲಾಗಿ ಸರ್ವಾಧಿಕಾರಿ ಅಧ್ಯಕ್ಷನನ್ನು ಹೊಂದಿತ್ತು.

ಯೂವಾನನು ತನ್ನ ವೈಯುಕ್ತಿಕ ಬಯಕೆಯನ್ನು ತಣಿಸುವುದಕ್ಕಿಂತಲೂ ಹೆಚ್ಚಿನದಲ್ಲಿ ಬಯಸಿದ್ದನು. ಸಂವಿಧಾನಾತ್ಮಕ ರಾಜಪ್ರಭುತ್ವದ ಅವನ ಯೋಜನೆಯು ಚೀನಾದ ರಾಜಕೀಯ ವ್ಯವಸ್ಥೆಯ ಮರುಹೊಂದಾಣಿಕೆಯ ಗಂಭೀರ ಕಾರ್ಯಕ್ರಮವನ್ನು ಒಳಗೊಂಡಿತ್ತು. ಯೂವಾನನು ಕಣ್ಮರೆಯಾಗಿದ್ದ ಹಿಂದಿನ ರಾಜಪ್ರಭುತ್ವದ ಸಂಸ್ಥೆಗಳ ಜಾಗದಲ್ಲಿ ಆಧುನಿಕ ಕಾನೂನು ವ್ಯವಸ್ಥೆಯನ್ನು ಜಾರಿಗೆ ತರುವ ಉದ್ದೇಶವನ್ನು ಹೊಂದಿದ್ದನು. ಆದ್ದರಿಂದ ಅವನು ಪಾಶ್ಚಿಮಾತ್ಯ ಮಾದರಿಯ ಸಂವಿಧಾನಾತ್ಮಕ ರಾಜಪ್ರಭುತ್ವವನ್ನು ಸ್ಥಾಪಿಸುವ ಪಾಶ್ಚಿಮಾತ್ಯ ಕಾನೂನು ಸಂಹಿತೆಗಳ ಕರಡನ್ನು ಸಿದ್ಧಪಡಿಸುವಂತೆ ಆಜ್ಞಾಪಿಸಿದನು. ರಾಜಪ್ರಭುತ್ವವನ್ನು ಪುನರ್ ಸ್ಥಾಪಿಸಿದ ಅವನು, ಡಿಸೆಂಬರ್ 12, 1915 ರಿಂದ ಮಾರ್ಚ್ 22, 1916 ರವರೆಗಿನ ಅಲ್ಪ ಕಾಲದ ಹೊಂಗ್ಸಿಯನ್ ಯುಗದ ಹೆಸರಿನಲ್ಲಿ ತನ್ನನ್ನು ಚೀನಾದ ಸಾಮ್ರಾಜ್ಯದ ಚಕ್ರವರ್ತಿಯೆಂದು ಘೋಷಿಸಿಕೊಂಡನು. ಇದನ್ನು ಕ್ರಾಂತಿಕಾರಿಗಳೇ ಅಲ್ಲದೆ, ಪ್ರಮುಖವಾಗಿ ಯೂವಾನನ ಅಧೀನ ಸೈನಿಕ ದಂಡನಾಯಕರೇ ವಿರೋಧಿಸಿದರು. ಅವರು ಯೂವಾನನ ರಾಜಪ್ರಭುತ್ವದ ಸ್ಥಾಪನೆಯು ಸೇನೆಯ ಬೆಂಬಲವನ್ನು ಅವಲಂಬಿಸಿದೆ. ಅವನು ಆಳಲು ಅವಕಾಶವಾಗುವುದೆಂದು ನಂಬಿದರು. ಸಾರ್ವತ್ರಿಕ ವಿರೋಧವನ್ನು ಎದುರಿಸಿದ ಯೂವಾನನು

## 137.7 ಮುಕ್ತಾಯ

ಈ ಘಟಕದಲ್ಲಿ ನಾವು 1911 ರ ಕ್ರಾಂತಿಯ ನಂತರ ಚೀನಾ ಗಣರಾಜ್ಯದಲ್ಲಿ ಯೂವಾನ್ ಪಾತ್ರವನ್ನು ಗುರುತಿಸಿದ್ದೇವೆ. 1912 ರಲ್ಲಿ ಚೀನಾದಲ್ಲಿ ರಾಜಪ್ರಭುತ್ವ ಕೊನೆಗೊಂಡಿತು ಮತ್ತು ಯೂವಾನನು ಹೊಸ ಗಣರಾಜ್ಯದ ಮೊದಲ ಅಧ್ಯಕ್ಷನಾದನು. ಅವನ ಪರವಾಗಿ ಸನ್‌ಯಾತ್‌ಸೆನನು ರಾಜೀನಾಮೆ ನೀಡಿದನು. ರಾಷ್ಟ್ರೀಯ ಸಭೆ ಮತ್ತು ಸಮಿತಿಯನ್ನು ತನ್ನ ಕಡೆಗೆ ಒಲಿಸಿಕೊಂಡ ಅವನು ಅವರು ತನ್ನನ್ನು 10 ವರ್ಷಗಳ ಅವಧಿಗೆ ದೇಶದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲು ಒಪ್ಪಿಕೊಳ್ಳುವಂತೆ ಮಾಡಿದನು. ಚೀನಾದ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಅವನು ಸಿದ್ಧವಾದ ಪರಿಹಾರವನ್ನು ಹೊಂದಿದ್ದು ವಿದೇಶೀ ಲೇವಾದೇವಿಗಾರರಿಂದ ಸಾಲವನ್ನು ಪಡೆದನು. ಅವನು ಮಿತಿ ಮೀರಿದ ಆಸೆಯುಳ್ಳವನಾಗಿದ್ದನು. ಆದರೆ ಗಣರಾಜ್ಯದ ಆಡಳಿತದ ಕಾಲದಲ್ಲಿ ಅಧಿಕಾರಾವಧಿಯಲ್ಲಿ ಪರಿಸ್ಥಿತಿ ಸುಲಭವಾಗಿರಲಿಲ್ಲ. ಯೂವಾನನು ಗಣರಾಜ್ಯದ ಉದ್ದೇಶಗಳಿಗೆ ಪ್ರಾಮಾಣಿಕತೆಯುಳ್ಳವನಾಗಿರಲಿಲ್ಲ. ಅವನು ರಾಜಪ್ರಭುತ್ವದ ಪುನರ್ ಸ್ಥಾಪನೆಗೆ ಸಲಹೆ ನೀಡಿದನು. ಈ ಘಟಕವು ಮೊದಲನೆ ಮಹಾಯುದ್ಧದ ಆರಂಭದ ಬಗ್ಗೆಯೂ ತಿಳಿಸುತ್ತದೆ ಮತ್ತು ಕಡೆಯ ಹಂತದಲ್ಲಾದರೂ ಚೀನಾ ಯುದ್ಧದಲ್ಲಿ ಭಾಗವಹಿಸಲು ನಿರ್ಧರಿಸಬೇಕಾಯಿತು. ಜಪಾನ್ ಸಹ ತನ್ನ 21 ಬೇಡಿಕೆಗಳನ್ನು ಚೀನಾದ ಮುಂದಿರಿಸಿತು. ಕೆಲವು ಮಾರ್ಪಾಡುಗಳೊಂದಿಗೆ ಯೂವಾನನು ಅವುಗಳನ್ನು ಒಪ್ಪಿಕೊಳ್ಳಬೇಕಾಯಿತು.

ಅಲ್ಲದೆ, ನಾವು ಈ ಘಟಕದಲ್ಲಿ ಯೂರೋಪ್ ಯುದ್ಧದ ದವಡೆಯಲ್ಲಿದ್ದಾಗ ಪೀಕಿಂಗ್‌ನಲ್ಲಿ ಏರ್ಪಡಿಸಿದ್ದ ಜಿಲ್ಲಾ ಪ್ರತಿನಿಧಿಗಳ ಸಮಾವೇಶದ ಬಗ್ಗೆಯೂ ಚರ್ಚಿಸಿದೆವು. ರಾಜಪ್ರಭುತ್ವದ ಮರುಸ್ಥಾಪನೆಯ ಪ್ರಶ್ನೆಯನ್ನು ಪುನರ್ ಪರಿಗಣಿಸುವಂತೆ ಸಮಾವೇಶವನ್ನು ಕೋರಲಾಯಿತು. ಅಧ್ಯಕ್ಷರ ಕಡೆಯವರೇ ಆಗಿದ್ದ ಪ್ರತಿನಿಧಿಗಳು ಯೂವಾನನನ್ನು ಚಕ್ರವರ್ತಿಯಾಗುವಂತೆ ಮನವಿ ಮಾಡಿಕೊಂಡರು. ಅವನ ಕುತಂತ್ರಗಳಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾಗಳು ಚಕ್ರವರ್ತಿಯಾಗಿ ಅವನಿಗೆ ಮಾನ್ಯತೆಯ ಭರವಸೆಯನ್ನು ನೀಡಿ ಬೆಂಬಲವನ್ನು ವ್ಯಕ್ತಪಡಿಸಿದವು. ಆದಾಗ್ಯೂ ಈ ಹೋರಾಟದಲ್ಲಿ ಜಪಾನ್ ಅವನಿಗೆ ವಿರೋಧವನ್ನು ತೋರಿತು. ಯೂವಾನನು 1916 ರಲ್ಲಿ ಮರಣ ಹೊಂದಿದನು ಮತ್ತು ಅವನ ಮಹತ್ವಾಕಾಂಕ್ಷೆಯ ಜೀವನ ಹೀಗೆ ಕೊನೆಗೊಂಡಿತು.

## 137.8 ನಿಮ್ಮ ಪ್ರಗತಿಯ ಪರೀಕ್ಷೆ - ಉತ್ತರಗಳು

*I ಈ ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ ಒಂದು ಅಥವಾ ಎರಡು ವಾಕ್ಯಗಳಲ್ಲಿ ಉತ್ತರಿಸಿ.*

1. ಕುವಾಂಗ್-ಸು
2. ಪು-ಯಿ
3. ಸುಂಗ್-ಚಿಯಾವೊ-ಜೆನ್
4. ಕುಮಿಂಟಾಂಗ್ ಪಕ್ಷ

*II ಕೆಳಗಿನವುಗಳ ಬಗ್ಗೆ ಪ್ರತಿಯೊಂದಕ್ಕೂ ಆರು ವಾಕ್ಯಗಳಲ್ಲಿ ಟಿಪ್ಪಣಿ ಬರೆಯಿರಿ*

1. ಯೂವಾನನ ಸಂವಿಧಾನ
2. ಚೀನಾದ 21 ಬೇಡಿಕೆಗಳು
3. ರಾಜಪ್ರಭುತ್ವದ ಪುನರ್ ಸ್ಥಾಪನೆ

*III ಕೆಳಗಿನವುಗಳ ಬಗ್ಗೆ ಪ್ರತಿಯೊಂದಕ್ಕೂ 20 ವಾಕ್ಯಗಳಲ್ಲಿ ಉತ್ತರ ಬರೆಯಿರಿ.*

1. ಯೂವಾನ್ ಷಿಕಾಯಿಯ ಜೀವನ ಮತ್ತು ಏಳಿಗೆಯನ್ನು ಚಿತ್ರಿಸಿ
2. 1912 ರಿಂದ 1916 ರವರೆಗೆ ಚೀನೀ ಗಣರಾಜ್ಯದ ಅಧ್ಯಕ್ಷನಾಗಿ ಯೂವಾನ್ ಷಿಕಾಯಿಯ ಸಾಧನೆಗಳನ್ನು ನಿರ್ಧರಿಸಿ.

## 137.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. A.N. Holcombe : The Chinese Revolution
2. Immanuel C.Y. : The Rise of Modern China
3. Medows .T.T. : The Chinese and their Rebellion

# ಘಟಕ - 138

# ಚೀನಾದ ರಾಜಕೀಯದಲ್ಲಿ ಸನ್‌ಯಾತ್‌ಸೆನ್‌ರ ಪಾತ್ರ

*ರಚನೆ*


138.0 ಉದ್ದೇಶಗಳು

138.1 ಪೀಠಿಕೆ

138.2 ಪ್ರಾರಂಭದ ಜೀವನ ಮತ್ತು ರಾಜಕೀಯ ದೃಷ್ಟಿಕೋನಗಳು

138.3 ಡಾ. ಸನ್‌ಯಾತ್‌ಸೆನ್ ಮತ್ತು 1911 ರ ಚೀನೀ ಕ್ರಾಂತಿ

138.4 ಹೊಸ ಕುಮಿಂಟಾಂಗ್ ಪಕ್ಷ

138.5 ಜನಸಾಮಾನ್ಯರ ಮೂರು ತತ್ವಗಳು

138.6 ಸನ್‌ಯಾತ್‌ಸೆನ್‌ರ ನಿಧನ ಮತ್ತು ಅದರ ಮಹತ್ವ

138.7 ಮುಕ್ತಾಯ

138.8 ನಿಮ್ಮ ಪ್ರಗತಿಯ ಪರೀಕ್ಷೆಗೆ ಉತ್ತರಗಳು

138.9 ಅಧ್ಯಯನಕ್ಕೆ ಪುಸ್ತಕಗಳು

## 138.0 ಉದ್ದೇಶಗಳು

ಈ ಘಟಕದಲ್ಲಿ ನಾವು ಚೀನಾದ ರಾಜಕೀಯದಲ್ಲಿ ಸನ್‌ಯಾತ್‌ಸೆನ್‌ರ ಪಾತ್ರವನ್ನು ಚರ್ಚಿಸಲಿದ್ದೇವೆ. 1911 ರ ಕ್ರಾಂತಿಯಲ್ಲಿ ಅವರು ಗಮನಾರ್ಹ ಪಾತ್ರವನ್ನು ವಹಿಸಿದರು. ಅವರು ಮಹಾ ಕ್ರಾಂತಿಕಾರಿಯಾಗಿದ್ದರು ಮತ್ತು ವಿದೇಶಗಳಲ್ಲಿದ್ದ ಚೀನಾದ ಕ್ರಾಂತಿಕಾರಿಗಳನ್ನು ಮಂಚೂ ಆಳ್ವಿಕೆಯ ವಿರುದ್ಧ ಸಂಘಟಿಸಿದರು. ಅವರು ಮಂಚೂ ಸಂತತಿಯ ಅಂತ್ಯ ಮತ್ತು ಅದರ ಸ್ಥಾನದಲ್ಲಿ ಗಣರಾಜ್ಯವನ್ನು ರಚಿಸುವ ಬಯಕೆಯನ್ನು ಹೊಂದಿದ್ದರು. ಅವರ ವಿಚಾರಗಳನ್ನು ಕ್ರಮೇಣ ಚೀನಾದಲ್ಲಿ ಒಪ್ಪಿಕೊಳ್ಳಲಾಯಿತು ಮತ್ತು ಅವರ ಮಾರ್ಗದರ್ಶನದಲ್ಲಿ ಕ್ರಾಂತಿಕಾರಿ ಪಕ್ಷಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸತೊಡಗಿದವು. ಅವರು ಯಾವಾಗ ಷಿಕಾಯಿಯನ್ನು ರಾಜಮನೆತನದಿಂದ ತನ್ನ ಕಡೆಗೆ ಸೆಳೆದುಕೊಳ್ಳಲು ಕಾರಣನಾಗಿದ್ದರು ಮತ್ತು ಅವನಿಗೆ ಅತ್ಯುನ್ನತವಾದ ಅಧ್ಯಕ್ಷನ ಹುದ್ದೆಯನ್ನು ನೀಡಿದರು. ಅಲ್ಲದೆ ಈ ಘಟಕದಲ್ಲಿ ನಾವು ಸನ್‌ಯಾತ್‌ಸೆನರು ಹೊಸದಾಗಿ ಸ್ಥಾಪಿಸಲಾಗಿದ್ದ ಚೀನೀ ಗಣರಾಜ್ಯದ ಹಂಗಾಮಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರೆಂಬುದನ್ನು ತಿಳಿದುಕೊಂಡೆವು. ಚೀನಾದ ಚಕ್ರವರ್ತಿಯಾಗಿದ್ದ ಕುವಾಂಗ್ ಸು ಸಿಂಹಾಸನವನ್ನು ತ್ಯಜಿಸಿದನು. ಇದರಿಂದ ಸುಮಾರು 267 ವರ್ಷಗಳ ಮಂಚೂಗಳ ಆಳ್ವಿಕೆ ಕೊನೆಗೊಂಡಿತು. ಸನ್‌ಯಾತ್‌ಸೆನರು ಗಣರಾಜ್ಯದ ಐಕ್ಯತೆಯು ತನಗಿಂತಲೂ ಯೂವಾನನ ಕೈಯಲ್ಲಿ ಹೆಚ್ಚು ಬಲಿಷ್ಠವಾಗಿರುವುದೆಂಬ ನಿರೀಕ್ಷೆಯಿಂದ ಯೂವಾನ್ ಷಿಕಾಯಿಯ ಪರವಾಗಿ ಹಂಗಾಮಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದನು.

ಈ ಘಟಕವನ್ನು ಅಭ್ಯಸಿಸಿದ ನಂತರ ನೀವು ಈ ಕೆಲವು ಅಂಶಗಳ ಬಗ್ಗೆ ತಿಳಿದುಕೊಳ್ಳಬೇಕಾಗುವುದು.

ಸನ್‌ಯಾತ್‌ಸೆನನ ಪ್ರಾರಂಭದ ಜೀವನ ಮತ್ತು ರಾಜಕೀಯ ದೃಷ್ಟಿಕೋನಗಳು

1911 ರ ಕ್ರಾಂತಿಯಲ್ಲಿ ಸನ್‌ಯಾತ್‌ಸೆನ್‌ರ ಪಾತ್ರ

ಹೊಸ ಕುಮಿಂಟಾಂಗ್ ಪಕ್ಷದ ಸ್ಥಾಪನೆ ಮತ್ತು ಅದರ ತತ್ವಗಳು

ಡಾ. ಸನ್‌ಯಾತ್‌ಸೆನ್‌ರ ನಿಧನ ಮತ್ತು ಅದರ ಮಹತ್ವ

## 138.1 ಪೀಠಿಕೆ

19 ನೇ ಶತಮಾನದ ಪ್ರಾರಂಭದಲ್ಲಿ ಜಪಾನಿನ ಅಸಾಧಾರಣ ಬದಲಾವಣೆಯ ಬಗ್ಗೆ ಚೀನಾಕ್ಕೆ ಅರಿವಾಯಿತು. ಚೀನಾದ ಕ್ರಾಂತಿಕಾರಿಗಳು ಲಿಯಾಂಗ್ ಚಿ-ಚಾವೋ ಮತ್ತು ಸನ್‌ಯಾತ್‌ಸೆನ್‌ರ ಪರವಾದ ಎರಡು ವಿಭಿನ್ನ ಗುಂಪುಗಳಿದ್ದವು. ಲಿಯಾಂಗನು ಪ್ರತಿಭಾವಂತ ಲೇಖಕನಾಗಿದ್ದು ಸಂಸದೀಯ ಮಾದರಿಯ ಸರ್ಕಾರ ಸ್ಥಾಪನೆಯನ್ನು ಪ್ರತಿಪಾದಿಸಿದನು. ಆದರೆ ಸನ್‌ಯಾತ್‌ಸೆನ್ ಕ್ರಾಂತಿಕಾರಿಯಾಗಿದ್ದು, ತನ್ನದೆ ಆದ ರಹಸ್ಯ ಸಂಘವನ್ನು ಹೊಂದಿದ್ದರು. 1895 ರಲ್ಲಿ ಕ್ಯಾಂಟನ್ನನ್ನು ವಶಪಡಿಸಿಕೊಳ್ಳುವ ಅವರ ಪಿತೂರಿ ವಿಫಲವಾಯಿತು. ಅವರು ಜಪಾನ್, ಬ್ರಿಟನ್ ಮತ್ತು ಅಮೇರಿಕಾಗಳಲ್ಲಿ ವ್ಯಾಪಕ ಪ್ರವಾಸ ಕೈಗೊಂಡರು.

ತನ್ನ ಬಹುಮುಖ ವ್ಯಕ್ತಿತ್ವದ ಹಿನ್ನಲೆಯಲ್ಲಿ ಸನ್‌ಯಾತ್‌ಸೆನರು ಗಣರಾಜ್ಯ ಸರ್ಕಾರದ ಸ್ಥಾಪನೆಯ ಕಲ್ಪನೆಯ ಅನೇಕ ವಿಚಾರಗಳನ್ನು ಪ್ರತಿಪಾದಿಸಿದರು. ಇವೇ ಅವರ ಜನಸಾಮಾನ್ಯರ ಮೂರು ತತ್ವಗಳಾದ ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ. ವಿರೋಧಿ ಗುಂಪುಗಳನ್ನು ಒಂದುಗೂಡಿಸುವ ಮೂಲಕ ಸನ್‌ಯಾತ್‌ಸೆನ್‌ರು ಆಗಸ್ಟ್ 1900 ರಲ್ಲಿ ತುಂಗ್-ಮೆಂಗ್-ಹುಯ್ (ಐಕ್ಯತಾ ಸಂಘ) ಸಂಘವನ್ನು ಹದಿನೇಳು ಪ್ರಾಂತಗಳಲ್ಲಿ ಅದರ ಶಾಖೆಗಳೊಂದಿಗೆ ಸ್ಥಾಪಿಸಿದರು. ಸನ್‌ಯಾತ್‌ಸೆನ್ ತುಂಗ್ ಮೆಂಗ್ ಹುಯಿಯ ಮುಖ್ಯ ಸಂಘಟಕರುಗಳಾಗಿದ್ದರು. ಸನ್‌ಯಾತ್‌ಸೆನರು ಮೂರು ಹಂತದ ಕಾರ್ಯಕ್ರಮವನ್ನು ಪ್ರತಿಪಾದಿಸಿದನು.

1. **ಮೂರು ವರ್ಷಗಳ ಸೈನಿಕ ಸರ್ಕಾರ**
2. **ಪ್ರತಿನಿಧಿತ್ವದ ಕಾಲವೆಂದು ಕರೆಯಲಾದ ಆರು ವರ್ಷಗಳ ತಾತ್ಕಾಲಿಕ ಸರ್ಕಾರ**
3. **ಅಂತಿಮವಾಗಿ ಚುನಾಯಿತ ಅಧ್ಯಕ್ಷ ಮತ್ತು ಸಂಸತ್ತನ್ನು ಒಳಗೊಂಡ ಸಂವಿಧಾನಾತ್ಮಕ ಸರ್ಕಾರ**

1906, 1907, 1908 ಮತ್ತು 1910 ರಲ್ಲಿ ಅಲ್ಲಲ್ಲಿ ದಂಗೆಗಳು ನಡೆದವು. ಮಿಗಿಲಾಗಿ ಹದಗೆಟ್ಟ ಆರ್ಥಿಕ ಪರಿಸ್ಥಿತಿಗಳಿಂದ ದೇಶಕ್ಕೆ ಗಂಡಾಂತರವುಂಟಾಯಿತು. ಸೆಪ್ಟೆಂಬರ್ 1911 ರಲ್ಲಿ ಸೆಜೆಕ್ವಾನ್ ಪ್ರಾಂತದಲ್ಲಿ ದಂಗೆಯೊಂದು ನಡೆದ ನಂತರ ವುಚಾಂಗ್ ಸೇನೆಯಲ್ಲಿಯೂ ದಂಗೆಯುಂಟಾಯಿತು. ತಕ್ಷಣವೇ ಅನೇಕ ಸ್ಥಳಗಳಲ್ಲಿ ಕ್ರಾಂತಿ ಆರಂಭವಾಯಿತು. ಡಿಸೆಂಬರ್ 1911 ರ ಪ್ರಾರಂಭದಲ್ಲಿ ದಂಗೆಯು ದಕ್ಷಿಣ ಚೀನ, ಮಧ್ಯ ಚೀನ ಮತ್ತು ವಾಯುವ್ಯ ಚೀನಾಗಳಿಗೂ ಹರಡಿ ಸಾಮಾನ್ಯ ದಂಗೆಯಾಯಿತು. ಸನ್‌ಯಾತ್‌ಸೆನ್ ಬ್ರಿಟನ್ನಿನಿಂದ ಹಿಂದಿರುಗಿದ ನಂತರ ಅವರನ್ನು ಚೀನೀ ಗಣರಾಜ್ಯದ ಹಂಗಾಮಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಚಕ್ರವರ್ತಿ ಕುವಾಂಗ್ ಸು ಸಿಂಹಾಸನವನ್ನು ತ್ಯಜಿಸಿದನು. 267 ವರ್ಷಗಳ ಮಂಚೂಗಳ ಆಳ್ವಿಕೆ ಹೀಗೆ ಕೊನೆಗೊಂಡಿತು.

ಐಕ್ಯತೆಯನ್ನು ಏರ್ಪಡಿಸುವ ಅಂತರ್ಯುದ್ಧ ಮತ್ತು ವಿದೇಶಿ ಹಸ್ತಕ್ಷೇಪವನ್ನು ತಡೆಯುವ ಉದ್ದೇಶದಿಂದ ಸನ್‌ಯಾತ್‌ಸೆನರು ಯೂವಾನ್ ಷಿಕಾಯಿಯ ಪರವಾಗಿ ತಮ್ಮ ಹಂಗಾಮಿ ಅಧ್ಯಕ್ಷ ಸ್ಥಾನವನ್ನು ತ್ಯಜಿಸಿದರು. ಆದರೆ ಸ್ವಲ್ಪ ಕಾಲದಲ್ಲಿಯೇ ಯೂವಾನ್ ಮತ್ತು ಕ್ರಾಂತಿಕಾರಿಗಳ ನಡುವೆ ತಿಕ್ಕಾಟ ಪ್ರಾರಂಭವಾಯಿತು. ಸುಂಗ್ ಚಿಯಾವೋ ಚೆನ್ನನ ನಾಯಕತ್ವದ ತುಂಗ್ ಮೆಂಗ್ ಹುಯಿಯ ಒಂದು ಗುಂಪು ಬ್ರಿಟಿಷ್ ಮಾದರಿಯ ಸಂಸದೀಯ ಸರ್ಕಾರ ವ್ಯವಸ್ಥೆಯನ್ನು ಪ್ರತಿಪಾದಿಸಿತು. ಈ ಸನ್ನಿವೇಶದಲ್ಲಿ ಕುಮಿಂಟಾಂಗ್ ಎಂಬ ಹೊಸ ರಾಜಕೀಯ ಪಕ್ಷವನ್ನು ರಚಿಸಲಾಯಿತು. ರಾಷ್ಟ್ರೀಯ ಚುನಾವಣೆಗಳು ನಡೆದು ಫೆಬ್ರವರಿ 1913 ರ ವೇಳೆಗೆ ದ್ವಿಸದನಗಳನ್ನು ಹೊಂದಿದ ಸಂಸತ್ತಿನಲ್ಲಿ ಕುಮಿಂಟಾಂಗ್ ಪಕ್ಷಕ್ಕೆ ಬಹುಮತವನ್ನು ದೊರಕಿಸಿಕೊಟ್ಟವು. ಆದರೆ ಯೂವಾನನು (ಮಾರ್ಚ್ 20, 1913) ಸುಂಗ್ ಚಿಯಾವೋ ಚಿನ್ನವನ್ನು ಕೊಲ್ಲಿಸುವ ಮೂಲಕ ಸಂಸದೀಯ ಪ್ರಜಾಪ್ರಭುತ್ವದ ಭವಿಷ್ಯವನ್ನು ನಾಶಪಡಿಸಿದನು.

ಯೂವಾನನ ಮರಣದ ನಂತರ ಚೀನ ಮತ್ತೊಮ್ಮೆ ರಾಜಕೀಯ ಅರಾಜಕತೆಗೆ ಗುರಿಯಾಯಿತು. ಮೊದಲನೆ ಮಹಾಯುದ್ಧದಲ್ಲಿ ಭಾಗವಹಿಸುವ ಪ್ರಶ್ನೆಯ ಸಂಬಂಧದಲ್ಲಿ ಚೀನಾದಲ್ಲಿ ಒಡಕುಂಟಾಯಿತು. 1917 ರ ಮಧ್ಯಭಾಗದಲ್ಲಿ ಸಂಸತ್ತನ್ನು ವಿಸರ್ಜಿಸಲಾಯಿತು ಮತ್ತು ರಾಜಪ್ರಭುತ್ವ ಬೆಂಬಲಿಗರ ಒಂದು ಗುಂಪು ಮಂಚೂಗಳನ್ನು ಪುನಃ ಅಧಿಕಾರಕ್ಕೆ ತರಲು ಪ್ರಯತ್ನಿಸಿತು. ಆದ್ದರಿಂದ 1917 ರ ಕಡೆಯಲ್ಲಿ ಕುಮಿಂಟಾಂಗ್ ಪಕ್ಷವು ಡಾ. ಸನ್‌ಯಾತ್‌ಸೆನ್‌ರೊಂದಿಗೆ ಪೀಕಿಂಗ್‌ನ ಉತ್ತರ ಚೀನಾದ ಸರ್ಕಾರದ ವಿರುದ್ಧವಾಗಿ ಕ್ಯಾಂಟನ್‌ನಲ್ಲಿ ದಕ್ಷಿಣ ಚೀನಾ ಸಂವಿಧಾನಾತ್ಮಕ ಸರ್ಕಾರವನ್ನು ಸ್ಥಾಪಿಸಿತು. ಸ್ಥಳೀಯ ತೆರಿಗೆಗಳನ್ನು ಸಂಗ್ರಹಿಸುವ ಮತ್ತು ತಮ್ಮ ಸೈನ್ಯಗಳನ್ನು ವೈಯಕ್ತಿಕ ಲಾಭಕ್ಕೆ ಬಳಸುವ ಹನ್ನೆರಡು ಸೇನಾ ರಾಜ್ಯಪಾಲರ ಚಟುವಟಿಕೆಗಳು ಗೊಂದಲವನ್ನು ಮತ್ತಷ್ಟು ಹೆಚ್ಚಿಸಿತು. ಇದೇ ವೇಳೆಗೆ ಕ್ಯಾಂಟನ್ ಸರ್ಕಾರ ತನ್ನನ್ನು ಜನರ ಕಾನೂನುಬದ್ಧ ಪ್ರತಿನಿಧಿಯೆಂದು ಹೇಳಿಕೊಂಡಿತು.

ತನ್ನ ಹೊಸ ಕುಮಿಂಟಾಂಗ್ ಪಕ್ಷ ಹೊಸದಾಗಿ ಅಧಿಕಾರವನ್ನು ಪಡೆದುಕೊಳ್ಳುತ್ತಿದ್ದರೂ, ಸನ್‌ಯಾತ್‌ಸೆನರು ಪೀಕಿಂಗ್‌ನೊಂದಿಗೆ ಸಮ್ಮತಿಯೆನಿಸುವ ಒಪ್ಪಂದವೊಂದರ ಮೂಲಕ ಚೀನಾದ ಶಾಂತಿಯುತ ಏಕೀಕರಣದ ನಿರೀಕ್ಷೆಯನ್ನು ಹೊಂದಿದ್ದರು. ಆದ್ದರಿಂದ ಪರಿಹಾರಕ್ಕೆ ಆಧಾರವನ್ನು ಹುಡುಕಲು ಪೀಕಿಂಗ್‌ಗೆ ತೆರಳಿದರು. ಅಲ್ಲಿಯೇ ಅವರು ತಮ್ಮ ಅನುಯಾಯಿಗಳಿಗೆ ಕ್ರಾಂತಿಯನ್ನು ಮುಂದುವರಿಸುವಂತೆ ಕರೆ ನೀಡಿ ಮಾರ್ಚ್ 1925 ರಲ್ಲಿ ನಿಧನರಾದರು.

## 138.2 ಪ್ರಾರಂಭದ ಜೀವನ ಮತ್ತು ರಾಜಕೀಯ ದೃಷ್ಟಿಕೋನಗಳು

ಸನ್‌ವೆನ್ ಅಥವಾ ಆಧುನಿಕ ಸಂತ ಎಂದೇ ಚಿರಪರಿಚಿತರಾಗಿದ್ದ ಡಾ. ಸನ್‌ಯಾತ್‌ಸೆನರು 1866 ರಲ್ಲಿ ದಕ್ಷಿಣ ಚೀನಾದ ಕ್ಯಾಂಟನ್ ಮುಖಜಭೂಮಿಯ ಸಿಯಾಂಗ್ ಶಾನ್ ಎಂಬಲ್ಲಿ ಜನಿಸಿದರು. ದಕ್ಷಿಣ ಚೀನಾ ನೆರೆಯ ಕ್ವಾಂಗ್ಸಿ ಪ್ರಾಂತದಲ್ಲಿ ನಡೆದ ತೈಪಿಂಗ್ ದಂಗೆಯ ಬೆಂಬಲ ಮತ್ತು ಪ್ರೋತ್ಸಾಹಗಳನ್ನು ನೀಡಿತ್ತು. ತಾವು ಇಂಗ್ಲೀಷ್‌ನ ಜ್ಞಾನವನ್ನು ಸಂಪಾದಿಸಿದ ಹೊನಲುಲುವಿನಲ್ಲಿ ತಮ್ಮ ಪ್ರಾರಂಭದ ಶಿಕ್ಷಣವನ್ನು ಪೂರೈಸಿದ ನಂತರ, ಸನ್‌ಯಾತ್‌ಸೆನ್‌ರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ನಂತರ ಅವರು ಬ್ರಿಟಿಷರ ಅಧೀನದಲ್ಲಿದ್ದ ಹಾಂಗ್‌ಕಾಂಗ್‌ನಲ್ಲಿ ವೈದ್ಯಶಾಸ್ತ್ರವನ್ನು ಅಧ್ಯಯನ ಮಾಡಿದರು. ಈ ವರ್ಷಗಳಲ್ಲಿ ಅವರು ವಿದೇಶಗಳಲ್ಲಿ ಅಧ್ಯಯನದಿಂದ ಏನನ್ನು ಗಳಿಸಿದರೋ ಅದು ಮುಖ್ಯವಾಗಿ ವೈದ್ಯಶಾಸ್ತ್ರದ ಜ್ಞಾನಕ್ಕಿಂತಲೂ ಎರಡು ವಿರುದ್ಧ ಪ್ರಪಂಚಗಳ ಚಿತ್ರಣವಾಗಿತ್ತು.

1. ಬಲಿಷ್ಠ (ಪ್ರಬಲ) ರಾಷ್ಟ್ರೀಯ ರಾಜ್ಯಗಳ ಪಾಶ್ಚಿಮಾತ್ಯ ಜಗತ್ತು ಮತ್ತು

2. ಕನ್‌ಫ್ಯೂಷಿಯಸ್‌ನ ವಿಶ್ವಾಸ ಸಮಾಜದ ಸಿದ್ಧಾಂತಕ್ಕೆ ಜೋತುಬಿದ್ದ ಸಂಪ್ರದಾಯಕರಣ ಚೀನ.

ಒಬ್ಬ ರಾಜಕೀಯ ಚಳುವಳಿಕಾರನಾಗಿ ಸನ್‌ಯಾತ್‌ಸೆನ್‌ರು ಪ್ರಾರಂಭದಲ್ಲಿ ಚೀನಾದ ಸಾಂಪ್ರದಾಯಿಕ ಮಾದರಿಯ ಅನುಯಾಯಿಗಳ ಸಣ್ಣ ಗುಂಪುಗಳ ರಚನೆ, ಅಧಿಕಾರಿಗಳಿಗೆ ಮನವಿ ಮತ್ತು ಅಂತಿಮವಾಗಿ ಭಯೋತ್ಪಾದಕ ದಾಳಿಗಳು ಮತ್ತು ತಲೆಮರೆಸಿಕೊಂಡು ಓಡಿಹೋಗುವುದು ಮುಂತಾದ ರಾಜಕೀಯ ವಿಧಾನಗಳನ್ನು ಅನುಸರಿಸಿದರು. ಕೆಲವು ವಿಫಲ ಕ್ರಾಂತಿಕಾರಿ ಪ್ರಯತ್ನಗಳ ನಂತರ ಸನ್‌ಯಾತ್‌ಸೆನರು ತಮ್ಮ ಕಾರ್ಯಾಚರಣೆಯ ನೀತಿಯನ್ನು ಜಪಾನಿಗೆ ಬದಲಾಯಿಸಿದರು. ಅಲ್ಲಿ ಅವರು ಲಿಯಾಂಗನಂತೆ ಚೀನಾದ ಕ್ರಾಂತಿಯನ್ನು ಪ್ರೋತ್ಸಾಹಿಸಲು ಆಸಕ್ತಿ ಹೊಂದಿದ್ದ ಏಷ್ಯಾದ ಉದಾರವಾದಿಗಳೊಂದಿಗೆ ಸೇರಿಕೊಂಡರು.

1894-95 ರ ವೇಳೆಗ ಸನ್‌ಯಾತ್‌ಸೆನ್‌ರ ಕ್ರಾಂತಿಕಾರಿ ಸಂಘಟನೆಯು "ಕೇವಲ ದೇಶಪ್ರೇಮಿ ಮತ್ತು ರಾಜಸಂತತಿ ವಿರೋಧಿ ಮಾತ್ರವಾಗಿರದೆ ಆಧುನಿಕರಣವಾದಿಗಳ ರಾಷ್ಟ್ರೀಯವಾದಿಗಳ ಮತ್ತು ರಾಜಪ್ರಭುತ್ವ ವಿರೋಧಿಗಳ" ಸಂಘವಾಗಿತ್ತು. ಅವನ ಮೂಲ ಕ್ರಾಂತಿಕಾರಿ ಸಂಘವಾಗಿದ್ದ "ಚೀನೀ ಪುನರುತ್ಥಾನ ಸಂಘ" ವು (ಸಿಂಗ್ ಚುಂಗ್ ಹುಯ್) 1894-95 ವಿದೇಶಗಳಲ್ಲಿದ್ದ ಚೀನಿಯರಿಂದ ಹೆಚ್ಚಿನ ಬೆಂಬಲವನ್ನು ಪಡೆದುಕೊಂಡಿತ್ತು.

1896 ರಿಂದ 1898 ರವರೆಗೆ ಸನ್‌ಯಾತ್‌ಸೆನರು ಯೂರೋಪಿನಲ್ಲಿದ್ದು ಲಂಡನ್ನಿನ ಚೀನಿ ರಾಯಭಾರ ಕಛೇರಿಯಲ್ಲಿ ಬಂಧಿತನಾಗಿದ್ದ ಅವರನ್ನು ಸ್ನೇಹಿತರ ಮತ್ತು ಬ್ರಿಟಿಷ್ ರಾಯಭಾರ ಕಛೇರಿಯ ಮಧ್ಯಸ್ಥಿಕೆಯಿಂದ ಬಿಡುಗಡೆಗೊಳಿಸಲಾಯಿತು. ಬಾಕ್ಸರ್ ದಂಗೆಯ ಕಾಲದಲ್ಲಿ ಸನ್‌ಯಾತ್‌ಸೆನರು ಮಂಚೂಗಳಿಂದ ಹೊರಬಂದು ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಬೆಂಬಲ ನೀಡುವಂತೆ ಲಿ ಹುಂಗ್‌ಚಂಗ್‌ನಿಗೆ ಮಾಡಿಕೊಂಡ ಮನವಿ ವಿಫಲವಾಯಿತು. 1900 ರಿಂದ ಗಣರಾಜ್ಯವಾದ ಮತ್ತು ರಾಷ್ಟ್ರೀಯವಾದಗಳು ಸನ್‌ಯಾತ್‌ಸೆನ್‌ರ ರಾಜಕೀಯ ಗುರಿಗಳಾಗಿದ್ದು, ಕ್ರಾಂತಿ ಅದರ ಸಾಧನೆಯ ಮಾರ್ಗವಾಗಿತ್ತು. ಚಕ್ರವರ್ತಿನಿ ತ್ಜು-ಷಿ ಕನ್‌ಫ್ಯೂಷಿಯಸ್‌ನ ಮಾದರಿಯ ಪರೀಕ್ಷೆಯನ್ನು ರದ್ದುಗೊಳಿಸಿದ ನಂತರ 1905 ರಲ್ಲಿ ಟೋಕಿಯೊದಲ್ಲಿ ತುಂಗ್‌ಮೆಂಗ್‌ಹುಯಿ ಘೋಷಿಸಿದ ಪ್ರಣಾಳಿಕೆಯಲ್ಲಿ ಈ ಗುರಿ ಮತ್ತು ಮಾರ್ಗಗಳನ್ನು ಸೇರಿಸಲಾಯಿತು.

1905 ರಲ್ಲಿ ಚಕ್ರವರ್ತಿನಿ ತ್ಜು-ಷಿ ಸುಧಾರಣೆಯ ಕಾರ್ಯಕ್ರಮದ ಸುಳಿಯಲ್ಲಿದ್ದಾಗ ಸನ್‌ಯಾತ್‌ಸೆನ್‌ರ ಚೀನಿ ಪುನರುತ್ಥಾನ ಸಂಘವನ್ನು ಐಕ್ಯತಾ ಸಂಘವನ್ನಾಗಿ ಪುನರ್ ಸಂಘಟಿಸಲಾಯಿತು ಮತ್ತು ಸೆನರು ಗಣರಾಜ್ಯ ಸಿದ್ಧಾಂತದ ಮೂಲ ತತ್ವಗಳನ್ನು ಅಳವಡಿಸಿಕೊಂಡರು. ಮಂಚೂಗಳ ಪದಚ್ಯುತಿ, ಗಣರಾಜ್ಯದ ಸ್ಥಾಪನೆ ಮತ್ತು ನಂತರ ಸಂಸದೀಯ ಆಡಳಿತ ವ್ಯವಸ್ಥೆಯ ನಿಯಂತ್ರಣ ಅವರ ಉದ್ದೇಶವಾಗಿತ್ತು. ಈ ಹಂತದಲ್ಲಿ ಸನ್‌ಯಾತ್‌ಸೆನರ ರಾಜಕೀಯ ಕಲ್ಪನೆಗಳು ಇನ್ನೂ ಪರಿಪಕ್ವವಾಗಿರಲಿಲ್ಲ. ಅವರು ಪಾಶ್ಚಿಮಾತ್ಯ ಶಿಕ್ಷಣ ಪಡೆದಿದ್ದರಿಂದ ಮತ್ತು ಅವರ ರಾಜಕೀಯ ಗಡಿಪಾರಿನಿಂದಾಗಿ ಅವರ ಬೆಂಬಲಿಗರಲ್ಲಿ ವಿದೇಶಗಳಲ್ಲಿ ನೆಲೆಸಿದ್ದ ಚೀನಿಯರೆ ಹೆಚ್ಚಾಗಿದ್ದರು. ಪರಿಣಾಮವಾಗಿ ಅವರ ಕ್ರಾಂತಿಕಾರಿ ಚಿಂತನೆಯು ಚೀನ ಮತ್ತು ಪಾಶ್ಚಿಮಾತ್ಯ ದೇಶಗಳ ನಡುವೆ ಗುರುತಿಸಲಾದ ಬುದ್ಧಿಜೀವಿಗಳ ರೇಖೆಯಿಂದ ಹೊರಹೊಮ್ಮಿದ್ದಿತು.

ಸನ್‌ಯಾತ್‌ಸೆನರ ಸಿದ್ಧಾಂತವು ಅವರ ಜೀವನದ ಅತ್ಯಂತ ಮಹತ್ವದ ಸಾಧನೆಯಾಗಿದ್ದು ಅದು ಚೀನಾದ ಮೊದಲ ಆಧುನಿಕ ರಾಜಕೀಯ ಕ್ರಾಂತಿಯ ಮುಖ್ಯ ಸಿದ್ಧಾಂತವಾಯಿತು.

1. ಭೂಮಿಯ ಹಂಚಿಕೆಯ ತತ್ವ

2. ಕ್ರಾಂತಿಯ ಪ್ರಕ್ರಿಯೆಯ ಮೂರು ಹಂತಗಳು

(ಅ) ಬಲಾತ್ಕಾರ ಮತ್ತು ಸೇನಾ ಹತೋಟಿಯ ಕಾಲ

(ಆ) ರಾಜಕೀಯ ಪ್ರತಿನಿಧಿತ್ವದ ಈ ಕಾಲದಲ್ಲಿ ಜನರಿಗೆ ನಾಗರೀಕ ಜವಾಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡುವುದು

(ಇ) ಅಂತಿಮವಾಗಿ ಸಂವಿಧಾನಾತ್ಮಕ ಪ್ರಜಾಪ್ರಭುತ್ವ ಸರ್ಕಾರದ ಸ್ಥಾಪನೆ ಇವುಗಳನ್ನು ಡೋಮೇಜರ್ ಚಕ್ರವರ್ತಿನಿಗೆ ಒಪ್ಪಿಗೆಯಾಗಿದ್ದ ಸೀಮಿತ ಸುಧಾರಣೆಗಳಲ್ಲಿ ಹೇಗೆ ತೆಗೆದುಹಾಕಲಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

## 138.3 ಡಾ. ಸನ್‌ಯಾತ್‌ಸೇನ್ ಮತ್ತು 1911 ರ ಚೀನೀ ಕ್ರಾಂತಿ

1898 ರ ಸುಧಾರಣೆಗಳು ಕೊನೆಗೊಂಡ ಕಾಲದಿಂದಲೂ ಕ್ರಾಂತಿಕಾರಿ ಬೆಳವಣಿಗೆಗಳು ಕಾಣಿಸತೊಡಗಿದವು. ಮಂಚೂ ವಂಶದ ಆಳ್ವಿಕೆಯ ವಿರೋಧಿ ನಿಲುವನ್ನು ಹೊಂದಿದ್ದ ಕ್ರಾಂತಿಕಾರಿಗಳಿಗೆ ಡಾ. ಸನ್‌ಯಾತ್‌ಸೇನ್ ನಾಯಕರಾಗಿದ್ದರು. ಸನ್‌ಯಾತ್‌ಸೇನರು 1905 ರಲ್ಲಿ ಸ್ಥಾಪಿಸಿದ ತುಂಗ್ ಮೆಂಗ್ ಹುಯ್ 1911 ರಲ್ಲಿ ಪ್ರಾರಂಭವಾದ ದಂಗೆಯನ್ನು ಕ್ರಾಂತಿಯನ್ನಾಗಿ ಪರಿವರ್ತಿಸುವ ನಿರ್ಧಾರವನ್ನು ತೆಗೆದುಕೊಂಡಿತು. ಮೊದಲಿಗೆ ಕ್ರಾಂತಿಕಾರಿಗಳಲ್ಲಿ ವಿದೇಶೀ ಚೀನಿಯರೇ ಹೆಚ್ಚಾಗಿದ್ದರು. ಸನ್‌ಯಾತ್‌ಸೇನ್ ಇವರೊಂದಿಗೆ ವ್ಯಾಪಕವಾಗಿ ಸಂಚರಿಸಿ, ಸಂಘದ ತತ್ವಗಳನ್ನು ಪ್ರಚಾರ ಮಾಡಿದ್ದರು. ಹೊಸ ವಿದ್ಯಾರ್ಥಿಗಳ ವರ್ಗ ಕ್ರಾಂತಿಕಾರಿ ತತ್ವಗಳ ಪ್ರಚಾರದ ಮತ್ತೊಂದು ಗುರಿಯಾಗಿತ್ತು. ಅವರಲ್ಲಿ ಕೆಲವರು ಅಮೇರಿಕ ಮತ್ತು ಯುರೋಪಿಗೆ ಹೋದರೆ ಇನ್ನೂ ಹೆಚ್ಚಿನವರು ಜಪಾನಿಗೆ ಹೋದರು. ಅವರು ಅಲ್ಲ ವಿವಿಧ ಕಾರಣಗಳಿಂದಾಗಿ ತಮಗೆ ಪಾಶ್ಚಿಮಾತ್ಯ ವಿದ್ಯಾಭ್ಯಾಸಕ್ಕೆ ದಾರಿ ತೋರಿಸಿದ ಮತ್ತು ಕೆಲವೇ ವಾರಗಳಲ್ಲಿ ಹೊಸ ವಿಷಯಗಳಲ್ಲಿ ಅವರನ್ನು ತರಬೇತಿಗೊಳಿಸುವ ಭರವಸೆಯನ್ನು ನೀಡಿದವರ ಕಪಿಮುಷ್ಟಿಯಲ್ಲಿ ಸಿಲುಕಿದರು. ಈ ವಿದ್ಯಾರ್ಥಿಗಳು ಖಂಡಾಂತರ ಕ್ರಾಂತಿಕಾರಿ ಪ್ರಚಾರಕ್ಕೆ ಸುಲಭವಾಗಿ ಬಲಿಬೀಳಬಲ್ಲವರಾಗಿದ್ದು ತಮ್ಮ ದೇಶಕ್ಕೆ ಹಿಂದಿರುಗಿದ ನಂತರ ಡಾ. ಸನ್‌ಯಾತ್‌ಸೇನ್‌ರ ಬೆಂಬಲಕ್ಕೆ ನಿಂತರು.

ವುಚಾಂಗ್ ಸೇನಾ ಪಡೆಗಳಲ್ಲಿ ಉಂಟಾದ ದಂಗೆಯ ನಂತರ ದಂಗೆಯು ಯಾಂಗ್ಸಿ ನದಿಯ ದಕ್ಷಿಣಕ್ಕಿದ್ದ ಪ್ರಾಂತಗಳಿಗೆ ತ್ವರಿತವಾಗಿ ಹರಡಿತು ಮತ್ತು ಷಾಂಗೈನಲ್ಲಿ ಒಂದು 'ಸೈನಿಕ ಸರ್ಕಾರ' ವನ್ನು ಸ್ಥಾಪಿಸಲಾಯಿತು. ನಂತರ ರಾಜಪ್ರತಿನಿಧಿಯಾಗಿದ್ದ ರಾಜಕುಮಾರಿ ಚುನ್ನನು ಅಪರಿಮಿತ ಅಧಿಕಾರಿಗಳನ್ನು ನೀಡುವ ಭರವಸೆಯ ಮೂಲಕ ಯೂವಾನ್ ಷಿಕಾಯಿಯನ್ನು ಪೀಕಿಂಗ್‌ಗೆ ಹಿಂತಿರುಗುವಂತೆ ಪ್ರಾರ್ಥಿಸಿಕೊಂಡನು. ಯೂವಾನ್ ಷಿಕಾಯಿಯು ಹ್ಯಾಂಕೋದಲ್ಲಿ ದಂಗೆಯನ್ನು ಹತ್ತಿಕ್ಕುವ ಪ್ರಯತ್ನದಲ್ಲಿದ್ದಾಗಲೇ ಸಂಧಾನಗಳನ್ನು ಆರಂಭಿಸುವ ಪ್ರಯತ್ನಗಳನ್ನು ಕೈಗೊಂಡನು. ದಂಗೆ ನಡೆಯುತ್ತಿದ್ದ ಪ್ರಾಂತಗಳ ಪ್ರತಿನಿಧಿಗಳು ನಾನ್‌ಕಿಂಗ್‌ನಲ್ಲಿ ಸಭೆ ಸೇರಿ ಕ್ರಾಂತಿಯ ಪರಮ ಗುರಿ ಕೈಗೂಡುವಂತೆ ಮಾಡಿತು. ಅದು ಆಗತಾನೇ ಚೀನಾಕ್ಕೆ ಹಿಂದಿರುಗಿದ್ದ ಡಾ. ಸನ್‌ಯಾತ್‌ಸೇನ್‌ರನ್ನು ಹಂಗಾಮಿ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿತು. ಅಂತಿಮವಾಗಿ ಈ ಸರ್ಕಾರದೊಂದಿಗೆ ಶಾಂತಿ ಸಂಧಾನಗಳನ್ನು ಮಾಡಿಕೊಳ್ಳಲಾಯಿತು. ಯೂವಾನ್ ಷಿಕಾಯಿಗೆ ಅಧಿಕಾರವನ್ನು ಹಸ್ತಾಂತರಿಸಿ, ಫೆಬ್ರವರಿ 12, 1912 ರಂದು ಚೀನಾದ ಚಕ್ರವರ್ತಿಯು ಸಿಂಹಾಸನವನ್ನು ತ್ಯಜಿಸಿದನು. ನಾನ್‌ಕಿಂಗ್ ಸರ್ಕಾರದ ಪರವಾಗಿ ಈ ಸಂಧಾನಕ್ಕೆ ಪ್ರತಿಕ್ರಿಯಿಸಿದ ಸನ್‌ಯಾತ್‌ಸೇನ್‌ರು "ಚಿಂಗ್ ಚಕ್ರವರ್ತಿಯು ದಯಪಾಲಿಸಿದ ಯಾವುದೇ ಅಧಿಕಾರದಿಂದ ಗಣರಾಜ್ಯ ಸರ್ಕಾರವನ್ನು ಸಂಘಟಿಸಲು ಸಾಧ್ಯವಿಲ್ಲ" ವೆಂದರು. ಆದಾಗ್ಯೂ ಡಾ. ಸನ್‌ಯಾತ್‌ಸೇನರು ಯೂವಾನ್ ಷಿಕಾಯಿಯು ಒಡಂಬಡಿಕೆಯ ಈ ಪದಗಳನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದು ಭಾವಿಸಿದರು ಮತ್ತು ಗಣರಾಜ್ಯ ವಾದಿಗಳು ಅವನ ಭರವಸೆಗಳನ್ನು ಒಪ್ಪಿಕೊಂಡರು. ಮಾತುಗಳು ಸುಳ್ಳಾಗಲಿಲ್ಲ ಮತ್ತು ಡಾ. ಸನ್‌ಯಾತ್‌ಸೇನರು ಮುಂಗಡಿದ್ದ "ಗಂಭೀರವಾದ ಸಮಸ್ಯೆ" ಕೆಲ ಸಮಯದ ನಂತರ ಕಾಣಿಸಿಕೊಂಡಿತು. ಡಾ. ಸನ್‌ಯಾತ್‌ಸೇನರು ಹಂಗಾಮಿ ಅಧ್ಯಕ್ಷ ಪದವಿಗೆ ರಾಜೀನಾಮೆ ನೀಡುವುದರೊಂದಿಗೆ "ಗಣರಾಜ್ಯ ಸೇನೆ" ಯೊಂದಿಗೆ ಮಾತುಕತೆಗಳು ಪೂರ್ಣಗೊಂಡವು. ನಂತರ ಸನ್‌ಯಾತ್‌ಸೇನರ ಸಲಹೆಯ ಮೇರೆಗೆ ನಾನ್‌ಕಿಂಗ್ ಸಭೆಯು ಯೂವಾನ್ ಷಿಕಾಯ್‌ನನ್ನು ಪುನರ್ ಏಕೀಕೃತಗೊಂಡ ಚೀನಾದ ಗಣರಾಜ್ಯದ ಮೊದಲ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿತು.

ಚೀನಾ ಗಣರಾಜ್ಯದ ಸ್ಥಾಪನೆಯೊಂದಿಗೆ ಚೀನಾ, ಗಣರಾಜ್ಯ ಸಿದ್ಧಾಂತದ ಹೊಸ ಯುಗವನ್ನು ಪ್ರವೇಶಿಸುವ ಬದಲು ಸೈನಿಕ ಸಿದ್ಧಾಂತಕ್ಕೆ ಬಲಿಯಾಯಿತು. ಆಗಸ್ಟ್ 1912 ರಲ್ಲಿ ಸನ್‌ಯಾತ್‌ಸೇನರು ತಮ್ಮ ಹೊಸ ರಾಜಕೀಯ ಪಕ್ಷವಾದ ಕುಮಿಂಟಾಂಗ್ ಪಕ್ಷವನ್ನು ಸಂಘಟಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಯೂವಾನನು ಚಿನ್ ಪತಂಗ್ ಎಂಬ ತನ್ನದೇ ಆದ ಪ್ರಗತಿಪರ ಪಕ್ಷವನ್ನು ರಚಿಸಿದನು. ಹಂಗಾಮಿ ಸಂವಿಧಾನದಡಿಯಲ್ಲಿ ರಾಷ್ಟ್ರೀಯ ಸಭೆಯು 1913 ರಲ್ಲಿ ಸಮಾವೇಶಗೊಂಡಾಗ ಕುಮಿಂಟಾಂಗ್ ಪಕ್ಷ ಅತ್ಯಂತ ಪ್ರಬಲ ಸ್ಥಾನವನ್ನು ಹೊಂದಿದ್ದಿತು. ಕುಮಿಂಟಾಂಗ್ ಪಕ್ಷದ ಸಂಸದೀಯ ನಾಯಕನಾಗಿದ್ದ ಸುಂಗ್ ಚಿಯಾವೋ-ಜೆನ್ನನ ಹತ್ಯೆಯಿಂದ ಗಣರಾಜ್ಯ ಸರ್ಕಾರದ ಭವಿಷ್ಯಕ್ಕೆ ತೀವ್ರವಾದ ಹೊಡೆತವುಂಟಾಯಿತು. ಈ ಘಟನೆಯ ನಂತರ ಯೂವಾನನ ವಿರುದ್ಧ ದಂಗೆ ಉಂಟಾಯಿತು ಮತ್ತು ಕುಮಿಂಟಾಂಗ್ ಪಕ್ಷ ಈ ದಂಗೆಗೆ ಬೆಂಬಲ ನೀಡಿತು. ಯೂವಾನನು ದಂಗೆಯನ್ನು ಅಡಗಿಸಿದನು ಮತ್ತು ಡಾ. ಸನ್‌ಯಾತ್‌ಸೇನ್ ಹಾಗೂ ಅವನ ಕೆಲವು ಅನುಯಾಯಿಗಳು ಜಪಾನಿಗೆ ಪಲಾಯನ ಮಾಡಿದರು. ಕೆಲವು ದಿವಸಗಳ ನಂತರ ಕುಮಿಂಟಾಂಗ್ ಸದಸ್ಯರನ್ನು ರಾಷ್ಟ್ರೀಯ ಸಭೆಯಿಂದ ಹೊರಹಾಕಲಾಯಿತು ಮತ್ತು ಯೂವಾನನು ಕುಮಿಂಟಾಂಗ್ ಪಕ್ಷವನ್ನು ನಿಶೇಧಿಸಿದನು.

## 138.4 ಹೊಸ ಕುಮಿಂಟಾಂಗ್ ಪಕ್ಷ

ಕುಮಿಂಟಾಂಗ್ ಪಕ್ಷದ ಏಳಿಗೆಯು ಚೀನಾದ ಇತಿಹಾಸದ ಅತ್ಯಂತ ಪ್ರಮುಖ ಘಟನೆಗಳಲ್ಲಿ ಒಂದಾಗಿದೆ. ಈ ಪಕ್ಷದ ಸಂಘಟನೆಯೊಂದಿಗೆ ಏಕೀಕೃತ ಚೀನ ಪ್ರವರ್ಧಮಾನಕ್ಕೆ ಬರತೊಡಗಿತು. ನಿರೀಕ್ಷಿಸಿದ್ದಂತೆಯೇ ಈ ಪಕ್ಷದ ಕಾರ್ಯನಿರ್ವಹಣೆಯಲ್ಲಿ ಪ್ರಾರಂಭದ ತೊಂದರೆಗಳಿದ್ದವು. ಆದರೆ ದೇಶಕ್ಕೆ ರಾಜಕೀಯ ಐಕ್ಯತೆಯ ಅಗತ್ಯವನ್ನು ಪೂರೈಸುವಲ್ಲಿ ಕುಮಿಂಟಾಂಗ್ ಪಕ್ಷ ನೆರವಾಯಿತು. ಯೂವಾನನು ಅಧ್ಯಕ್ಷನಾದಾಗ ತನ್ನ ಅಧಿಕಾರಕ್ಕಿರುವ ಏಕೈಕ ಅಪಾಯವೆಂದರೆ ಕುಮಿಂಟಾಂಗ್ ಪಕ್ಷವೆಂಬುದನ್ನು ಅವನು ಸಂಪೂರ್ಣವಾಗಿ ಮನಗಂಡಿದ್ದನು. ಆದ್ದರಿಂದ ಅವನು ಅದನ್ನು ತುಳಿಯಲು ಅವಕಾಶವನ್ನು ಬಯಸಿದನು. 1913 ರಲ್ಲಿ ನಡೆದ ಚುನಾವಣೆಯ ಕಾಲದಲ್ಲಿ ಕುಮಿಂಟಾಂಗ್ ಪಕ್ಷ ಬಹುಮತವನ್ನು ಪಡೆಯಿತು ಮತ್ತು ಇದರಿಂದ ಯೂವಾನನಿಗೆ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಅವಕಾಶವೊಂದು ಒದಗಿ ಬಂದಿತು. ಅವನು ಕುಮಿಂಟಾಂಗ್ ಪಕ್ಷವನ್ನು ನ್ಯಾಯಬಾಹಿರವೆಂದು ಘೋಷಿಸಿದನು. ಅದರ ಸದಸ್ಯರನ್ನು ಬಂಧಿಸಲಾಯಿತು ಮತ್ತು ಅದರ ಚಟುವಟಿಕೆಗಳನ್ನು ಹತ್ತಿಕ್ಕಲಾಯಿತು. ಒಂದು ಹಂತದಲ್ಲಿ ಸನ್‌ಯಾತ್‌ಸೆನ್‌ರೂ ಸೇರಿದಂತೆ ಪಕ್ಷದ ಸಕ್ರಿಯ ಸದಸ್ಯರೆಲ್ಲರೂ ದೇಶಬಿಟ್ಟು ಹೋಗಬೇಕಾಯಿತು. ಯೂವಾನನ ಚಟುವಟಿಕೆಗಳ ವಿರುದ್ಧ ಧ್ವನಿಯೆತ್ತಲು ಪಕ್ಷವು ವಿಫಲ ದಂಗೆಗಳನ್ನು ನಡೆಸಿತು. ಆದಾಗ್ಯೂ ಯೂವಾನನ ಮರಣದ ನಂತರವೇ ಪಕ್ಷಕ್ಕೆ ಹೊಸ ಜೀವವನ್ನು ಪಡೆಯಿತು. ಅದರ ಚಟುವಟಿಕೆಗಳು ಗಣನೀಯವಾಗಿ ಹೆಚ್ಚಿದವು ಮತ್ತು ಸನ್‌ಯಾತ್‌ಸೆನರು ದೇಶಕ್ಕೆ ಹಿಂದಿರುಗಿ ಪಕ್ಷದ ಜವಾಬ್ದಾರಿಯನ್ನು ವಹಿಸಿಕೊಂಡರು. ಅವರು ಕ್ಯಾಂಟನ್‌ನಲ್ಲಿ ಒಂದು ಸರ್ಕಾರವನ್ನು ರಚಿಸಿ ಹೊಸ ಸರ್ಕಾರದ ಅಧ್ಯಕ್ಷರಾದರು.

ಸನ್‌ಯಾತ್‌ಸೆನರು ಪಕ್ಷದ ಪುನರ್ ಸಂಘಟನೆಗೆ ತಕ್ಷಣವೇ ಕ್ರಮಗಳನ್ನು ಕೈಗೊಂಡರು. ಪಕ್ಷದ ಪುನರ್ ರಚನೆಗೆ ರಷ್ಯ ಮೈಕೇಲ್ ಬೋರೋದಿನ್ ಎಂಬುವವನನ್ನು ಮುಖ್ಯ ಸಲಹಗಾರನನ್ನಾಗಿ ಕಳುಹಿಸಿಕೊಟ್ಟಿತು. ಸೋವಿಯತ್ ರಷ್ಯಾದ ಕಮ್ಯುನಿಸ್ಟ್ ಪಕ್ಷದ ಸಂಘಟನೆಯನ್ನು ಮಾದರಿಯಾಗಿ ಪರಿಗಣಿಸಲಾಯಿತು. ಸಾಮ್ರಾಜ್ಯಶಾಹಿ ವಿರುದ್ಧ ಹೋರಾಟ ಪಕ್ಷದ ಗುರಿಯಾಗಿತ್ತು.

ಅಧ್ಯಕ್ಷನು ಪಕ್ಷದ ನಾಯಕನಾಗಿದ್ದನು. 1923 ರಲ್ಲಿ ಡಾ. ಸನ್‌ಯಾತ್‌ಸೆನರನ್ನು ಪುನರ್ ಸಂಘಟಿತ ಪಕ್ಷದ ಮೊದಲ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಲಾಯಿತು. ದೇಶಕ್ಕಾಗಿ ಮಾಡಿದ ತ್ಯಾಗ ಮತ್ತು ಪಕ್ಷದ ಸಂಘಟನೆಯ ಸಾಮರ್ಥ್ಯಗಳನ್ನು ಪರಿಗಣಿಸಿ, ಅವರನ್ನು ಆಜೀವಪರ್ಯಂತ ಪಕ್ಷದ ಅಧ್ಯಕ್ಷರಾಗಿರುವಂತೆ ನಿರ್ಧರಿಸಲಾಯಿತು. ಅವರ ಸಾಮರ್ಥ್ಯ, ಪ್ರಾಮಾಣಿಕತೆ ಮತ್ತು ದಕ್ಷತೆಯನ್ನು ಗುರುತಿಸಿ ಕಾರ್ಯಾಂಗದ ನಿರ್ಧಾರಗಳ ವಿರುದ್ಧ ವಿಟೋ ಅಧಿಕಾರವನ್ನು ಅವರಿಗೆ ನೀಡಲು ನಿರ್ಧರಿಸಲಾಯಿತು. ಪಕ್ಷದ ವ್ಯವಸ್ಥೆಯಂತೆ ಸದಸ್ಯರು ಅಧ್ಯಕ್ಷರ ಆದೇಶಗಳನ್ನು ಪಾಲಿಸಬೇಕಾಯಿತು. ಅಧ್ಯಕ್ಷನಿಗೆ ಸಾಮಾನ್ಯ ಸಭೆಯ ತೀರ್ಮಾನಗಳನ್ನು ಮೀರುವ ಅಧಿಕಾರವಿತ್ತು. ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಜನರ ಜೀವನಾವಶ್ಯಕತೆಗಳಿಗೆ ಪಕ್ಷ ಬದ್ಧವಾಗಿತ್ತು. ಮೂಲಭೂತವಾದವನ್ನು ತೊಡೆದುಹಾಕಲು ಮತ್ತು ಶಾಂತಿಯನ್ನು ಏರ್ಪಡಿಸಲು ಶಿಸ್ತನ್ನು ಜಾರಿಗೆ ತರಲು ಪಕ್ಷ ತೀರ್ಮಾನಿಸಿತು. ರಷ್ಯಾದ ನೆರವಿನಿಂದ ಸೈನ್ಯವನ್ನು ತರಬೇತಿಗೊಳಿಸಲೂ ನಿರ್ಧರಿಸಲಾಯಿತು.

## 138.5 ಜನಸಾಮಾನ್ಯರ ಮೂರು ತತ್ವಗಳು

ಡಾ. ಸನ್‌ಯಾತ್‌ಸೆನರು 1924 ರಲ್ಲಿ ಪಕ್ಷದ ಅಧಿಕಾರಿಗಳನ್ನು ಉದ್ದೇಶಿಸಿ ಮಾಡಿದ ಅನೇಕ ಉಪನ್ಯಾಸಗಳು ಒಂದು ಘೋಷಣೆಯನ್ನು ಒಳಗೊಂಡಿದ್ದವು. ಇದು ಪಕ್ಷ ಮತ್ತು ಸರ್ಕಾರದ ಭವಿಷ್ಯದ ಸಂಬಂಧಗಳಿಗೆ ಒಂದು ಚೌಕಟ್ಟನ್ನು ಸಿದ್ಧಪಡಿಸಿತು. ಈ ಉಪನ್ಯಾಸಗಳನ್ನು ಸ್ಯಾನ್ ಮಿನ್ ಚು ಜನಸಾಮಾನ್ಯರ ಮೂರು ತತ್ವಗಳು ಶೀರ್ಷಿಕೆಯಡಿಯಲ್ಲಿ ಸಂಗ್ರಹಿಸಿ ಪ್ರಕಟಿಸಲಾಗಿದೆ. 1905 ರಲ್ಲಿ ತುಂಗ್ ಮೆಂಗ್ ಹುಯಿಯ ಸ್ಥಾಪನೆಯ ಕಾಲದಲ್ಲಿ ಸನ್‌ಯಾತ್‌ಸೆನರು ಈ ಕಾರ್ಯಕ್ರಮದ ಮುಖ್ಯ ಅಂಶಗಳನ್ನು ಈಗಾಗಲೇ ಹೊರಗೆಡವಿದ್ದರು. ಈ ಅಂಶಗಳನ್ನು ಈಗ ವಿಸ್ತರಿಸಲಾಗಿದೆ. ಜನಸಾಮಾನ್ಯರ ಮೂರು ತತ್ವಗಳನ್ನು ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಸಮಾಜವಾದ ಅಥವಾ ಜೀವನಾವಶ್ಯಕತೆ ಎಂಬುದಾಗಿ ಅನುವಾದ ಮಾಡಲಾಗಿದೆ.

### *138.5.1 ರಾಷ್ಟ್ರೀಯತೆ (ಮಿನ್-ತ್ಸು)*

ತನ್ನ ಮೂಲ ರೂಪದಲ್ಲಿ ರಾಷ್ಟ್ರೀಯತೆಯೆಂದರೆ ಕೇವಲ ಹೊರಗಿನಿಂದ ಬಂದ ರಾಜಸಂತತಿಯಾಗಿದ್ದ ಮಂಚೂಗಳನ್ನು ಪದಚ್ಯುತಿಗೊಳಿಸುವುದೆಂಬ ಅರ್ಥ ಬರುತ್ತದೆ. ಆದಾಗ್ಯೂ 1911 ರ ನಂತರ ನಡೆದ ಘಟನೆಗಳು ಚೀನಾವನ್ನು ಒಂದು ರಾಷ್ಟ್ರವನ್ನಾಗಿ

ರೂಪಿಸಲು ಇಷ್ಟು ಮಾತ್ರವೇ ಸಾಲದೆಂಬುದನ್ನು ತೋರಿಸಿಕೊಟ್ಟಿದ್ದವು. ಸನ್‌ಯಾತ್‌ಸೆನ್‌ರ ಮಾತಿನಲ್ಲಿ ಚೀನಾದ ಜನರು "ಒಂದು ಜಾಳಾದ ಮರಳಿನ ಹಾಳೆ" ಯಂತಿದ್ದು ಐಕ್ಯತೆಯ ಕೊರತೆಯಿತ್ತು. ಆದರ ಪರಿಷ್ಕೃತ ರೂಪದಲ್ಲಿ ರಾಷ್ಟ್ರೀಯತೆಯ ತತ್ವವು ಚೀನಿಯರು ಮಂಗೋಲಿಯನ್ನರು ಟಿಬೆಟಿಯನ್ನರು ಮತ್ತು ಇತರ ಅನೇಕ ಸಣ್ಣಪುಟ್ಟ ಗುಂಪುಗಳನ್ನು ಒಳಗೊಂಡ ಐಕ್ಯತೆಯ ಕಲ್ಪನೆಯ ಸಾಕಾರವಾಗಿತ್ತು. ಅವರ ಮೊದಲನೆ ತತ್ವವು ಸಾಮ್ರಾಜ್ಯಶಾಹಿ ವಿರೋಧಿಯಾಗಿತ್ತು. ಅವರು ಚೀನಾದಲ್ಲಿ ರಾಷ್ಟ್ರೀಯ ಉತ್ಸಾಹದ ಅಗತ್ಯ ಮತ್ತು ವಿದೇಶಿ ಹತೋಟಿಯ ವಿರುದ್ಧ ಹೋರಾಟಕ್ಕೆ ಪ್ರಾಮುಖ್ಯತೆ ನೀಡಿದರು. ಸನ್‌ಯಾತ್‌ಸೇನರ ಅಭಿಪ್ರಾಯದಲ್ಲಿ ಯಾವೊಂದು ರಾಷ್ಟ್ರವೂ ಜವಾಬ್ದಾರಿಯನ್ನು ಒಪ್ಪಿಕೊಳ್ಳದೆ ಪ್ರಾಯೋಗಿಕ ಹತೋಟಿಯನ್ನು ಹೊಂದಿದ ಅನೇಕ ವಿದೇಶೀ ರಾಷ್ಟ್ರಗಳಿದ್ದು ಚೀನಾ ಅಧೀನ ವಸಾಹತುವಾಗಿದ್ದು ಅದರ ಸ್ಥಿತಿ ವಸಾಹತುವಿಗಿಂತಲೂ ಹೀನಾಯವಾಗಿತ್ತು. ವಿದೇಶೀಯರ ಪ್ರಾಬಲ್ಯವನ್ನು ಎದುರಿಸಲು ಮತ್ತು ತನ್ನ ಆರ್ಥಿಕ ಸ್ವಾತಂತ್ರ್ಯವನ್ನು ಪುನಃ ಪಡೆಯಲು ಚೀನಾ ತನ್ನ ರಾಷ್ಟ್ರೀಯ ಉತ್ಸಾಹವನ್ನು ಅಭಿವೃದ್ಧಿಪಡಿಸಿ ಬೆಳೆಸಬೇಕಾಗಿತ್ತು. ಸನ್‌ಯಾತ್‌ಸೆನರ ಅಭಿಪ್ರಾಯದಲ್ಲಿ ರಾಷ್ಟ್ರೀಯತೆ ಚೀನಾಕ್ಕೆ ಹೊಸದಾಗಿರಲಿಲ್ಲ ಆದರೆ ಪರಕೀಯ ರಾಜಸಂತತಿ ಅದನ್ನು ಕಡೆಗಣಿಸಿದ್ದು ಮತ್ತು ವಿಶ್ವ ಪ್ರಜೆಯ ಉಪದೇಶದಿಂದ ಅಪಾಯಕ್ಕೊಳಗಾಗಿತ್ತು, ಸನ್‌ಯಾತ್‌ಸೆನರಿಗೆ ಅಂತರರಾಷ್ಟ್ರೀಯತೆಗಿಂತಲೂ ಮೊದಲು ರಾಷ್ಟ್ರೀಯತೆ ಮಾನವನ ಬೆಳವಣಿಗೆಯಲ್ಲಿ ಅತ್ಯಗತ್ಯ ಹಂತವಾಗಿತ್ತು.

### *138.5.2 ಪ್ರಜಾಪ್ರಭುತ್ವ (ಮಿನ್- ಚು)*

ಸನ್‌ಯಾತ್‌ಸೆನರ ಎರಡನೇ ತತ್ವವೇ, ಪ್ರಜಾಪ್ರಭುತ್ವ ಅವರ ಪ್ರಜಾಪ್ರಭುತ್ವದ ಕಲ್ಪನೆ ನಾಲ್ಕು ಮೂಲಗಳಿಂದ ಹೊರಹೊಮ್ಮಿದ್ದಿತು.

1. ಪಾಶ್ಚಿಮಾತ್ಯ ಗಣತಂತ್ರವಾದ
2. ನಾಯಕತ್ವ, ಪ್ರಜಾಭಿಪ್ರಾಯ ಸಂಗ್ರಹ ಮತ್ತು ಚುನಾವಣೆಯನ್ನು ಹಿಂತೆಗೆದುಕೊಳ್ಳುವ ಸ್ವಿಡ್ಜರ್ಲೆಂಡಿನ ಸಿದ್ಧಾಂತ
3. ಸೋವಿಯತ್ ಪ್ರಜಾಸತ್ತಾತ್ಮಕ ಕೇಂದ್ರೀಕರಣವಾದ ಮತ್ತು
4. ಚೀನಿಯರ ಪರೀಕ್ಷೆ ಮತ್ತು ಹತೋಟಿಯ ಕಲ್ಪನೆ.

ಸನ್‌ಯಾತ್‌ಸೆನರು ಪ್ರಜಾಸತ್ತಾತ್ಮಕ ಆಡಳಿತದ ಪರವಾಗಿದ್ದರು. ಮಂಚೂಗಳ ಅಧಿಕಾರ ತ್ಯಾಗದ ನಂತರ ಅವರು ಗಣರಾಜ್ಯದ ಉದಯಕ್ಕೆ ಕಾರಣರಾಗಿದ್ದರು. ಇದೇ ವೇಳೆಯಲ್ಲಿ ಅವರು ಚೀನಾಕ್ಕೆ ಬಲಿಷ್ಠ ಸರ್ಕಾರದ ಅಗತ್ಯವಿದೆಯೆಂದು ಅರಿತರು. ಅಧಿಕಾರ ಜನರಲ್ಲಿದ್ದು, ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಸರ್ಕಾರ ಬಲಿಷ್ಠವಾಗಿರಬೇಕಾಗಿತ್ತು. ಆದ್ದರಿಂದ ಪ್ರಜಾಪ್ರಭುತ್ವವನ್ನು ಪೂರ್ಣಪ್ರಮಾಣದಲ್ಲಿ ಅನುಷ್ಠಾನಕ್ಕೆ ತರಲು ಸಮಯ ಬೇಕಾಗುವುದೆಂದು ಅವರು ನಂಬಿದ್ದರು. ಮೊದಲಿಗೆ ಕೇಂದ್ರ ಸರ್ಕಾರವು ಸಾಕಷ್ಟು ಸೇನಾ ಸಾಮರ್ಥ್ಯವನ್ನು ಹೊಂದಿದ್ದು ಪ್ರಾಂತೀಯ ಊಳಿಗಮಾನ್ಯ ಪ್ರಭುಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವ ಸ್ಥಿತಿಯಲ್ಲಿರಬೇಕಾಗಿದ್ದಿತು. ಹೀಗೆ ಹತೋಟಿಗೊಳಪಟ್ಟ ಪ್ರಾಂತಗಳಿಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನೀಡಬೇಕಾಗಿದ್ದಿತು. ಪ್ರಾಂತಗಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ನೀಡಬೇಕಾಗಿದ್ದಿತು. ಪ್ರಾಂತಗಳಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಜಾರಿಗೆ ತಂದ ನಂತರ ಕೇಂದ್ರದಲ್ಲಿಯೂ ಅಂತಹ ಸಂಸ್ಥೆಗಳನ್ನು ಸ್ಥಾಪಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿತ್ತು. ಅದು ರಾಜಕೀಯ ಪ್ರತಿನಿಧಿತ್ವದ ಒಂದು ಅವಧಿಗೆ ಅವಕಾಶ ಮಾಡಿಕೊಟ್ಟು ಆ ಅವಧಿಯಲ್ಲಿ ಅನುಭವವುಳ್ಳ ನಾಯಕರು ಸ್ವಯಮಾಡಳಿತದ ಕಡೆಗೆ ಅಜ್ಞಾನಿಗಳಾದ ಮತ್ತು ಶೋಚನೀಯ ಸ್ಥಿತಿಯಲ್ಲಿದ್ದ ಜನರಿಗೆ ಮಾರ್ಗದರ್ಶನ ನೀಡಬೇಕಾಗಿತ್ತು.

### *138.5.3 ಜನರ ಜೀವನಾವಶ್ಯಕತೆ*

ಜನರ ಜೀವನಾವಶ್ಯಕತೆ (ಮಿನ್ ಶೆಂಗ್) ಮೂರನೇ ತತ್ವವಾಗಿದ್ದು ಅದನ್ನು ಅನೇಕ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತಗಳನ್ನು ಒಳಗೊಂಡಂತೆ ಬಳಸಲಾಗಿದ್ದ ಪದಗುಚ್ಛವಾಗಿತ್ತು. ಸನ್‌ಯಾತ್‌ಸೆನ್ ಮತ್ತು ಅವರ ಅನುಯಾಯಿಗಳು ಮಿನ್-ಶೆಂಗ್‌ನ್ನು ಸಮಾಜವಾದಕ್ಕೆ ಸಮಾನಾಂತರವಾಗಿ ಈ ಕಲ್ಪನೆಯ ಜನಪ್ರಿಯತೆಗಾಗಿ ಆಗಾಗ್ಗೆ ಬಳಸಿದ್ದಾರೆ. ಆದರೆ ಸನ್‌ಯಾತ್‌ಸೆನರು ಮಾರ್ಕ್ಸ್‌ನ ಸಿದ್ಧಾಂತದ ಮೂಲ ತತ್ವಗಳನ್ನು ತಿರಸ್ಕರಿಸಿದ್ದಾರೆ. ಸನ್‌ಯಾತ್‌ಸೆನರು ಎಂದಿಗೂ ಒಂದು ನಿರ್ದಿಷ್ಟವಾದ ಆರ್ಥಿಕ ಕಾರ್ಯಕ್ರಮವನ್ನು

ಅಭಿವೃದ್ಧಿಪಡಿಸಲಿಲ್ಲ. ಆದಾಗ್ಯೂ ಅವರು ಭೂಮಾಲೀಕತ್ವದ ಸಮಾನ ಹಂಚಿಕೆಯನ್ನು ಬೆಂಬಲಿಸಿದರು. ಇದಕ್ಕಾಗಿ ಸರ್ಕಾರವು ಭೂಮಿಯನ್ನು ವಾಪಸ್ ಖರೀದಿಸಬೇಕೆಂದು ಅವರು ಸೂಚಿಸಿದರು. ಸೂಕ್ತ ಬೆಲೆಯನ್ನು ನಿರ್ಧರಿಸಲು ಭೂಮಾಲೀಕರು ತನ್ನ ಭೂಮಿಯ ಮೌಲ್ಯವನ್ನು ಘೋಷಿಸಬೇಕಾಗಿತ್ತು. ಬೆಲೆ ಹೆಚ್ಚಾಗಿದ್ದಲ್ಲಿ ಸರ್ಕಾರ ಅದಕ್ಕೆ ತಕ್ಕಂತೆ ತೆರಿಗೆಯನ್ನು ವಿಧಿಸಬೇಕಾಗಿತ್ತು. ಬೆಲೆ ಕಡಿಮೆಯಿದ್ದಲ್ಲಿ ಅದು ಕಡಿಮೆ ತೆರಿಗೆ ವಿಧಿಸಬೇಕಾಗಿತ್ತು ಅಥವಾ ಭೂಮಿಯನ್ನು ಕೊಂಡುಕೊಳ್ಳಬೇಕಾಗಿತ್ತು. ಸನ್‌ಯಾತ್‌ಸೆನರು ಸಂಪತ್ತಿನ ಅಸಮಾನತೆ ತೊಡೆದು ಹಾಕಲು ಮತ್ತು ಉತ್ಪಾದನೆಯ ಹೆಚ್ಚಳಕ್ಕೆ ಬಂಡವಾಳವನ್ನು ಒದಗಿಸಲು ಬಯಸಿದ್ದರು. ಚೀನಾದ ಕೈಗಾರಿಕಾ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ಸನ್‌ಯಾತ್‌ಸೆನರು ತೆರಿಗೆಯ ಸ್ವಾಯತ್ತತೆಯನ್ನು ಹಿಂದಕ್ಕೆ ಪಡೆಯುವ ಮತ್ತು ರಕ್ಷಣಾತ್ಮಕ ತೆರಿಗೆ ವ್ಯವಸ್ಥೆಯನ್ನು ಏರ್ಪಡಿಸುವ ಪ್ರಾಮುಖ್ಯತೆಯನ್ನು ತಿಳಿಸಿದರು. ಕೃಷಿಗೆ ಸಂಬಂಧಿಸಿದ ಸನ್‌ಯಾತ್‌ಸೆನರ ಶಿಫಾರಸ್ಸುಗಳು ಮುಖ್ಯವಾಗಿ ತಂತ್ರಜ್ಞಾನದ ಅಭಿವೃದ್ಧಿಯ ಅಗತ್ಯಕ್ಕೆ ಮಾತ್ರವೇ ಸೀಮಿತವಾಗಿದ್ದವು.

ಚೀನಾದ ರಾಷ್ಟ್ರೀಯ ಸಂವಿಧಾನಕ್ಕೆ ಆಧಾರವಾಗಿದ್ದ 'ಜನಸಾಮಾನ್ಯರ ಮೂರು ತತ್ವಗಳು'ಚೀನಾದ ಇತಿಹಾಸದಲ್ಲಿ ಪ್ರಮುಖವಾಗಿವೆ. ಚೀನಾವನ್ನು "ಮೂರು ತತ್ವಗಳ ಗಣರಾಜ್ಯ" ವೆಂದು ಘೋಷಿಸಲಾಯಿತು. ಕೇಂದ್ರೀಕರಣದೊಂದಿಗೆ ಪ್ರಾಂತೀಯ ಸ್ವಾಯತ್ತತೆಯನ್ನು ಹೊಂದಿಸಲು ಐದು ರಾಷ್ಟ್ರಗಳ ಸಂವಿಧಾನಗಳನ್ನು ಅಳವಡಿಸಿಕೊಳ್ಳಲಾಗಿತ್ತು. ಈ ಮೂರು ತತ್ವಗಳು ಶಿಕ್ಷಣಕ್ಕೂ ಆಧಾರವಾದವು. ಮಿಗಿಲಾಗಿ ಸನ್‌ಯಾತ್‌ಸೆನರು ಚೀನಾದ ಅಂತರರಾಷ್ಟ್ರೀಯ ಬೆಳವಣಿಗೆಯಲ್ಲಿ ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಯ ವಿಶಾಲ ಯೋಜನೆಯನ್ನು ಅಧಿಕೃತ ಮಾರ್ಗದರ್ಶಿಯನ್ನಾಗಿ ಸ್ವೀಕರಿಸಲಾಗಿತ್ತು. ಯೋಜನೆಗಳನ್ನು ಸುದೀರ್ಘವಾಗಿ ಸಿದ್ಧಪಡಿಸಲು 1941 ರಲ್ಲಿ ತಡವಾಗಿ ರಾಷ್ಟ್ರೀಯ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. ಡಾ. ಸನ್‌ಯಾತ್‌ಸೆನರ ಮೊದಲ ತತ್ವವನ್ನು ಕುಮಿಂಟಾಂಗ್ ಪಕ್ಷದ ರಾಷ್ಟ್ರೀಯತೆಯ ಕಾಯಿದೆಯಲ್ಲಿ ಜಾರಗೊಳಿಸಲಾಗಿದ್ದು ಅದು ಚೀನಾದ ಹೊರಗೆ ವ್ಯಾಪಕ ಮತ್ತು ದುರದೃಷ್ಟಕರ ಪರಿಣಾಮವನ್ನು ಬೀರಿತು. ಜನಸಾಮಾನ್ಯರ ಮೂರು ತತ್ವಗಳು ಫಾರ್ಮೋಸಾದ ರಾಷ್ಟ್ರೀಯ ಸರ್ಕಾರದ ಸಂವಿಧಾನಕ್ಕೆ ಆಧಾರವಾದುವು. ಆದರೆ 'ಉಳುವವನಿಗೆ ಭೂಮಿ' ಎಂಬ ತತ್ವದ ಹೊರತಾಗಿ ಚೀನೀ ಜನತಾ ಗಣರಾಜ್ಯ ಸರ್ಕಾರ ಅದನ್ನು ಕಡೆಗಣಿಸಿತು.

## 138.6 ಡಾ. ಸನ್‌ಯಾತ್‌ಸೆನರ ನಿಧನ ಮತ್ತು ಅದರ ಮಹತ್ವ

ಸನ್‌ಯಾತ್‌ಸೆನರ ಎರಡು ಮಿಲಿಯನ್ ಚೀನಿಯರು ಎಂಬ ಕೃತಿಯು ನವಚೀನಾದ ಹಾರೈಕೆಗಳು ಮತ್ತು ಮಹತ್ವಾಕಾಂಕ್ಷೆಗಳ ಸಾರವಾಗಿದೆ. ಚೀನಿಯರಿಗೆ ಸನ್‌ಯಾತ್‌ಸೆನರು ಕೇವಲ ಒಬ್ಬ ರಾಜಕಾರಣಿ ಅಥವಾ ರಾಜತಂತ್ರ ನಿಪುಣನಾಗಿರಲಿಲ್ಲ. ಅವರು ದೇವದೂತರಾಗಿದ್ದರು. ವೈಯುಕ್ತಿಕವಾಗಿ ಅವರು ಪ್ರಾಮಾಣಿಕರೂ, ನಿಸ್ವಾರ್ಥಿಗಳೂ ಆಗಿದ್ದು, ಅವರ ಶತೃಗಳೂ ಸಹ ಅವರ ಪ್ರಾಮಾಣಿಕ ಧ್ಯೇಯಗಳ ಬಗ್ಗೆ ಎಂದಿಗೂ ಸಂಶಯವನ್ನು ಹೊಂದಿರಲಿಲ್ಲ. ಡಿಸೆಂಬರ್ 1924 ರಲ್ಲಿ ಉತ್ತರ ಚೀನಾದ ಸೇನಾ ನಾಯಕರು ಸನ್‌ಯಾತ್‌ಸೆನರನ್ನು ಚೀನಾದ ಶಾಂತಿಯುತ ಏಕೀಕರಣಕ್ಕಾಗಿ ಮಾತುಕತೆಗಳಿಗಾಗಿ ಪೀಕಿಂಗ್‌ಗೆ ಆಹ್ವಾನಿಸಿದರು. ಈ ವೇಳೆಗಾಗಲೇ ತೀವ್ರವಾಗಿ ಅಸ್ವಸ್ಥರಾಗಿದ್ದ ಅವರು ರೋಗದ ಹಾಸೆಗಯಲ್ಲಿಯೇ ಪೀಕಿಂಗ್‌ಗೆ ತೆರಳಿದರು. ಅದು ತನ್ನ ನೆಚ್ಚಿನ ದೇಶದ ಐಕ್ಯತೆಯ ಕಡೆಯ ಪ್ರಯತ್ನವಾಗಿದ್ದು, ರಾಜಧಾನಿಗೆ ಬಂದಿಳಿದ ನಂತರ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ಅವರು ಮಾರ್ಚ್ 12, 1925 ರಂದು ಪೀಕಿಂಗ್‌ನಲ್ಲಿ ನಿಧನರಾದರು. ರಾಷ್ಟ್ರೀಯ ಸರ್ಕಾರದ ಸ್ಥಾಪನೆಯ ನಂತರ ಅವರ ಮೃತದೇಹವನ್ನು ನಾನ್‌ಕಿಂಗ್‌ಗೆ ಸಾಗಿಸಿ ಅಲ್ಲಿ ಅದನ್ನು ಭವ್ಯವಾಗಿ ನಿರ್ಮಿಸಲಾದ ವಸ್ತು ಸಂಗ್ರಹಾಲಯದಲ್ಲಿ ಇಡಲಾಯಿತು.

ಡಾ. ಸನ್‌ಯಾತ್‌ಸೆನರು ತಮ್ಮ ಸಾವಿಗೆ ಮೊದಲು ತಮ್ಮ ಪಕ್ಷದ ಜನರಿಗೆ ತಾವು ಬಿಟ್ಟು ಹೋಗಿರುವ ಮರಣ ಶಾಸನದಲ್ಲಿ ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಜನಸಾಮಾನ್ಯರ ಜೀವನಾವಶ್ಯಕತೆಗಳಿಗಾಗಿ ಕೆಲಸವನ್ನು ಮುಂದುವರಿಸುವಂತೆ ತಿಳಿಸಿದ್ದಾರೆ. ಅವರ ನಿಧನವು ಚೀನಾದ ಮೇಲೆ ಅಗಾಧ ಪರಿಣಾಮವನ್ನು ಬೀರಿತು. ಡಾ. ಸನ್‌ಯಾತ್‌ಸೆನರು ತಮ್ಮ ಪಕ್ಷದ ಕಾರ್ಯಕರ್ತರಿಗೆ ಉತ್ಸಾಹದ ಮೂಲವಾಗಿದ್ದರು. ಅವರು ವಿವೇಕ ಮತ್ತು ಜ್ಞಾನದ ಅವತಾರವಾಗಿದ್ದರು. ದೇಶವು ಅವರನ್ನು ತಮ್ಮ ರಾಷ್ಟ್ರೀಯ ಸಾರ್ವಭೌಮಾಧಿಕಾರದ ರಕ್ಷಕನೆಂದು ಪರಿಗಣಿಸಿದೆ.

ಡಾ. ಸನ್‌ಯಾತ್‌ಸೆನರು ಆಧುನಿಕ ಯುಗದ ಮಹಾಪುರುಷರಲ್ಲಿ ಒಬ್ಬರು. ಆದರೆ ತಮ್ಮ ಕಾರ್ಯವನ್ನು ಪೂರೈಸುವ ಮೊದಲೇ ಅವರು ನಿಧನರಾದರು. ಅವರು ಒಬ್ಬ ಸಂತರಾಗಿದ್ದರು. ಧರ್ಮ ಸಂಸ್ಥಾಪಕರಾಗಿದ್ದರು. ತಮ್ಮ ದೇಶದ ಹಿತಕ್ಕಾಗಿ ಅಪಾರ ತ್ಯಾಗವನ್ನು ಮಾಡಿದ ಡಾ. ಸನ್‌ಯಾತ್‌ಸೆನರು ನಿಸ್ಸಂಶಯವಾಗಿಯೂ ಒಬ್ಬ ಸತ್ಪುರುಷರಾಗಿದ್ದರು.

## 138.7 ಮುಕ್ತಾಯ

ಈ ಘಟಕದಲ್ಲಿ ನಾವು ಚೀನಾದ ರಾಜಕೀಯದಲ್ಲಿ ಡಾ. ಸನ್‌ಯಾತ್‌ಸೇನ್ ಮತ್ತು ಅವರ ಪಕ್ಷದ ಪಾತ್ರದ ಕೆಲವು ಪ್ರಮುಖ ವಿಷಯಗಳ ಬಗ್ಗೆ ನಿಮ್ಮೊಂದಿಗೆ ಚರ್ಚಿಸುವ ಪ್ರಯತ್ನವನ್ನು ಮಾಡಿದ್ದೇವೆ. ಕುಮಿಂಟಾಂಗ್ ಪಕ್ಷದ ಏಳಿಗೆ ಮತ್ತು ಚೀನಾದ ರಾಜಕೀಯ ರಂಗದ ಮೇಲೆ ಸನ್‌ಯಾತ್‌ಸೇನರು ಕಾಣಿಸಿಕೊಂಡುದುದು ಆ ದೇಶದ ಇತಿಹಾಸದಲ್ಲಿ ತಿರುವಿನ ಬಿಂದುಗಳಾಗಿದ್ದವು. ಈ ಕಾಲದಲ್ಲಿ ಚೀನಾದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಬಲ ಮತ್ತು ಅಧಿಕಾರ ಪಡೆದವು. ಚೀನಾದೊಂದಿಗೆ ಅಸಮಾನತೆಯ ಒಪ್ಪಂದಗಳನ್ನು ಮಾಡಿಕೊಳ್ಳಲು ಬಯಸಿದ್ದು ಅಥವಾ ನಿಜವಾಗಿಯೂ ಈಗಾಗಲೇ ಅಂತಹ ಒಪ್ಪಂದಗಳನ್ನು ಮಾಡಿಕೊಂಡಿದ್ದ ಎಲ್ಲಾ ಪ್ರಬಲ ರಾಷ್ಟ್ರಗಳ ವಿರುದ್ಧ ಚೀನಾ ದೃಢವಾಗಿ ನಿಂತಿತು. ಆದಾಗ್ಯೂ ಆಂತರಿಕ ಒಡಕುಗಳಿಂದಾಗಿ ಪಕ್ಷದ ಕಾರ್ಯಗಳಿಗೆ ತಡೆಯುಂಟಾಯಿತು. ಆದರೆ ದೇಶಕ್ಕೆ ಉತ್ತಮ ನಾಯಕತ್ವ ನೀಡಿದ ಡಾ. ಸನ್‌ಯಾತ್‌ಸೇನರು ಇಂತಹ ಪರಿಸ್ಥಿತಿಯಿಂದ ಚೀನಾವನ್ನು ಪಾರು ಮಾಡಿದರು.

ಈ ಘಟಕದಿಂದ ನೀವು ಡಾ. ಸನ್‌ಯಾತ್‌ಸೇನರು ತುಂಗ್ ಮೆಂಗ್ ಹುಯಿ ಎಂಬ ಕ್ರಾಂತಿಕಾರಿ ಪಕ್ಷವನ್ನು ಸ್ಥಾಪಿಸಿದರೆಂಬುದನ್ನು ಅರಿತಿರಿ. ಅದು ಮಂಚೂಗಳ ಕಾಲದಲ್ಲಿ ತನ್ನ ಹೋರಾಟವನ್ನು ಮುಂದುವರಿಸಿತು. ಇದು ಕುಮಿಂಟಾಂಗ್ ಪಕ್ಷಕ್ಕೆ ಮೂಲವಾಯಿತು. ಡಾ. ಸನ್‌ಯಾತ್‌ಸೇನರು ಮುಂದೆ ಚೀನಾದಲ್ಲಿ ತಲೆದೋರಿದ್ದ ಅರಾಜಕತೆಯ ಲಾಭ ಪಡೆದು ಅಲ್ಲಿ ಒಂದು ಸರ್ಕಾರವನ್ನು ಸ್ಥಾಪಿಸಿದರು. ಅವರು ಅದರ ಮೊದಲ ಅಧ್ಯಕ್ಷರಾದರು. 1912 ರಲ್ಲಿ ಚೀನಾದಲ್ಲಿ ರಾಜಪ್ರಭುತ್ವ ಕೊನೆಗೊಂಡಿತು ಮತ್ತು ಯೂವಾನನು ಹೊಸದಾಗಿ ಜನ್ಮತಾಳಿದ ಗಣರಾಜ್ಯದ ಮೊದಲ ಅಧ್ಯಕ್ಷನಾದನು. ಏಕೀಕೃತ ಚೀನಾವನ್ನು ನೋಡುವ ಉದ್ದೇಶದಿಂದ ಸನ್‌ಯಾತ್‌ಸೇನರು ಯೂವಾನನ ಪರವಾಗಿ ತಮ್ಮ ಹಂಗಾಮಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಅವರು ರಷ್ಯಾದ ಕಮ್ಯುನಿಸ್ಟ್ ಪಕ್ಷದ ಮಾದರಿಯಲ್ಲಿ ತಮ್ಮ ಪಕ್ಷವನ್ನು ಪುನರ್ ಸಂಘಟಿಸಿದರು. ಕುಮಿಂಟಾಂಗ್ ಪಕ್ಷವು ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಜನರ ಜೀವನಾವಶ್ಯಕತೆಗಳಿಗೆ ಬದ್ಧವಾಗಿತ್ತು.

ಈ ಘಟಕದಿಂದ ನೀವು ಊಳಿಗಮಾನ್ಯ ಪ್ರಭುಗಳು ಮತ್ತು ಸಾಮ್ರಾಜ್ಯಷಾಹಿಗಳು ಕುಮಿಂಟಾಂಗ್ ಪಕ್ಷದ ಜನಪ್ರಿಯತೆಯ ಬಗ್ಗೆ ಅಸೂಹೆಗೊಂಡರು ಎಂಬುದನ್ನು ತಿಳಿದಿರಿ. ಅವರು ಕ್ಯಾಂಟನ್‌ನಲ್ಲಿ ಒಂದು ಪ್ರತ್ಯೇಕ ಸರ್ಕಾರವನ್ನು ಸಂಘಟಿಸಿದರು. ಅಲ್ಲದೆ ಡಾ. ಸನ್‌ಯಾತ್‌ಸೇನರು ಪಕ್ಷವನ್ನು ಒಂದುಗೂಡಿಸಿದರು. ಅವರು 1925 ರಲ್ಲಿ ನಿಧನರಾದರು. ಕುಮಿಂಟಾಂಗ್ ಪಕ್ಷದ ನಾಯಕತ್ವದಲ್ಲಿ ಚೀನ ಎಲ್ಲಾ ಅಸಮಾನ ಒಪ್ಪಂದಗಳನ್ನು ತಿರಸ್ಕರಿಸುವ ಸ್ಥಿತಿಯಲ್ಲಿತ್ತು ಮತ್ತು ತನ್ನ ಮುಖವನ್ನು ಪಾಶ್ಚಿಮಾತ್ಯ ದೇಶಗಳ ಕಡೆಯಿಂದ ರಷ್ಯದ ಕಡೆಗೆ ತಿರುಗಿಸಿತು.

## 138.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ-ಉತ್ತರಗಳು

*I* *ಈ ಕೆಳಗಿನವುಗಳಿಗೆ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.*

1. ತುಂಗ್ ಮೆಂಗ್ ಹುಯ್
2. ಕುಮಿಂಟಾಂಗ್ ಪಕ್ಷ
3. ಸುಂಗ್ ಚುಂಗ್ ಹುಯ್
4. ಅಧೀನ-ವಸಹಾತು

*II* *ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.*

1. ಮಿನ್-ತ್ಸು
2. ಮಿನ್-ಚುವಾನ್
3. ಮಿನ್-ಶೆಂಗ್

*III* *ಈ ಕೆಳಗಿನವುಗಳಲ್ಲಿ ಪ್ರತಿಯೊಂದಕ್ಕೂ 20 ವಾಕ್ಯಗಳಲ್ಲಿ ಉತ್ತರ ಬರೆಯಿರಿ.*

1. ಚೀನಾದಲ್ಲಿ ಡಾ. ಸನ್‌ಯಾತ್‌ಸೆನರ ಜೀವನ ಮತ್ತು ಕಾರ್ಯವನ್ನು ಸಂಕ್ಷಿಪ್ತವಾಗಿ ಚಿತ್ರಿಸಿ.
2. 1911 ರ ಚೀನಾದ ಕ್ರಾಂತಿಯಲ್ಲಿ ಡಾ. ಸನ್‌ಯಾತ್‌ಸೆನರ ಪಾತ್ರವನ್ನು ವಿಶ್ಲೇಷಿಸಿ.

## 138.9 ಅಧ್ಯಯನಕ್ಕೆ ಪುಸ್ತಕಗಳು


1. Latourette : The Far East
2. Brain Harrison : South East Asia
3. Clyde .P.H. : The Far East
4. R.S. Gupta : History of Modern China

## ಘಟಕ - 139

# ಮೊದಲನೆ ಮಹಾಯುದ್ಧದ ಕಾಲದಲ್ಲಿ ಚೀನ

*ರಚನೆ*


139.0 ಉದ್ದೇಶಗಳು

139.1 ಪೀಠಿಕೆ

139.2 ಯುದ್ಧದ ಕಾಲದಲ್ಲಿ ಚೀನಾದ ಪರಿಸ್ಥಿತಿ

139.3 ಚೀನಾದ ತಟಸ್ಥತೆ

139.4 ಚೀನಾದ ಯುದ್ಧ ಪ್ರವೇಶ

139.5 ಯುದ್ಧ ಪ್ರವೇಶದಿಂದ ಚೀನಾಕ್ಕಾದ ಲಾಭಗಳು

139.6 ಶಾಂತಿ ಒಪ್ಪಂದದಲ್ಲಿ ಚೀನ

139.7 ಪ್ರಾಮುಖ್ಯತೆ ಮತ್ತು ಪರಿಣಾಮಗಳು

139.8 ಮುಕ್ತಾಯ

139.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ ಉತ್ತರಗಳು

139.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 139.0 ಉದ್ದೇಶಗಳು

ಈ ಘಟಕದ ಉದ್ದೇಶವೆಂದರೆ ಮೊದಲನೆ ಮಹಾಯುದ್ಧದ ಕಾಲದಲ್ಲಿ ಚೀನಾದ ವಿಭಿನ್ನ ದೃಷ್ಟಿಕೋನಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುವುದು. ಈಘಟಕವನ್ನು ಅಧ್ಯಯನ ಮಾಡಿದ ನಂತರ ನೀವು ಇವುಗಳ ಬಗ್ಗೆ ತಿಳಿದುಕೊಳ್ಳುವಂತಾಗಬೇಕು.

* ಯುದ್ಧದ ಕಾಲದಲ್ಲಿ ಚೀನಾದ ಪರಿಸ್ಥಿತಿ
* ಮೊದಲನೆ ಮಹಾಯುದ್ಧದಲ್ಲಿ ಭಾಗವಹಿಸುವಂತೆ ಚೀನಾದ ಮೇಲೆ ಒತ್ತಡ ಹೇರಿದ ಸನ್ನಿವೇಶಗಳು
* ಯುದ್ಧ ಪ್ರವೇಶದಿಂದ ಚೀನಾಕ್ಕಾದ ಲಾಭಗಳು
* ಶಾಂತಿ ಸಮ್ಮೇಳನದಲ್ಲಿ ಚೀನಾ
* ಯುದ್ಧದಲ್ಲಿ ಚೀನಾದ ಪ್ರವೇಶದ ಮಹತ್ವ ಮತ್ತು ಪರಿಣಾಮಗಳು

## 139.1 ಪೀಠಿಕೆ

ಮೊದಲನೆ ಮಹಾಯುದ್ಧದಲ್ಲಿ ಚೀನಾಕ್ಕೆ ನೇರವಾಗಿ ಯಾವ ಆಸಕ್ತಿಯೂ ಇರಲಿಲ್ಲ. ಆದರೆ ಅದರ ಚಪಲಗಳು ಅದನ್ನು ಯುದ್ಧದ ಮುಷ್ಟಿಗೆ ಸಿಲುಕಿಸಿದವು ಮತ್ತು ಅನೇಕ ಬಗೆಯಲ್ಲಿ ವ್ಯತಿರಿಕ್ತ ಪರಿಣಾಮವನ್ನುಂಟು ಮಾಡಿದವು. ಅನೇಕ ಸನ್ನಿವೇಶಗಳು ಚೀನಾವನ್ನು ಬಲವಂತವಾಗಿ ಮೊದಲನೆ ಮಹಾಯುದ್ಧದಲ್ಲಿ ಭಾಗವಹಿಸುವಂತೆ ಮಾಡಿದವು. ಮೊದಲನೆ ಮಹಾಯುದ್ಧ ಆರಂಭವಾದುದು ಜಪಾನಿಗೆ ಸುವರ್ಣಾವಕಾಶವನ್ನು ಒದಗಿಸಿತು. ಯುರೋಪ್ ಯುದ್ಧದಲ್ಲಿ ಸಂಪೂರ್ಣವಾಗಿ ಮುಳುಗಿಹೋಗಿದ್ದು ದೂರಪ್ರಾಂತ್ಯದಲ್ಲಿ ತನ್ನ ಹಿಡುವಳಿಗಳ ಬಗ್ಗೆ ಸ್ವಲ್ಪವೇ ಗಮನವನ್ನು ಹರಿಸಲು ಸಾಧ್ಯವಾಯಿತು. ಚೀನಾಕ್ಕೆ ತನ್ನ ದೌರ್ಬಲ್ಯದ ಅರಿವಿದ್ದು ಯುದ್ಧವನ್ನು ತನ್ನ ನೆಲ ಮತ್ತು ನೀರಿನಿಂದ ಮತ್ತು ತನ್ನ ಸಾಮ್ರಾಜ್ಯದಲ್ಲಿದ್ದ ವಿದೇಶಿ ಗುತ್ತಿಗೆ ಪ್ರದೇಶಗಳಿಂದ ದೂರವಿಡುವಂತೆ ಕೇಳಿಕೊಂಡಿತು. ಅದು ತನ್ನ ತಟಸ್ಥತೆಯನ್ನು ಘೋಷಿಸಿಕೊಂಡಿತು. ಅಮೇರಿಕಾ ಮೂಲಕ ಅದರ ಮಿತ್ರರಿಗೆ ತನ್ನ ಮನವಿಯನ್ನು ಗೌರವಿಸುವ ಭರವಸೆಯನ್ನು ನೀಡುವಂತೆ ವಿನಂತಿಸಿಕೊಂಡಿತು. ಈ ದಿಸೆಯಲ್ಲಿ ಅಮೇರಿಕಾ ಕೆಲವು ಪ್ರಯತ್ನಗಳನ್ನು ಮಾಡಿತು. ಆದರೆ ಯುದ್ಧ ನಿರತವಾಗಿದ್ದ ರಾಷ್ಟ್ರಗಳ ಪೈಕಿ ಲಾಭವಾಯಿತೇ ವಿನಃ ನಷ್ಟವಾಗಲಿಲ್ಲ. ಉಳಿದ ರಾಷ್ಟ್ರಗಳು ಜರ್ಮನಿಯನ್ನು ಚೀನಾದಿಂದ ಹೊರಹಾಕುವುದನ್ನು ನೋಡುವ ಖಚಿತ ಭರವಸೆಯಲ್ಲಿದ್ದವು.

ಜರ್ಮನಿ ತನ್ನ ಶಸ್ತ್ರಸಜ್ಜಿತ ನೌಕೆಗಳನ್ನು ಚೀನಾಮತ್ತು ಜಪಾನಿನ ಸಮುದ್ರದಿಂದ ಹಿಂದಕ್ಕೆ ಕರೆಸಿಕೊಂಡು ಚೀನಾದ ಕಿಯೊಚೌ ಪ್ರಾಂತ್ಯದಲ್ಲಿ ತನ್ನ ಗುತ್ತಿಗೆಯ ಪ್ರದೇಶಗಳನ್ನು ತನಗೆ ಒಪ್ಪಿಸುವಂತೆ ಜಪಾನ್ ಸಲಹೆ ಮಾಡಿತು. ಇದಕ್ಕೆ ಜರ್ಮನಿ ಪ್ರತಿಕ್ರಿಯೆ ನೀಡದಿದ್ದುದರಿಂದ ಆಗಸ್ಟ್ 1914 ರಲ್ಲಿ ಜಪಾನ್ ಯುದ್ಧವನ್ನು ಘೋಷಿಸಿತು. ಕಿಯೊಚೌವನ್ನು ವಶಪಡಿಸಿಕೊಳ್ಳಲು ಅದು ತನ್ನ ಪಡೆಗಳನ್ನು ಕಳುಹಿಸಿತು. ಕೆಯೆಂಚೌ ವಿರುದ್ಧ ಮುನ್ನುಗ್ಗುವಾಗ ಜಪಾನ್ ತನ್ನ ಪಡೆಗಳನ್ನು ಚೀನಾದ ಪ್ರದೇಶದ ಮೂಲಕ ಕಳುಹಿಸುವಾಗ ಮತ್ತು ತಮಗೆ ಅಡ್ಡ ಬಂದ ಚೀನಿಯರನ್ನು ಅತ್ಯಂತ ಕ್ರೂರವಾಗಿ ನಡೆಸಿಕೊಳ್ಳುವ ಮೂಲಕ ಚೀನಾದ ತಟಸ್ಥತೆಯನ್ನು ಉಲ್ಲಂಘಿಸಿತು. ಇದನ್ನು ಚೀನಾ ಪ್ರತಿಭಟಿಸಿತು ಮತ್ತು ಯುದ್ಧವಲಯವನ್ನು ನಿರ್ಧಿಷ್ಟಪಡಿಸಿತು.

ಅಮೆರಿಕಾದ ಅಧ್ಯಕ್ಷ ವಿಲ್ಸನ್ನನ ಆದರ್ಶವಾದಿ ಅರ್ಥವಿವರಣೆಯಿಂದ ಮತ್ತು ಜಪಾನಿನ ಮಹತ್ವಾಕಾಂಕ್ಷೆಗಳಿಂದ ತನ್ನನ್ನು ರಕ್ಷಿಸಿಕೊಳ್ಳುವ ಸಲುವಾಗಿ ಚೀನಾ ಯುದ್ಧವನ್ನು ಪ್ರವೇಶಿಸಿತು. ಆದಾಗ್ಯೂ ಯುದ್ಧದಲ್ಲಿ ಬಾಗಿಯಾಗಲು ಅದು ಷರತ್ತುಗಳನ್ನು ವಿಧಿಸಿತು. ತಾಯ್ನಾಡಿನಲ್ಲಿ ಧೀರ್ಘ ಹೋರಾಟದ ನಂತರ ಚೀನ ಯುದ್ಧವನ್ನು ಪ್ರವೇಶಿಸಲು ನಿರ್ಧರಿಸಿತು. ಚೀನಾದ ಆಂತರಿಕ ಪರಿಸ್ಥಿತಿಗಳು ಆತಂಕಕಾರಿಯಾಗಿದ್ದುದರಿಂದ ಮತ್ತು ಪೂರ್ವದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸಲು ಪ್ರಪಂಚದ ಬಲಿಷ್ಟ ರಾಷ್ಟ್ರಗಳಿಗೆ ಸಮಯವಿಲ್ಲದಿದ್ದುದರಿಂದ ಜಪಾನ್ ತನ್ನ ಪ್ರಭಾವ ವಿಸ್ತರಣೆಯನ್ನು ಮುಂದುವರೆಸಿತು. ಆದರೆ ತನ್ನ ಕಷ್ಟಗಳ ಹೊರತಾಗಿಯೂ ಯುದ್ಧದಲ್ಲಿ ಆಗವಹಿಸುವ ಮೂಲಕ ಚೀನ ಸಾಕಷ್ಟು ಲಾಭವನ್ನು ಗಳಿಸಿತು.

## 139.2 ಯುದ್ಧದ ಕಾಲದಲ್ಲಿ ಚೀನಾದ ಪರಿಸ್ಥಿತಿ

1914 ರಲ್ಲಿ ಆರಂಭವಾದ ಮೊದಲನೆ ಮಹಾಯುದ್ಧವು ಇಡೀ ಯುರೋಪನ್ನು ಒಳಗೊಂಡಿತ್ತು. ಮೊದಲಿಗೆ ಚೀನ ತಟಸ್ಥವಾಗಿ ಉಳಿಯಲು ಪ್ರಯತ್ನಿಸಿತು. ಆದರೆ ದೂರದೃಷ್ಟಿಯಿಂದ ಯುದ್ಧದಲ್ಲಿ ಭಾಗವಹಿಸುವುದರಲ್ಲಿ ತನ್ನ ಹಿತಾಸಕ್ತಿಗಳು ಅಡಗಿವೆಯೆಂದು ಅದು ಭಾವಿಸಿತು ಮತ್ತು ಅಂತಿಮವಾಗಿ ಅದು ಯುದ್ಧದಲ್ಲಿ ಪಾಲ್ಗೊಂಡಿತು. ಆದಾಗ್ಯೂ ಇದು ಚೀನ ಗಂಭೀರವಾದ ಆಂತರಿಕ ತೊಂದರೆಗಳನ್ನು ಎದುರಿಸುತ್ತಿದ್ದ ಮತ್ತು ಯುವಾನನು ಗಣರಾಜ್ಯವಾದಿಗಳ ಪ್ರಬಲ ಶತ್ರುವಾಗುತ್ತಿದ್ದ ಕಾಲವಾಗಿತ್ತು.

ಈಗಾಗಲೇ ತಿಳಿಸಿರುವಂತೆ ಯುವಾನನು ಚೀನಾದಲ್ಲಿ ರಾಜಪ್ರಭುತ್ವವನ್ನು ಪುನಃ ಸ್ಥಾಪಿಸಲು ಪ್ರಯತ್ನಿಸುತ್ತಿದ್ದನು ಮತ್ತು ಸಿಂಹಾಸನಕ್ಕೆ ಮಂಚುಗಳ ಉತ್ತರಾಧಿಕಾರಿಯಾಗಲು ಬಯಸಿದ್ದನು. ಆದರೆ ರಾಜಪ್ರಭುತ್ವದ ಸ್ಥಾಪನೆಗೆ ಆಚಾರಗಳ ಸಮ್ಮತಿಯ ಸುದ್ದಿ ದೇಶದಲ್ಲಿ ಹರಡುತ್ತಿದ್ದಂತೆ, ಆಂತರಿಕ ಗಲಭೆಗಲು ಪ್ರಾರಂಭವಾದವು. ಯುವನಾನ್ ಪ್ರಾಂತ್ಯದಲ್ಲಿ ದಂಗೆಯುಂಟಾಯಿತು ಮತ್ತು ಶಾಸನ ಸಭೆಯನ್ನು ಕರೆಯುವಂತೆ ಒತ್ತಾಯಪಡಿಸಲಾಯಿತು. ರಾಜಪ್ರಭುತ್ವದ ಪುನರ್'ಸ್ಥಾಪನೆಯ ಪ್ರಸ್ತಾಪವನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕೆಂದು ಮತ್ತು ನಾನಾಕಿಂಗ್‌ನಲ್ಲಿ ಅನುಮೋದಿಸಲಾಗಿದ್ದ ಸಂವಿಧಾನವನ್ನು ತಕ್ಷಣವೇ ಜಾರಿಗೊಳಿಸುವಂತೆ ಕ್ರಾಂತಿಕಾರಿಗಳು ಒತ್ತಾಯಿಸಿದರು. ದಂಗೆಯನ್ನು ಅಡಗಿಸಲು ಯುವಾನ್ ತನ್ನ ಪಡೆಗಳನ್ನು ಕಳುಹಿಸಿದನು. ಆದರೆ ಅದು ವಿಫಲವಾಯಿತು. ಆದರೆ ಈ ವೇಳೆಗೆ ಪರಿಸ್ಥಿತಿ ಯುವಾನನ ಕೈಮೀರಿ ಹೋಗಿತ್ತು. ಕಿಯಾಂಗ್ಸೆಯ ರಾಜ್ಯಪಾಲ ಲಿ ಲೀನ್ ಮತ್ತು ಅನಲವ್ಹೆ, ಕ್ವಾಂಟುಂಗ್, ಫುಕೀನ್, ಹುನಾನ್ ಮತ್ತು ಸೆಜಕ್ವಾನ್‌ನ ರಾಜ್ಯಪಾಲರೂ ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಅಧ್ಯಕ್ಷನ ಪಡೆಗಳು ಈ ದಂಗೆಗಳನ್ನು ಅಡಗಿಸುವ ಸ್ಥಿತಿಯಲ್ಲಿದ್ದರೂ, ಪರಿಸ್ಥಿತಿ ಹತೋಟಿ ಮೀರಿ ಹೋಗುತ್ತಿದೆಯೆಂಬುದು ಅತ್ಯಂತ ಸ್ಪಷ್ಟವಾಗಿತ್ತು. ಚೀನಾದ ಕಡೆಗೆ ವಿಸ್ತರಿಸಲು ಸಿದ್ಧವಾಗಿದ್ದ ಜಪಾನಿನ ಆಕ್ರಮಣದ ಬೆದರಿಕೆ ಮತ್ತೊಂದು ಗಂಭೀರ ಸಮಸ್ಯೆಯಾಗಿತ್ತು. ಆಂತರಿಕ ಸಮಸ್ಯೆಗಳನ್ನು ಸೃಷ್ಟಿಸುವ ಮೂಲಕ ಜಪಾನ್ ಚೀನಾವನ್ನು ಪ್ರಚೋದಿಸಲು ಪ್ರಯತ್ನಿಸಿತು.

ಈ ಹಂತದಲ್ಲಿ ಚೀನಾದ ಪರಿಸ್ಥಿತಿ ಅತ್ಯಂತ ಹದಗೆಟ್ಟಿದ್ದಾಗ, ಜಪಾನ್ ತನ್ನ 21ಬೇಡಿಕೆಗಳನ್ನು ಚೀನಾದ ಮುಂದಿಟ್ಟಿತು. ಈ ಬೇಡಿಕೆಗಳನ್ನು ಒಪ್ಪಿಕೊಂಡಲ್ಲಿ ಚೀನಾ ಜಪಾನಿನ ವಸಾಹತುವಾಗಿ ಮಾರ್ಪಡುತ್ತಿದ್ದಿತು. ಯುವಾನನು ಕಠಿಣ ಪರಿಸ್ಥಿತಿಯಲ್ಲಿದ್ದನು. ಬೇಡಿಕೆಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದಲ್ಲಿ ಅದು ಜಪಾನಿನೊಂದಿಗೆ ಸೈನಿಕ ಘಣಷೆಗೆ ಕಾರಣವಾಗುವುದೆಂದು ಯುವಾನನಿಗೆ ಖಚಿತವಾಗಿ ತಿಳಿದಿತ್ತು, ಅದಕ್ಕೆ ಯುವಾನ್ ಸಿದ್ಧನಿರಲಿಲ್ಲ. ಆಂತರಿಕ ಭಿನ್ನಾಭಿಪ್ರಾಯಗಳು ಮತ್ತು ದೇಶದಲ್ಲಿದ್ದ ಅವ್ಯವಸ್ಥೆ ಅದಕ್ಕೆ ಮುಖ್ಯವಾಗಿ ಕಾರಣವಾಗಿತ್ತು. ಆದ್ದರಿಂದ ಅವನು ತನ್ನ ದೇಶಕ್ಕೆ ಅನುಕೂಲವಾಗಬಲ್ಲ ಸೂಕ್ತ ಬದಲಾವಣೆಗಳೊಂದಿಗೆ ಜಪಾನಿನ ಎಲ್ಲಾ ಬೇಡಿಕೆಗಳನ್ನು ಒಪ್ಪಿಕೊಳ್ಳಲು ನಿರ್ಧರಿಸಿದನು. ಇದು ಜನತೆಯ ಅಸಮಧಾನದ ಭಾರೀ ನಷ್ಟದಲ್ಲಿ ಅವನಿಗೆ ಜಪಾನಿನ ಸಹಕಾರವನ್ನು ಸಂಪಾದಿಸಿಕೊಟ್ಟಿತು. ಬೇಡಿಕೆಗಳ ಒಪ್ಪಿಗೆಯ ವಿರುದ್ಧ ದೇಶದಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತವಾಯಿತು. ಜನರು ಯುವಾನನನ್ನು ಖಂಡಿಸಿದರು ಮತ್ತು ಜಪಾನಿನ ವಸ್ತುಗಳನ್ನು ಬಹಿಷ್ಕರಿಸಲು ನಿರ್ಧರಿಸಿದರು. ಈ ಬೇಡಿಕೆಗಳು ಚೀನಾದಲ್ಲಿ ಜಪಾನಿನ ಉದ್ದೇಶಗಳು ಸ್ಪಷ್ಟ ಸೂಚನೆಗಳಾಗಿದ್ದವು.

## 139.3 ಚೀನಾದ ತಟಸ್ಥತೆ

1914 ರಲ್ಲಿ ಮೊದಲನೆ ಮಹಾಯುದ್ಧ ಆರಂಭವಾಯಿತು. ಯುದ್ಧ ಘೋಷಣೆಯಾಗುತ್ತಿದ್ದಂತೆಯೇ ಚೀನಾ ತಟಸ್ಥವಾಗಿ ಉಳಿಯಲು ನಿರ್ಧರಿಸಿತು. ಅದರ ಆಂತರಿಕ ಪರಿಸ್ಥಿತಿ ಗೊಂದಲಕಾರಿಯಾಗಿದ್ದುದು ಅದಕ್ಕೆ ಮುಖ್ಯ ಕಾರಣವಾಗಿತ್ತು. ಆರ್ಥಿಕವಾಗಿ ಚೀನಾ ಸಂಪೂರ್ಣವಾಗಿ ಹಾಳಾಗಿ ಹೋಗಿತ್ತು ಮತ್ತು ದೇಶದಲ್ಲಿ ರಾಜಕೀಯ ಸ್ಥಿರತೆಯು ಇರಲಿಲ್ಲ. ಅದು ಮುಂದಿನ ಕ್ರಮದ ಬಗ್ಗೆ ದಿಕ್ಕು ತೋಚದಂತಾಗಿತ್ತು. ಯುದ್ಧವನ್ನು ಪ್ರವೇಶಿಸಲು ಜಪಾನಿಗೆ ಬಹಳ ಕಾಲ ಬೇಕಾಗುವುದಿಲ್ಲವೆಂದು, ಇದರಿಂದ ಚೀನಾಕ್ಕೆ ಸಂಬಂಧಿಸಿದಂತೆ ಅದರ ಆಕಾಂಕ್ಷೆಗಳು ಹೆಚ್ಚುವಂತಾಗುವುದೆಂದು ಅದು ತಿಳಿದಿತ್ತು. ಯುದ್ಧವನ್ನು ಪ್ರವೇಶಿಸುವುದರಿಂದ ರಾಷ್ಟ್ರೀಯ ಅರ್ಥಿಕ, ವ್ಯವಸ್ಥೆಯು ಸಂಪೂರ್ಣವಾಗಿ ನಾಶವಾಗುವುದೆಂಬುದೂ ಅದಕ್ಕೆ ತಿಳಿದಿತ್ತು. ಆಗ ಚೀನಾದ ಅಧ್ಯಕ್ಷನಾಗಿದ್ದ ಯುವಾನನು ಅಂತಿಮವಾಗಿ ತಟಸ್ಥವಾಗಿರಲು ನಿರ್ಧರಿಸಿದನು ಮತ್ತು ತನ್ನ ತಟಸ್ಥತೆಯನ್ನು ರಕ್ಷಿಸುವಂತೆ ಅಮೇರಿಕಾವನ್ನು ನವಿನಂತಿಸಿಕೊಂಡನು (ಕೋರಿದನು). ಚೀನಾದ ತಟಸ್ಥತೆಯನ್ನು ಗೌರವಿಸುವ ಭರವಸೆಯನ್ನು ನೀಡುವಂತೆ ಅದು ಇತರ ಯುದ್ಧ ನಿರತರ ರಾಷ್ಟ್ರಗಳಿಗೂ ಮನವಿ ಮಾಡಿಕೊಂಡಿತು. ಆದರೆ ಜರ್ಮನಿ ಮಾತ್ರವೇ ಅಂತಹ ಖಾತ್ರಿಯನ್ನು ನೀಡಲು ಮುಂದೆ ಬಂದಿತು.

1914 ರಿಂದ 1917 ರವರೆಗೆ ಚೀನ ಘೋಷಿತ ತಟಸ್ಥತೆಯು ತನ್ನ ನಿಲುವನ್ನು ಉಳಿಸಿಕೊಂಡಿತು. ಆದರೆ ಇದು ಷಂಟುಂಗ್ ಪ್ರಾಂತ್ಯದಲ್ಲಿ ಜಪಾನಿನ ಅಸ್ತಿತ್ವಕ್ಕೆ ಮತ್ತು ಇತರ ಪ್ರದೇಶಗಳಲ್ಲಿ ಅದರ ಹಿತಾಸಕ್ತಿಗಳ ವಿಸ್ತರಣೆಗೆ ಕಾರಣವಾಯಿತು. ಪ್ರಾರಂಭದವಲ್ಲಿಯೇ ಚೀನಾದ ಅಧ್ಯಕ್ಷ .ಯುವಾನ್ ಶಿಕಾಯಿಯು ಜರ್ಮನಿಯ ಬಗ್ಗೆ ಯಾವ ಹಗೆತನದಿಂದಲ್ಲದಿದ್ದರೂ, ಜಪಾನಿನ ಭಯದಿಂದ ಮಿತ್ರಪಕ್ಷದ ರಾಷ್ಟ್ರಗಳ ಕಡೆಯಿಂದ ಯುದ್ಧವನ್ನು ಪ್ರವೇಶಿಸಬಹುದಾಗಿತ್ತು. ಸ್ವಲ್ಪ ಸಮಯದ ನಂತರ ಯುವಾನನು ತಟಸ್ಥತೆಯನ್ನು ಕೈಬಿಟ್ಟು ಮಿತ್ರಪಕ್ಷದೊಂದಿಗೆ ಯುದ್ಧದಲ್ಲಿ ಭಾಗವಹಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದನು. ಆದರೆ ಚೀನಾದ ಖಜಾನೆ ಖಾಲಿಯಾಗಿದ್ದು ವಿದೇಶಗಳು ಅಧನ್ನು ತುಂಬಬೇಕಾಗಿತ್ತು. ಅಂತರರಾಷ್ಟ್ರೀಯ ಬ್ಯಾಂಕಿಂಗ್ ಗುಂಪಿನಿಂದ ಅಮೆರಿಕಾದ ನಿರ್ಗಮನದ ನಂತರ ಮತ್ತು ನಂತರದ ಒತ್ತಡದಲ್ಲಿದ್ದ ಸರ್ಕಾರದ ಬೇಡಿಕೆಗಳನ್ನು ಪೂರೈಸುವ ಮೂಲವಾಗಿ ಅಮೆರಿಕಾದ ಮೇಲಿನ ಜವಾಬ್ದಾರಿಯಿಂದಾಗಿ ಚೀನಾದ ಪುನರ್ ವ್ಯವಸ್ಥೆಗೆ ಬೇಕಾಗಿದ್ದ ಹೆಚ್ಚಿನ ನಿಧಿಯನ್ನು ಜಪಾನ್ ಒದಗಿಸಿತು.

1915ರ ಪ್ರಾರಂಭದಲ್ಲಿ ರಷ್ಯ ಮತ್ತು ಫ್ರಾನ್ಸ್‌ಗಳು ಈಗಾಗಲೇ ಚೀನಾವನ್ನು ಯುರೋಪಿನ ಯುದ್ಧದಲ್ಲಿ ಭಾಗವಹಿಸುವಂತೆ ಮಾಡುವ ಭರವಸೆಯನ್ನು ಹೊಂದಿದ್ದವು. ಅವು ಮಿತ್ರಪಕ್ಷದೊಂದಿಗೆ ಚೀನಾ ಸೇರಿಕೊಂಡಿಲ್ಲ. ಮಿತ್ರಪಕ್ಷದ ರಾಷ್ಟ್ರಗಳು ಯುವನಾ ಮತ್ತು ಅವನ ಪ್ರಸ್ತಾಪಿತ ರಾಜಪ್ರಭುತ್ವಕ್ಕೆ ಬೆಂಬಲವನ್ನು ಮುಂದುವರಿಸುವ ಕರಾರನ್ನು ಪರಿಗಣಿಸಿದವು. ಜಪಾನಿನ ವಿರೋಧದಿಂದ ಈ ಯೋಜನೆ ವಿಫಲವಾದಾಗ ಮಿತ್ರ ರಾಷ್ಟ್ರಗಳು ರಾಜಪ್ರಭುತ್ವದ ಯೋಜನೆಯನ್ನು ಮುಂದೂಡುವಂತೆ ಯುವಾನನಿಗೆ ಸಲಹೆ ಮಾಡಿದವು..

1917 ರ ವೇಳೆಗೆ ಒಂದು ಅತ್ಯಂತ ಕಠಿಣ ಪರಿಸ್ಥಿತಿ ತಲೆದೋರಿತು. ಫೆಬ್ರವರಿ 1917 ರಲ್ಲಿ ಅಮೆರಿಕಾ ಸರ್ಕಾರವು ಜರ್ಮನಿಯು ಒಪ್ಪಿಕೊಳ್ಳಲಾಗಿರುವ ಅಂತರರಾ, ರಾಷ್ಟ್ರೀಯ ಕಾನೂನಿನ ತತ್ವಗಳನ್ನು ಉಲ್ಲಂಘಿಸಿದೆಯೆಂಬ ಮತ್ತು ಮಾನವೀಯತೆಯ ವಿರುದ್ಧ ಎಸಗಿದ ಅಪರಾಧವೆಂಬ ಕಾರಣದಿಂದ ಜರ್ಮನಿಯ ಜಲಂರ್ಗಾಮಿ ಯುದ್ಧದ ವಿಸ್ತರಣೆಯ ವಿರುದ್ಧ ತನ್ನೊಂದಿಗೆ ಸೇರುವಂತೆ ಇತರ ತಟಸ್ಥ ರಾಷ್ಟ್ರಗಳನ್ನು ಕೋರಿತು. ಪೀಕಿಂಗ್‌ನಲ್ಲಿದ್ದ ಅಮೆರಿಕಾದ ಸಚಿವರು ಅಮೆರಿಕಾದ ರಕ್ಷಣೆಯಲ್ಲಿ ಸಕಾರಾತ್ಮಕ ನೀತಿಯನ್ನು ಬೆಳೆಸಿಕೊಳ್ಳಲು ಈ ಅವಕಾಶವನ್ನು ಬಳಸಿಕೊಳ್ಳುವಂತೆ ಚೀನಾವನ್ನು ಪ್ರೇರೇಪಿಸತು. ಇದರಿಂದಾಗಿಯೇ ಚೀನಾ ಶಾಂತಿ ಸಮ್ಮೇಳನದಲ್ಲಿ ಪ್ರವೇಶವನ್ನು ಪಡೆಯಲು ಸಾಧ್ಯವಾಯಿತು. ಮತ್ತು ತನ್ನ ಮಹತ್ವದ ಹಿತಾಸಕ್ತಿಗಳನ್ನು ಒಳಗೊಂಡಿದೆದ ದೂರ ಪ್ರಾಚ್ಯದ ಪ್ರಶ್ನೆಗಳ ಇತ್ಯರ್ಥದಲ್ಲಿ ಧ್ವನಿಯೆತ್ತಲು ಅವಕಾಶ ಪಡೆಯಿತು.ಹೀಗೆ ಪ್ರೇರಿತವಾದ ಚೀನ ಅಂತರರಾಷ್ಟ್ರೀಯ ನಿಯಮ ಮತ್ತು ಮಾನವೀಯತೆಯ ಹೆಸರಿನಲ್ಲಿ ಅನಿಯಂತ್ರಿತ ಜಲಂತರ್ಗಾಮಿ ಯುದ್ಧ ಮುಂದುವರಿಕೆಯ ವಿರುದ್ಧ ಜರ್ಮನಿಯ ಸರ್ಕಾರಕ್ಕೆ ಗೈರವಯುತವಾದ ಪತ್ರವನ್ನು ಕಳುಹಿಸಿಕೊಟ್ಟಿತು. ತೃಪ್ತಿಕರ ಉತ್ತರ ಬರದಿದ್ದಾಗ ಚೀನ ಶತ್ರು ರಾಷ್ಟ್ರಗಳೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದು ಹಾಕುವ ಅಗತ್ಯವನ್ನು ತಿಳಿಸಿತು. ಅದರ ಪ್ರತಿಭಟನೆಯ ಪತ್ರವನ್ನು ಕಡೆಗಣಿಸಿದಲ್ಲಿ ಸರ್ಕಾರವು ತನ್ನ ಗೌರವವನ್ನು ಕಳೆದುಕೊಳ್ಳುವುದಾಗಿಯು ಎಚ್ಚರಿಸಿತು.

ಜರ್ಮನಿಯೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದು ಹಾಕುವ ಎರಡನೇ (ಹೆಜ್ಜೆಯನ್ನು) ಕ್ರಮವನ್ನು ಕೈಗೊಳ್ಳುವುದಕ್ಕೆ ಅಧ್ಯಕ್ಷ ಪದವಿ ಸೇರಿದಂತೆ ಚೀನಾದಲ್ಲಿ ಭಾರೀ ವಿರೋಧವಿದ್ದಿತು, ಪರಿಣಾಮವಾಗಿ ಪ್ರಧಾನಿಯಾಗಿದ್ದ ತುವಾನ್ ಪ್ರತಿಭಟನೆಯಾಗಿ ತನ್ನ ಹುದ್ದೆಗೆ ರಾಜಿನಾಮೆ ನೀಡಬೇಕಾಯಿತು. ಜರ್ಮನಿಯೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಹಾಕುವ ಪ್ರಶ್ನೆಯನ್ನು ಸಂಸತ್ತಿನ ಮುಂದಿರಿಸಿದಾಗ, ಬಹು ಸಂಖ್ಯೆಯ ಪ್ರತಿನಿಧಿಗಳು ಅಧ್ಯಕ್ಷನ ಪರವಾಗಿ ನಿಂತರು ಮತ್ತು ಚೀನಾ ಜರ್ಮನಿಯೊಂದಿಗೆ ತನ್ನ ರಾಜತಾಂತ್ರಿಕ ಸಂಬಂಧಘಳನ್ನು ಕಡಿದುಹಾಕಿತು.

ಆದರೆ ಅಮೆರಿಕ, ಚೀನಾ ಮತ್ತಿತರ ರಾಷ್ಟ್ರಗಳು ಅಮೆರಿಕಾದ ಮುಂದಾಳತ್ವದಲ್ಲಿ ತನ್ನೊಂದಿಗೆ ಸಂಬಂಧಗಳ ಕಡಿದು ಹಾಕಿದುದರ ಪರಿಣಾಮವಾಗಿ ಜರ್ಮನಿ ತನ್ನ ನೀತಿಯನ್ನು ಪ್ರಕಟಿಸಲಿಲ್ಲ. ಆದ್ದರಿಂದ ಚೀನಾ ಅನಿವಾರ್ಯವಾಗಿ ನಿಜವಾದ ಯುದ್ಧ ಘೋಷಣೆಯ ಮೂರನೇ ಕ್ರಮವನ್ನು ಪರಿಗಣಿಸಬೇಕಾಯಿತು.

## 139.4 ಚೀನಾದ ಯುದ್ಧ ಪ್ರವೇಶ

ನಿರೀಕ್ಷೆಯಂತೆಯೇ ಜಪಾನ್ ಯುದ್ಧದಲ್ಲಿ ಬ್ರಿಟನ್ನಿನ ಕಡೆಯಿಂದ ಯುದ್ಧವನ್ನು ಸೇರಲು ನಿರ್ಧರಿಸಿತು ಮತ್ತು ಚೀನಾದಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸತೊಡಗಿತು. ಅಲ್ಲದೆ ಜಪಾನಿನ 21 ಬೇಡಿಕೆಗಳನ್ನು ಭಾಗಶಃ ಒಪ್ಪಿಕೊಳ್ಳುವಂತೆ ಚೀನಾವನ್ನು ಒತ್ತಾಯಿಸಿತು. ಇದರಿಂದ ತಾನು ಜಪಾನಿನ ಆಕ್ರಮಣವನ್ನು ತಡೆಯಬೇಕಾದರೆ ತಾನು ಯುದ್ಧರಂಗವನ್ನು ಸೇರಲೇಬೇಕೆಂದು ಮನವರಿಕೆ ಮಾಡಿಕೊಂಡಿತು. ಇದರ ಜೊತೆಗೆ ಚೀನಾ ಯುದ್ಧವನ್ನು ಪ್ರವೇಶಿಸಲು ಕಾರಣವಾದ ಇತರ ಅನೇಕ ಅಂಶಗಳೂ ಇದ್ದವು. ಅಮೇರಿಕ ಯುದ್ಧವನ್ನು ಸೇರಲು ತೀರ್ಮಾನಿಸಿದ ನಂತರ ಅಧ್ಯಕ್ಷ ವಿಲ್ಸನ್ನು ಮಾಡಿದ ಆದರ್ಶಪ್ರಾಯ ಪ್ರಕಟಣೆಗಳೂ ಅದರಲ್ಲಿ ಸೇರಿದ್ದವು. ಚೀನಾ ಸಹ ಶಾಂತಿ ಸಮ್ಮೇಳನದಲ್ಲಿ ತನಗೆ ಒಂದು ಜಾಗವನ್ನು ಪಡೆದುಕೊಂಡು ಆ ಮೂಲಕ ಅದು ಷಾಂಟುಂಗ್ ವ್ಯಾಜ್ಯವನ್ನು ಸಂಪೂರ್ಣವಾಗಿ ಇತ್ಯರ್ಥಪಡಿಸಿಕೊಳ್ಳಲು ಬಯಸಿತ್ತು. ಮಿಗಿಲಾಗಿ ಚೀನಾದಲ್ಲಿ ಅಮೆರಿಕಾದ ರಾಯಭಾರಿಯು ಚೀನಾ ತನ್ನನ್ನು ಜಪಾನಿನಿಂದ ರಕ್ಷಿಸಿಕೊಳ್ಳಲು ಬಯಸಿದಲ್ಲಿ, ಅದು ತಮ್ಮ ಕಡೆಯಿಂದ ಯುದ್ಧದಲ್ಲಿ ಭಾಗವಹಿಸಲೇಬೇಕಾದುದು ಅಗತ್ಯವೆಂದು ಸ್ಪಷ್ಟಪಡಿಸಿದನು. ಆದರೆ ಚೀನ ಯುದ್ಧದಲ್ಲಿ ಭಾಗವಹಿಸಬೇಕೆ ಅಥವ ಬೇಡವೆ ಎಂಬ ಬಗ್ಗೆ ಭಿನ್ನಾಭಿಪ್ರಾಯ ಉಂಟಾಯಿತು. ಸಂಸತ್ತು ಚೀನ ಯುದ್ಧದಲ್ಲಿ ಸೇರುವುದನ್ನು ವಿರೋಧಿಸಿದರೆ, ಪ್ರಧಾನಿ ತುವಾನ್‌ಚಿ ಜಯ್ ಈ ನಿರ್ಧಾರವನ್ನು ಬೆಂಬಲಿಸಿದನು. ಅತ್ಯಂತ ಕಷ್ಟದಲ್ಲಿ ತುವಾನನು ಆಗಸ್ಟ್ ೧೪,೧೯೧೭ರಂದು ಶತ್ರು ರಾಷ್ಟ್ರಗಳ ವಿರುದ್ಧ ಯುದ್ಧವನ್ನು ಘೋಷಿಸಿದನು. ಆದಾಗ್ಯೂ ಯುದ್ಧದಲ್ಲಿ ಸೇರಲು ಚೀನ ಕೆಲವು ಷರತ್ತುಗಳನ್ನು ಹಾಕಿತು. ಆ ಷರತ್ತುಗಳೆಂದರೆ

೧. ಬಾಕ್ಸರ್ ದಂಗೆಯಿಂದ ಕೊಡಬೇಕಾಗಿದ್ದ ಯುದ್ಧ ಪರಿಹಾರವನ್ನು ಬಿಟ್ಟುಬಿಡುವುದು.

೨. ಮಿತ್ರಪಕ್ಷದ ರಾಷ್ಟ್ರಗಳಿಗೆ ವಿವಿಧ ರೂಪದಲ್ಲಿ ನೀಡಬೇಕಾಗಿದ್ದ ಯುದ್ಧ ವೆಚ್ಚ ಪರಿಹಾರವನ್ನು ಬಿಟ್ಟುಬಿಡುವುದು, ಇದರಿಂದ ಚೀನ ಆ ಹಣವನ್ನು ತನ್ನ ಆರ್ಥಿಕ ಬೆಳವಣಿಗೆ ಮತ್ತು ಪ್ರಗತಿಗೆ ಬಳಸಿಕೊಳ್ಳುವುದು.

೩. ಚೀನಾ, ಆಸ್ಟ್ರಿಯಾಕ್ಕೆ ಕೊಡಬೇಕಾಗಿದ್ದ ಯುದ್ಧ ವೆಚ್ಚ ಪರಿಹಾರವನ್ನು ಮಿತ್ರರಾಷ್ಟ್ರಗಳು ಬಿಟ್ಟುಬಿಡಲು ಒಪ್ಪಿದವು.

೪. ಚೀನಾ, ರಫ್ತು ಮತ್ತು ಆಮದಿನ ವಸ್ತುಗಳ ಮೇಲೆ ತನಗೆ ಅನುಕೂಲಕರವಾಗುವಂತೆ ತೆರಿಗೆಯನ್ನು ಪರಿಷ್ಕರಿಸಲು ಅವಕಾಶ ನೀಡುವುದು.

೫. ಬಾಕ್ಸರ್ ದಂಗೆಯ ಕಾಲದಲ್ಲಿ ಚೀನಾದಲ್ಲಿ ನೆಲೆಗೊಳಿಸಿದ್ದ ವಿದೇಶಿ ಪಡೆಗಳನ್ನು ಹಿಂತೆಗೆದುಕೊಳ್ಳುವುದು.

೬. ಟೀನ್‌ಟ್ಸಿನ್ ಮತ್ತು ಹ್ಯಾಂಕೋಗಳಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾ ಹಂಗೇರಿಗಳಿಗೆ ನೀಡಲಾಗಿದ್ದ ರಿಯಾಯಿತಿಗಳನ್ನು ಹಿಂತೆಗೆದುಕೊಳ್ಳಲು ವಶಪಡಿಸಿಕೊಳ್ಳಲು ಚೀನಾಕ್ಕೆ ಅವಕಾಶ ನೀಡುವುದು.

ತಾನು ಯುದ್ಧದಲ್ಲಿ ಭಾಗವಹಿಸುವ ಮೊದಲೇ ಮುಂಗಡವಾಗಿ ತನ್ನ ಎಲ್ಲಾ ಷರತ್ತುಗಳನ್ನು ಒಪ್ಪಿಕೊಳ್ಳಬೇಕೆಂದು ಚೀನಾ ಒತ್ತಾಯಿಸಿತು. ಆದರೆ ಮಿತ್ರರಾಷ್ಟ್ರಗಳು ಚೀನಾವನ್ನು ಮೊದಲು ಬೇಷರತ್ತಾಗಿ ಯುದ್ಧವನ್ನು ಸೇರುವಂತೆ ಮತ್ತು ಆನಂತರ ಮಾತ್ರವೇ ಅದರ ಹಿತಾಸಕ್ತಿಗಳನ್ನು ಪರಿಗಣಿಸುವುದಾಗಿ ಮತ್ತು ರಕ್ಷಿಸುವುದಾಗಿ ಸಲಹೆ ಮಾಡಿದಲು. ಸಂಸತ್ತು ಬೇಷರತ್ತಾಗಿ ಯುದ್ಧದಲ್ಲಿ ಸೇರಲು ಸಿದ್ಧವಿಲ್ಲದಿದ್ದುದರಿಂದ ಪ್ರಧಾನಮಂತ್ರಿಯು ಸಂಸತ್ತನ್ನು ವಿಸರ್ಜಿಸಿದ ಮತ್ತು ಯುದ್ಧದಲ್ಲಿ ಸೇರಿಕೊಂಡನು.

ಚೀನ ತಾನು ಜಪಾನಿನ ಪ್ರಭಾವವನ್ನು ಇಳಿಸುವ ಸ್ಥಾನದಲ್ಲಿರುವನೆಂಬ ಆಶಾಭಾವನೆಯಿಂದ ಯುದ್ಧವನ್ನು ಸೇರಿತು, ಆದರೆ ಇದಕ್ಕೆ ಬದಲಾಗಿ ಜಪಾನಿನ ಪ್ರಭಾವ ಹೆಚ್ಚುತ್ತಾ ಹೋಯಿತು. ಇದಕ್ಕೆ ಚೀನಾ ಆಂತರಿಕ ಪರಿಸ್ಥಿತಿ ಪ್ರಮುಖ ಕಾರಣವಾಗಿತ್ತು. ತುವಾನನು ಸಂಸತ್ತನ್ನು ವಿಸರ್ಜಿಸಿದನು. ಆದರೆ ಅವನಿಗೆ ದೇಶದ ಒಳಗೆ ಪರಿಸ್ಥಿತಿ ಸಮಾಧಾನಕರವಾಗಿರಲಿಲ್ಲ. ಮಿಗಿಲಾಗಿ ಪ್ರತಿಯೊಂದು ರಾಷ್ಟ್ರವೂ ಯುದ್ಧದಲ್ಲಿ ಮುಳುಗಿದ್ದರಿಂದ ಯಾವುದೇ ಒಂದು ರಾಷ್ಟ್ರಕ್ಕೂ ಚೀನಾದ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸಲು ಸಮಯವಿರಲಿಲ್ಲ. ಜಪಾನ್ ಚೀನಾದ ಕಡೆಗೆ ಗಮನಹರಿಸಿತು ಮತ್ತು ತುವಾನನ ಸ್ಥಾನವನ್ನು ಭದ್ರಪಡಿಸುವ ಉದ್ದೇಶದಿಂದ ಅದು ಅವನಿಗೆ ಸಾಲವನ್ನು ನೀಡಿತು ಮತ್ತು ಅದಕ್ಕೆ ಪ್ರತಿಯಾಗಿ ರೈಲು ಮಾರ್ಗಗಳ ನಿರ್ಮಾಣ, ಗಣಿಗಳನ್ನು ಅಗೆಯುವುದು ಹಾಗೂ ಬ್ಯಾಂಕುಗಳ ಸ್ಥಾಪನೆಗೆ ರಿಯಾಯಿತಿಗಳನ್ನು (ಸೌಲಭ್ಯಗಳನ್ನು) ಪಡೆಯಿತು. ಹೀಗೆ ತುವಾನನೂ ಸಹ ಜಪಾನಿನ ಹಿಡಿತಕ್ಕೊಳಪಟ್ಟನು. ಆದರೆ ಇದೆಲ್ಲದರ ಹೊರತಾಗಿಯೂ ಯುದ್ಧದಲ್ಲಿ ಭಾಗವಹಿಸಿದ್ದರಿಂದ ಚೀನ ಕೆಲವು ಅನುಕೂಲಗಳನ್ನು ಪಡೆಯಿತು.

## 139.5 ಯುದ್ಧ ಪ್ರವೇಶದಿಂದ ಜಪಾನಿಗಾದ ಲಾಭಗಳು

ಯುದ್ಧವನ್ನು ಘೋಷಿಸುವುದಕ್ಕೆ ಮುಂಚಿತವಾಗಿಯೇ ಮಿತ್ರ ರಾಷ್ಟ್ರಗಳಿಂದ ರಿಯಾಯಿತಿಗಳನ್ನು ಪಡೆಯಲು ಪ್ರಧಾನಿ ತುವಾನ್ ವಿಫಲನಾಗಿದ್ದರಿಂದ ಜನರು ಯುದ್ಧದ ವಿಷಯದಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಲು ಪ್ರಾರಂಭಿಸಿದರು. ಆದರೆ ಇದೆಲ್ಲದರ ಹೊರತಾಗಿಯೂ ಅಧ್ಯಕ್ಷರಾಗಿದ್ದ ಫೆಂಗ್ ಕಾವೊಚಂಗ್ ಮತ್ತು ಪ್ರಧಾನಮಂತ್ರಿ ತುವಾನ್ - ಚಿ- ಜುಯ್ ಕಟ್ಟಕಡೆಗೆ ಯುದ್ಧದ ಪ್ರಶ್ನೆಯನ್ನು ಬಗ್ಗೆ ನಿರ್ಧಾರವನ್ನು ಕೈಗೊಂಡರು ಮತ್ತು ಆಗಸ್ಟ್ 14, 1917 ರಂದು ಶತ್ರು ಪಕ್ಷದ ರಾಷ್ಟ್ರಗಳ ವಿರುದ್ಧ ಯುದ್ಧವನ್ನು ಘೋಷಿಸಲಾಯಿತು. ಈ ಕ್ರಮ (ಕಾರ್ಯಾಚರಣೆ) ಚೀನಾ ಮತ್ತು ಮಿತ್ರ ಪಕ್ಷದ ರಾಷ್ಟ್ರಗಳಿಗೆ ಅತ್ಯಂತ ಪ್ರಿಯವಾಗಿತ್ತು. ಮೊದಲನೆಯದಾಗಿ, ಚೀನಾದ ಕಡೆಯಿಂದ ಕೆಲವು ಸಂಧಾನಗಳ ನಂತರ ತೆರಿಗೆಗಳ ಪರಿಷ್ಕರಣೆಯಿಂದ ಗಣನೀಯ ಲಾಭವಾಯಿತು. ತೆರಿಗೆಗಳನ್ನು ಶೇ. 2 1/2 ಯಿಂದ ಶೇ. 5 ಕ್ಕೆ ಹೆಚ್ಚಿಸಲಾಯಿತು. ಆದರೆ ಮಿತ್ರರಾಷ್ಟ್ರಗಳಿಗೆ ಚೀನಾಕ್ಕೆ ನೀಡಲು ಇದು ಅಷ್ಟೇನು ದೊಡ್ಡ ರಿಯಾಯಿತಿಯಾಗಿರಲಿಲ್ಲ. ಇದು ಪ್ರಾರಂಭಿಕ ನ್ಯಾಯವನ್ನು ಒದಗಿಸುವ ಒಂದು ಕಾರ್ಯವಾಗಿದ್ದು ಬಾಕ್ಸರ್ ಒಪ್ಪಂದದಲ್ಲಿಯೇ ಚೀನಾಕ್ಕೆ ಶೇ. 5 ರ ತೆರಿಗೆ ಪರಿಷ್ಕರಣೆಗೆ ಅವಕಾಶವಿದ್ದು ಅದನ್ನು ಜಾರಿಗೊಳಿಸಲು ಸಾಧ್ಯವಾಗಿರಲಿಲ್ಲ.

ಎರಡನೆಯದಾಗಿ, ಮಾರ್ಚ್‌ನಲ್ಲಿ ಶತ್ರು ಪಕ್ಷದ ರಾಷ್ಟ್ರಗಳೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡುದರ ಪರಿಣಾಮವಾಗಿ ಮತ್ತು ನಂತರ ಯುದ್ಧ ಘೋಷಣೆಯ ಪರಿಣಾಮವಾಗಿ, ಒಪ್ಪಂದ ರೇವು ಪಟ್ಟಣಗಳಾದ ಟೀನ್‌ಟ್ಸಿನ್ ಮುಂತಾದ ವಿಶೇಷ ರಿಯಾಯಿತಿಗಳನ್ನು ನೀಡಿದ್ದ ಸ್ಥಳಗಳಲ್ಲಿ ಜರ್ಮನಿ ಮತ್ತು ಆಸ್ಟ್ರಿಯಾದ ವಸತಿ ಪ್ರದೇಶಗಳ ಮೇಲೆ ಹತೋಟಿಯನ್ನು ಪಡೆಯಲು ಚೀನಾ ಸಮರ್ಥವಾಯಿತು.

ಮೂರನೆಯದಾಗಿ, ಮಿತ್ರ ಪಕ್ಷದ ರಾಷ್ಟ್ರಗಳು ಬಾಕ್ಸರ್ ದಂಗೆಯ ಯುದ್ಧ ವೆಚ್ಚ ಪರಿಹಾರದ ಜರ್ಮನಿ ಮತ್ತು ಆಸ್ಟ್ರಿಯಾದ ಪಾಲನ್ನು ರದ್ದುಪಡಿಸಲು ಮತ್ತು ಐದು ವರ್ಷಗಳ ಕಾಲ ಮಿತ್ರರಾಷ್ಟ್ರಗಳಿಗೆ ಹಣ ಪಾವತಿಯನ್ನು ಮುಂದೂಡಲು ಒಪ್ಪಿದವು. ಇದರ ಜೊತೆಗೆ ಅಬಕಾರಿ ಸುಂಕದಿಂದ ಆದಾಯ ಹೆಚ್ಚಿ ಹಣಕಾಸಿನ ಪರಿಸ್ಥಿತಿಯ ಸುಧಾರಿಸಲು ಸಹಾಯಕವಾಯಿತು.

ಕಡೆಯದಾಗಿ, ಚೀನಿಯರು ತಮಗೆ ಶಾಂತಿ ಸಮ್ಮೇಳನದಲ್ಲಿ ಒಂದು ಸ್ಥಾನದ ಹಕ್ಕು ಖಚಿತವೆಂದು ಭಾವಿಸಿದರು.

ಚೀನಾದ ಆಂತರಿಕ ಪರಿಸ್ಥಿತಿಗಳು ಆತಂಕಕಾರಿಯಾಗಿದ್ದುದರಿಂದ ಮತ್ತು ವಿಶ್ವದ ಯಾವುದೇ ರಾಷ್ಟ್ರಕ್ಕೂ ಪೂರ್ವದ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸಲು ಸಮಯವಿಲ್ಲದಿದ್ದುದರಿಂದ ಜಪಾನ್ ತನ್ನ ಪ್ರಭಾವ ವಿಸ್ತರಣೆ ಸೇರಿದುದರಿಂದ ಜಪಾನಿಗೆ ಸಾಕಷ್ಟು ಲಾಭವಾಯಿತು.

ಚೀನಾ ಯುದ್ಧದಲ್ಲಿ ಭಾಗವಹಿಸಿದುದರಿಂದ ಕೆಲವು ಕಾನೂನು ಸಮಸ್ಯೆಗಳನ್ನು ಉಂಟು ಮಾಡಿದವು ಮತ್ತು ಕೆಲವು ಕಾನೂನು ಸಮಸ್ಯೆಗಳನ್ನು ಅದು ಚೀನಾ ಮತ್ತು ಜರ್ಮನಿಗಳ ನಡುವೆ ಎಲ್ಲಾ ಒಪ್ಪಂದ ಬಗೆಹರಿಸಿತು. ಈ ಒಪ್ಪಂದಗಳು ಗುಲಾಮಗಿರಿಯ ಸ್ವರೂಪದ್ದಾಗಿದ್ದವು ಮತ್ತು ಅಸ್ಥಿರವಾಗಿದ್ದವು.

ಚೀನ 1914 ರಲ್ಲಿ ಜರ್ಮನಿಯ ಮೇಲೆ ಯುದ್ಧವನ್ನು ಘೋಷಿಸಿದ್ದ ಪಕ್ಷದಲ್ಲಿ, ಅದು 1898ರ ಒಪ್ಪಂದವನ್ನು ಕೊನೆಗೊಳಿಸುತ್ತಿದ್ದಿತೆಂಬುದು ಸ್ಪಷ್ಟವಾಗಿತ್ತು ಮತ್ತು ಚೀನಾದಲ್ಲಿದ್ದ ಜರ್ಮನಿಯ ಪ್ರದೇಶದಾಚೆಯ ಹಕ್ಕುಗಳು ಸ್ಥಗಿತಗೊಳ್ಳುತ್ತಿದ್ದವು. ಎರಡನೆಯದಾಗಿ, ಚೀನಾದಲ್ಲಿದ್ದ ಜರ್ಮನಿಯ ಸರ್ಕಾರದ ಎಲ್ಲಾ ಆಸ್ತಿಗಳನ್ನು ಆಡಳಿತಕ್ಕಾಗಿ ತಾತ್ಕಾಲಿಕವಾಗಿ ಚೀನಾಕ್ಕೆ ಬಿಟ್ಟುಕೊಡಬೇಕಾಗಿತ್ತು ಅಥವಾ ಮುಟ್ಟುಗೋಲು ಹಾಕಿಕೊಳ್ಳಬೇಕಾಗಿತ್ತು. ಹೀಗೆ ಚೀನ ತಾನು ಗುತ್ತಿಗೆಗೆ ನೀಡಿದ್ದ ಪ್ರದೇಶಗಳಲ್ಲಿ ಸಾರ್ವಭೌಮಾಧಿಕಾರದ ಹಕ್ಕನ್ನು ಚಲಾಯಿಸುವ ಸ್ಥಾನವನ್ನು ಪಡೆಯಬಹುದಿತ್ತು.

ಆದರೆ 1917 ರವರೆಗೂ ಚೀನಾ ಯುದ್ಧವನ್ನು ಘೋಷಿಸಲಿಲ್ಲ ಮತ್ತು ಆ ವೇಳೆಗೆ ಅದು ಈಗಾಗಲೇ ಜರ್ಮನಿಯ ಹಿತಾಸಕ್ತಿಗಳನ್ನು ಕೊನೆಗೊಳಿಸಲು ಜಪಾನ್ ಮತ್ತು ಜರ್ಮನಿಗಳ ನಡುವೆ ನೇರ ಮಾತುಕತೆಗಳ ಮೂಲಕ ಮಾಡಿಕೊಳ್ಳುವ ಯಾವುದೇ ತೀರ್ಮಾನವನ್ನು ಪಾಲಿಸಲು ಒಪ್ಪಿತ್ತು. ಚೀನಾದ ಯುದ್ಧ ಪ್ರವೇಶದ ನಂತರವೂ ಈ ಒಪ್ಪಂದ ಕೊನೆಗೊಳ್ಳಲಿಲ್ಲ.

## 139.6 ಶಾಂತಿ ಒಪ್ಪಂದದಲ್ಲಿ ಚೀನ

ಶಾಂತಿ ಒಪ್ಪಂದದ ಷರತ್ತುಗಳಂತೆ, ಬಾಕ್ಸರ್ ಒಪ್ಪಂದ ಷರಹತ್ತುಗಳ ಪ್ರಕಾರ ಚೀನ ಜರ್ಮನಿಗೆ ಪಾಲಿಸಬೇಕಾಗಿದ್ದ ತನ್ನ ಕರ್ತವ್ಯದ ಎಲ್ಲಾ ಜವಾಬ್ದಾರಿಗಳಿಂದ ಮುಕ್ತವಾಯಿತು. ಅದು ಟೀನ್‌ಟ್ಸಿನ್ ಮತ್ತು ಹ್ಯಾಂಕೊಗಳಲ್ಲಿದ್ದ ಜರ್ಮನಿಯ ರಿಯಾಯಿತಫಲ ಮೇಲೆ (ಸವಲತ್ತು) ಹತೋಟಿಯನ್ನು ಪುನಃ ಪಡೆಯಿತು. ರಾಜತಾಂತ್ರಿಕ ಮತ್ತು ಸಲಹಾ ಲಕ್ಷಣಗಳ ವಿಷಯಗಳ ಹೊರತಾಗಿ ಚೀನಾದಲ್ಲಿ ಜರ್ಮನಿಯ ಸರ್ಕಾರದ ಒಡೆತನದಲ್ಲಿದ್ದ ಸಾರ್ವಜನಿಕ ಆಸ್ತಿಪಾಸ್ತಿಗಳ ಮೇಲಿನ ಹಕ್ಕನ್ನು ಚೀನಾಕ್ಕೆ ಹಿಂದಿರುಗಿಸಲಾಯಿತು. ಚೀನಾದ ಸಮುದ್ರದಲ್ಲಿ ಲಂಗರುಹಾಕಿದ್ದ ಜರ್ಮನಿಯ ನೌಕೆಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರಿಂದ ಉದ್ಭವಿಸಿದ ಎಲ್ಲಾ ಋಣಗಳಿಂದ ಅದು ಮುಕ್ತವಾಯಿತು ಮತ್ತು ಬಾಕ್ಸರ್ ದಂಗೆಯ ಕಾಲದಲ್ಲಿ ಪೀಕಿಂಗ್‌ನಿಂದ ಕೊಂಡೊಯ್ದಿದ್ದ ಖಗೋಳಶಾಸ್ತ್ರಕ್ಕೆ ಸಂಬಂಧಿಸಿದ ಉಪಕರಣಗಳ ಪುನರ್ ಸ್ವಾದೀನವನ್ನು ಅದು ಪಡೆಯಿತು.

ಕಿಯಾಚೌ ಕೊಲ್ಲಿಯ ಗುತ್ತಿಗೆಯು ಸೇರಿದಂತೆ 1898 ರ ಒಪ್ಪಂದ ಮತ್ತು ನಂತರದ ಒಪ್ಪಂದಗಳಿಂದ ಜರ್ಮನಿಯು ಷಾಂಟುಂಗ್‌ನಲ್ಲಿ ಗಳಿಸಿದ ಸ್ಥಾನಮಾನಕ್ಕೆ ಮತ್ತು ಆ ಪ್ರಾಂತದಲ್ಲಿ ಅನುಭವಿಸುತ್ತಿದ್ದ ಆರ್ಥಿಕ ಹಕ್ಕುಗಳಿಗೆ ಜಪಾನ್ ಉತ್ತರಾಧಿಕಾರಿಯಾಯಿತು. ಈ ಉತ್ತರಾಧಿಕಾರತ್ವವು 'ಮೂವರ ಸಮಿತಿ' ಗೆ ಬಾಯಿ ಮಾತಿನ ಮೂಲಕ ನೀಡಲಾಗಿದ್ದ ಭರವಸೆಯಾದ "ನೇರ ಮಾತುಕತೆಗಳ ಮೂಲಕ ಜಪಾನ್ ಆರ್ಥಿಕ ಹಕ್ಕು ಮತ್ತು ಸವಲತ್ತುಗಳನ್ನು ಮಾತ್ರ ತನಗೆ ಉಳಿಸಿಕೊಂಡು ಎಲ್ಲಾ ರಾಜಕೀಯ ಹಕ್ಕುಗಳನ್ನು ಚೀನಾಕ್ಕೆ ಬಿಟ್ಟುಕೊಡುವ ಷರತ್ತಿಗೊಳಪಟ್ಟಿತು".

ರಾಷ್ಟ್ರಗಳ ಒಕ್ಕೂಟ ಸಂಸ್ಥೆ ಸ್ಥಾಪಿತವಾದಲ್ಲಿ ಚೀನ ಸಂಪೂರ್ಣ ನ್ಯಾಯವನ್ನು ಪಡೆಯಲು ಸಾಧ್ಯವಾಗುವುದೆಂಬ ಭಾವನೆ ಚೀನಿಯರಲ್ಲಿತ್ತು. ಇದನ್ನು ವಿಲ್ಸನ್ನನೇ ನ್ಯಾಯಧಾನದಲ್ಲಿ ತಾನೇ ಭಾಗಿಯಾಗುವುದಾಗಿ ಸಮರ್ಥಿಸಿಕೊಳ್ಳುತ್ತಿದ್ದನು. ಆದರೆ ಷಾಂಟುಂಗ್ ಪ್ರಾಂತದಲ್ಲಿ ಚೀನಾಕ್ಕೆ ಅದರ ರಾಜಕೀಯ ಪಕ್ಕುಗಳನ್ನು ದೊರಕಿಸಿಕೊಡುವಂತೆ ಮಾಡಲು ವಿಲ್ಸನ್ ವಿಫಲನಾದನು. ಆರ್ಥಿಕ ಹಕ್ಕುಗಳಿಲ್ಲದೆ ಚೀನಾ ನೆರಳಿನಂತೆ ಮತ್ತು ಜಪಾನ್ ಗಟ್ಟಿಯಂತಿದ್ದಿತು.

ಶಾಂತಿ ಒಪ್ಪಂದದ ತೀರ್ಪಿನ ಸುದ್ದಿ ತಮ್ಮನ್ನು ತಲುಪುತ್ತಿದ್ದಂತೆ ಇದು ಚೀನಾದ ಜನರ ದೃಷ್ಟಿಕೋನವಾಗಿತ್ತು. ಷಾಂಟುಂಗ್ ಷರತ್ತನ್ನು ಹೊರತುಪಡಿಸಿ ಒಪ್ಪಂದಕ್ಕೆ ಸಹಿ ಹಾಕಲು ಚೀನಾದ ಪ್ರತಿನಿಧಿಗಳು ಒಪ್ಪಿದರು. ಆದರೆ ಈ ಷರತ್ತನ್ನು ಬಿಟ್ಟು ಸಹಿ ಮಾಡುವ ಹಕ್ಕನ್ನು ನಿರಾಕರಿಸಿದಾಗ ಅವರು ಒಪ್ಪಂದದ ಪತ್ರಗಳಿಗೆ ಸಹಿ ಹಾಕಲು ನಿರಾಕರಿಸಿದರು. ಆ ಮೂಲಕ ಅವರು ತಮ್ಮ ತವರಿನಲ್ಲಿ ರೊಚ್ಚಿಗೆದ್ದ ಸಾರ್ವಜನಿಕರ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

## 139.7 ಮಹತ್ವ ಮತ್ತು ಪರಿಣಾಮಗಳು

ಮಿತ್ರರಾಷ್ಟ್ರಗಳು ಮತ್ತು ಜರ್ಮನಿಯ ನಡುವೆ ಏರ್ಪಟ್ಟ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಲು ಚೀನ ನಿರಾಕರಿಸಿದರೂ ಮತ್ತು ಷಾಂಟುಂಗ್ ಸಮಸ್ಯೆಯಲ್ಲಿ ಅದರ ಸೋಲಿನಿಂದ ಭಾರೀ ಹಿನ್ನಡೆಯಾಗಿದ್ದರೂ ಯುದ್ಧದ ಪರಿಣಾಮ ಅದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರಲಿಲ್ಲ. ವಿಶ್ವ ಸಾರ್ವಜನಿಕ ಅಭಿಪ್ರಾಯಕ್ಕೆ ಅದರ ಮನವಿಗಳು ಬಾರೀ ಅನುಕಂಪವನ್ನು ಮೂಡಿಸಿದವು. ಚೀನಾದ ಒಳಗೆಯೇ ಪ್ಯಾರಿಸ್ ಸಭೆಯಲ್ಲಿ ವಾಂಗ್ ಮತ್ತು ಕೂ ಅವರ ನಿಲುವು ಹೊಸ ರಾಷ್ಟ್ರೀಯ ಹೆಮ್ಮೆಯ ಅಲೆಯನ್ನು ಎಬ್ಬಿಸಿದವು. ಇದಕ್ಕಿಂತಲೂ ಹೆಚ್ಚಾಗಿ ಯುದ್ಧವು ಜರ್ಮನಿ, ಆಸ್ಟ್ರಿಯಾ ಮತ್ತು ಹಂಗೇರಿಗಳೊಂದಿಗೆ ಮಾಡಿಕೊಳ್ಳಲಾಗಿದ್ದ ಚೀನಾದ ಹಳೆಯ ಅಸಮಾನ ಒಪ್ಪಂದಗಳನ್ನು ಕೊನೆಗೊಳಿಸಿತು ಮತ್ತು ಸಮಾನತೆಯ ಆಧಾರದ ಮೇಲೆ ಈ ದೇಶಗಳೊಂದಿಗೆ ಹೊಸ ಒಪ್ಪಂದಗಳನ್ನು ಮಾಡಿಕೊಳ್ಳಲು ಹಾದಿಯನ್ನು ಸುಗಮಗೊಳಿಸಿತು.

ಇದು ಚೀನಾದ ವಿಷಯದಲ್ಲಿ ಅಮೆರಿಕಾ ಮತ್ತು ಜಪಾನ್‌ಗಳ ನಡುವೆ ತೀವ್ರವಾದ ಹಗೆತನದ ಆರಂಭಕ್ಕೆ ಕಾರಣವಾಯಿತು. ಅದು ಜಪಾನಿನ ವಿಸ್ತರಣೆಯ ವಿರುದ್ಧ ಅಮೆರಿಕಾದ ಸಾಂಪ್ರದಾಯಿಕ ತೆರೆದ ಬಾಗಿಲು ನೀತಿ ಮತ್ತು ಚೀನಾದ ಸಮಗ್ರತೆಗಳ ಘರ್ಷಣೆಯಾಗಿದ್ದು ಅದು ವರ್ಸೈಲ್ಸ್ ಸಭೆಗಳಲ್ಲಿ ಜಪಾನ್ ಎತ್ತಿದ ನಿರ್ದಿಷ್ಟ ಸಮಸ್ಯೆಗಳನ್ನು ಮಾತ್ರವೆ ಅಲ್ಲದೆ 1921-22 ರಲ್ಲಿ ವಾಷಿಂಗ್ಟನ್ ಸಮ್ಮೇಳನಕ್ಕೆ ಕಾರಣವಾದ ಇತರ ಸಮಸ್ಯೆಗಳನ್ನು ಒಳಗೊಂಡಿತ್ತು. ಅಮೆರಿಕಾ ಮತ್ತು ಜಪಾನ್‌ಗಳ ನಡುವಿನ ದೂರಗಾಮಿ ರಾಜತಾಂತ್ರಿಕ ಸಮರದಲ್ಲಿ ಸೇರಿದ್ದ ಸಮಸ್ಯೆಗಳೆಂದರೆ

1) ಚೀನಾದಲ್ಲಿ ಜಪಾನಿನ ಬಂಡವಾಳ ಹೂಡಿಕೆಯ ಏಕಸ್ವಾಮ್ಯವನ್ನು ತಡೆಯುವ ಪ್ರಯತ್ನ

2) ರಷ್ಯಾದ ಸಮುದ್ರಕ್ಕೆ ಹೊಂದಿಕೊಂಡ ಪ್ರಾಂತವನ್ನು ಕಬಳಿಸುವ ಪ್ರಯತ್ನವನ್ನು ತಡೆಯುವುದು ಮತ್ತು ಉತ್ತರ ಮಂಚೂರಿಯಾದಲ್ಲಿ ಜಪಾನಿನ ವಲಯದ ಸ್ಥಾಪನೆಯನ್ನು ತಡೆಯುವುದು.

3) ಷಾಂಟುಂಗ್ ಪ್ರಾಂತವನ್ನು ಚೀನಾಕ್ಕೆ ಪುನಃ ದೊರಕಿಸಿಕೊಡುವ ಪ್ರಯತ್ನ

4) ಪೆಸಿಫಿಕ್ ಪ್ರದೇಶ ಮತ್ತು ದೂರ ಪ್ರಾಚ್ಯಗಳನ್ನು ಒಳಗೊಂಡ ಒಂದು ಒಪ್ಪಂದ ರಚನೆಯ ಮೂಲಕ ಅಮೆರಿಕಾದ ಪೌರ್ವಾತ್ಯ ನೀತಿಯ ತತ್ವಗಳ ಅನುಷ್ಠಾನದ ಪ್ರಯತ್ನ. ಹೀಗೆ ಚೀನಾಕ್ಕೆ ಉತ್ತರದ ಪ್ರದೇಶದಲ್ಲಿ ಮಿತ್ರರಾಷ್ಟ್ರಗಳ ಪ್ರವೇಶದ ಕಾರಣದಿಂದ ದೂರಪ್ರಾಚ್ಯದ ರಾಜಕೀಯವನ್ನು ಯುದ್ಧವು ತಾತ್ಕಾಲಿಕವಾಗಿ ಜಟಿಲಗೊಳಿಸಿದ್ದಿತು.

ಯುದ್ಧದ ಮತ್ತೊಂದು ಪರಿಣಾಮವೆಂದರೆ ಚೀನಾಕ್ಕೆ ಹಣಕಾಸನ್ನು ಒದಗಿಸಲು ಹಣಕಾಸಿನ ಒಕ್ಕೂಟದ ಪುನರುಜ್ಜೀವನ ಮೊದಲನೆ ಅಂತರರಾಷ್ಟ್ರೀಯ ಹಣಕಾಸಿನ ಗುಂಪಿನ ರಚನೆಗೆ ಅಮೆರಿಕಾದ ಪ್ರತಿನಿಧಿಗಳು ಅಮೆರಿಕಾ ಸರ್ಕಾರದ ಬೆಂಬಲವನ್ನು ಕೋರಿದಾಗ ಅಧ್ಯಕ್ಷ ವಿಲ್ಸನ್ ಅದನ್ನು ನಿರಾಕರಿಸಿದ್ದನು. ಆದಾಗ್ಯೂ 1917 ರ ನವೆಂಬರ್ ವೇಳೆಗೆ ಅವನು ತಡೆಯಲು ಚೀನಾಕ್ಕೆ ಹಣಕಾಸನ್ನು ಒದಗಿಸಲು ಅಂತರರಾಷ್ಟ್ರೀಯ ಸಹಕಾರವಿರಬೇಕೆಂಬ ನಿರ್ಧಾರಕ್ಕೆ ಬಂದನು. ಪರಿಣಾಮವಾಗಿ ವಿದೇಶಿ ಇಲಾಖೆಯು ಜರ್ಮನಿ ಮತ್ತು ರಷ್ಯಗಳನ್ನು ಕೈಬಿಟ್ಟು ಅಂತರರಾಷ್ಟ್ರೀಯ ಗುಂಪಿನ ಪುನರ್ ರಚನೆಯನ್ನು ಕೈಗೊಂಡಿತು. ಅಮೆರಿಕಾವನ್ನು ಇದರಲ್ಲಿ ಸೇರಿಸಿಕೊಂಡಿದ್ದರಿಂದ ಅದನ್ನು ಪುನಃ ನಾಲ್ಕು ರಾಷ್ಟ್ರಗಳ ಸಂಸ್ಥೆಯನ್ನಾಗಿ ಮಾಡಲಾಯಿತು. ಸಂಬಂಧಪಟ್ಟ ಅನೇಕ ರಾಷ್ಟ್ರಗಳ ಹಣಕಾಸಿನ ಮಧ್ಯವರ್ತಿಗಳ ಪ್ರತಿನಿಧಿಗಳ ನಡುವೆ ಮಾತುಕತೆಗಳ ನಂತರ ತಮ್ಮ ಚಟುವಟಿಕೆಗಳಿಗೆ ತಕ್ಕಂತೆ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು.

ಆದರೆ ಚೀನ ಹಣಕಾಸಿನ ಸಂಘದ ಆಸಕ್ತಿಯ ವಲಯವಾಗಿದ್ದರೂ ಮತ್ತು ಮಂಚೂರಿಯಾ ಹಾಗೂ ಪೂರ್ವದ ಒಳಮಂಗೋಲಿಯಾಗಳು ಚೀನಾದ ಸಮಗ್ರ ಭಾಗಗಳಾಗಿದ್ದರೂ ಜಪಾನ್ ಅವುಗಳನ್ನು ಕೈಬಿಡಲು ಬಯಸಿತು. ಆದಾಗ್ಯೂ ಆ ಪ್ರದೇಶಗಳಲ್ಲಿ ಜಪಾನಿಯರ ಹಿತಾಸಕ್ತಿಗಳಿಗೆ ಧಕ್ಕೆಯುಂಟುಮಾಡುವ ಯಾವುದೇ ಕಾರ್ಯವನ್ನು ಕೈಗೊಳ್ಳುವುದಿಲ್ಲವೆಂಬ ಭರವಸೆಯ ನಂತರ ಜಪಾನ್ ತನ್ನ ನಿಲುವಿನಿಂದ ಹಿಂದೆ ಸರಿಯಿತು. (ನಿಲುವನ್ನು ಬದಲಾಯಿಸಿಕೊಂಡಿತು)

1920 ರಲ್ಲಿ ಹಣಕಾಸಿನ ಸಂಘ ಪುನಃ ಅಸ್ತಿತ್ವಕ್ಕೆ ಬಂದಿತು. ಆದರೆ ಚೀನಾಕ್ಕೆ ನೆರವನ್ನು ನೀಡುವ ಮತ್ತು ಅದರ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ಮಾರುವೇಶದಲ್ಲಿ ದೇಶದ ಮೇಲೆ ಅಂತರರಾಷ್ಟ್ರೀಯ ಹಣಕಾಸಿನ ಹತೋಟಿಯನ್ನು ಸ್ಥಾಪಿಸುವುದು ಅದರ ಉದ್ದೇಶವೆಂಬ ಹೆದರಿಕೆಯಿಂದ ಚೀನಿಯರು ಅದನ್ನು ವಿರೋಧಿಸಿದ್ದರಿಂದ ಅದರ ಚಟುವಟಿಕೆಗಳಿಗೆ ಅವಕಾಶವೇ ಇಲ್ಲದಂತಾಯಿತು. ಆದರೆ ಮುಖ್ಯವಾಗಿ ಗಣರಾಜ್ಯದ ಆಂತರಿಕ ಗಲಭೆ ಮತ್ತು ಭಾಗಶಃ ರಾಷ್ಟ್ರೀಯ ಉದ್ಯಮಕ್ಕಿಂತ ಅಂತರರಾಷ್ಟ್ರೀಯ ಉದ್ಯಮದಲ್ಲಿ ಅದರ ಕೆಲವು ಸದಸ್ಯರು ನಿಜವಾದ ಆಸಕ್ತಿ ಹೊಂದಿರದಿದ್ದುದರಿಂದ ಅದು ನಿಶ್ಚೇಷ್ಟಿತವಾಗಿ ಉಳಿಯಿತು.

## 139.8 ಮುಕ್ತಾಯ

ಈ ಘಟಕದಲ್ಲಿ ಚೀನಾ ಮತ್ತು ಮೊದಲನೆ ಮಹಾಯುದ್ಧದ ಕೆಲವು ಪ್ರಮುಖ ವಿಷಯಗಳನ್ನು ನಿಮ್ಮೊಂದಿಗೆ ಚರ್ಚಿಸುವುದು ನಮ್ಮ ಪ್ರಯತ್ನವಾಗಿದೆ.

ಚೀನ ಗಂಭೀರವಾದ ಆಂತರಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದುದರಿಂದ ಅದು 1914 ರಲ್ಲಿ ತಕ್ಷಣವೇ ಯುದ್ಧದಲ್ಲಿ ಭಾಗವಹಿಸಲಿಲ್ಲ. ಕೆಲವು ಪ್ರಾಂತೀಯ ರಾಜ್ಯಪಾಲರು ಯೂವಾನನ ಅಧಿಕಾರವನ್ನು ಒಪ್ಪಿಕೊಳ್ಳಲು ನಿರಾಕರಿಸಿದರು.

ಚೀನಾದ ಸಂಕಷ್ಟಗಳ ಲಾಭ ಪಡೆದು, ಜಪಾನ್ ಮುಂದಿಟ್ಟ 21 ಬೇಡಿಕೆಗಳನ್ನು ಚೀನ ಒಪ್ಪಿಕೊಂಡಿದ್ದಲ್ಲಿ ಅದು ಜಪಾನಿನ ವಸಾಹತುವಿನ ಸ್ಥಾನಕ್ಕಿಳಿಯುತ್ತಿದ್ದಿತು. ಕೆಲವು ಮಾರ್ಪಾಡುಗಳ ನಂತರ ಯೂವಾನನು ಅವುಗಳನ್ನು ಒಪ್ಪಿಕೊಂಡನು. ಕ್ರಾಂತಿಕಾರಿಗಳು ರಚಿಸಿದ ಚೀನಾದ ಗಣರಾಜ್ಯವು ತುವಾನ್ ಚಿ ಜುಯ್‌ನನ್ನು ಅಧ್ಯಕ್ಷನೆಂದು ಘೋಷಿಸಿತು. ಪ್ರಾರಂಭದಲ್ಲಿ 1914 ರಿಂದ 1917 ರವರೆಗೆ ಚೀನ ತನ್ನ ಘೋಷಿತ ತಟಸ್ಥತೆಯ ನಿಲುವನ್ನು ಉಳಿಸಿಕೊಂಡಿತು. ದೇಶದ ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯ ನಾಶವಾಯಿತು.

ಕಡೆಗೆ ಆಗಸ್ಟ್ 14, 1917 ರಂದು ಚೀನ ಅಮೆರಿಕಾದ ಅಧ್ಯಕ್ಷ ವಿಲ್ಸನ್ನನ ಆದರ್ಶಪ್ರಾಯ ಅರ್ಥ ವಿವರಣೆಯಿಂದಾಗಿ ಮತ್ತು ಜಪಾನಿನ ದುರಾಸೆಯಿಂದ ತನ್ನನ್ನು ರಕ್ಷಿಸಿಕೊಳ್ಳುವ ಸಲುವಾಗಿ ಶತೃಪಕ್ಷದ ರಾಷ್ಟ್ರಗಳ ಮೇಲೆ ಯುದ್ಧವನ್ನು ಘೋಷಿಸಿತು. ಆದಾಗ್ಯೂ ಚೀನ ಯುದ್ಧದಲ್ಲಿ ಸೇರಲು ಷರತ್ತುಗಳನ್ನು ಹಾಕಿತು. ದೇಶದಲ್ಲಿ ದೀರ್ಘವಾದ ಹೋರಾಟದ ನಂತರವೇ ಚೀನಾ ಯುದ್ಧದಲ್ಲಿ ಸೇರಿಕೊಳ್ಳಲು ನಿರ್ಧರಿಸಿತು.

ಆದರೆ ತನ್ನ ಸಂಕಷ್ಟಗಳಿಂದಾಗಿಯೂ ಯುದ್ಧದಲ್ಲಿ ಸೇರಿದ್ದರಿಂದ ಚೀನಾಕ್ಕೆ ಅಪಾರ ಲಾಭವಾಯಿತು.

## 139.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ- ಉತ್ತರಗಳು

*I ಕೆಳಗಿನವುಗಳ ಬಗ್ಗೆ ಪ್ರತಿಯೊಂದಕ್ಕೂ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.*

1. ತುವಾನ್
2. ಲಿ-ಲ್ಹೀನ್
3. ಅಧ್ಯಕ್ಷ ವಿಲ್ಸನ್

*II ಕೆಳಗಿನವುಗಳ ಬಗ್ಗೆ ಪ್ರತಿಯೊಂದಕ್ಕೂ 20 ಸಾಲುಗಳಲ್ಲಿ ಉತ್ತರ ಬರೆಯಿರಿ.*

1. ಚೀನಾ ಮೊದಲನೆ ಮಹಾಯುದ್ಧವನ್ನು ಸೇರಿದ ಸನ್ನಿವೇಶಗಳನ್ನು ಚರ್ಚಿಸಿ. ಅದರಿಂದ ಚೀನಾಕ್ಕೆ ಏನಾದರೂ ಲಾಭವಾಯಿತೆ?
2. ಚೀನಾದ ಮೇಲೆ ಮೊದಲನೆ ಮಹಾಯುದ್ಧದಿಂದಾದ ಪರಿಣಾಮಗಳೇನು?
3. 1919 ರ ಶಾಂತಿ ಒಪ್ಪಂದವು ಎಷ್ಟರ ಮಟ್ಟಿಗೆ ವಿದೇಶಗಳೊಂದಿಗೆ ಚೀನಾ ಅಂತರರಾಷ್ಟ್ರೀಯ ಸಂಬಂಧಗಳನ್ನು ಬದಲಾಯಿಸಿತು?

## 139.10 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


1. R.K. Majumdar : History of China
2. Gupta .R.S. : History of Modern China
3. Jaasen, Maurius .B. : The Japanese and Sunyat - Sen
4. La Fargue T.E. : China and the World war I

## ಟಿಪ್ಪಣಿ

# ಘಟಕ - 140

## ಕುಮಿಂಟಾಂಗ್ ಪಕ್ಷದ ಏಳಿಗೆ ಮತ್ತು ಚಿಯಾಂಗ್ ಕೈ ಷೆಕ್

*ರಚನೆ*


140.0 ಉದ್ದೇಶಗಳು

140.1 ಪೀಠಿಕೆ

140.2 ಕುಮಿಂಟಾಂಗ್ ಪಕ್ಷದ ಏಳಿಗೆ

140.3 ಕುಮಿಂಟಾಂಗ್ ಪಕ್ಷದ ಪುನರ್ರಚನೆ

140.4 ಪ್ರಾರಂಭದ ಜೀವನ ಮತ್ತು ಚಿಯಾಂಗ್ ಕೈ ಷೆಕ್‌ನ ಏಳಿಗೆ 1887-1975

140.5 ಉತ್ತರದ ದಂಡಯಾತ್ರೆಗಳು

140.6 ರಾಷ್ಟ್ರೀಯವಾದಿಗಳ ಆಳ್ವಿಕೆ

140.7 ಚಿಯಾಂಗ್ ಕೈ ಷೆಕ್‌ನ ರಾಷ್ಟ್ರೀಯ ಸರ್ಕಾರದ ನಾಯಕತ್ವದಲ್ಲಿ ಕುಮಿಂಟಾಂಗ್ ಪಕ್ಷದ ಸಾಧನೆಗಳು

140.8 ಮುಕ್ತಾಯ

140.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ - ಉತ್ತರಗಳು

140.10 ಕೆಲವು ಉಪಯುಕ್ತ ಪುಸ್ತಕಗಳು

## 140.0 ಉದ್ದೇಶಗಳು

ಈ ಘಟಕದಲ್ಲಿ ನಾವು ಕುಮಿಂಟಾಂಗ್ ಪಕ್ಷದ ಏಳಿಗೆ ಮತ್ತು ಚೀನಾದಲ್ಲಿ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವಲ್ಲಿ ಚಿಯಾಂಗ್ ಕೈ ಷೆಕ್‌ರ ಪಾತ್ರವನ್ನು ಚರ್ಚಿಸಲಿದ್ದೇವೆ. ಈ ಘಟಕವನ್ನು ಅಭ್ಯಸಿಸಿದ ನಂತರ ನೀವು ಇವುಗಳ ಬಗ್ಗೆ ತಿಳಿಯುವಿರಿ.

* ಚೀನಾದಲ್ಲಿ ರಾಷ್ಟ್ರೀಯ ಜಾಗೃತಿಯ ಉದಯ ಮತ್ತು ಬೆಳವಣಿಗೆ
* ಕುಮಿಂಟಾಂಗ್ ಪಕ್ಷದ ಪುನರ್ ರಚನೆಯ ಕಾರ್ಯಕ್ರಮ
* ಕುಮಿಂಟಾಂಗ್ ಮತ್ತು ಕಮ್ಯುನಿಸ್ಟರ ಮೈತ್ರಿ
* ಜನರಲ್. ಚಿಯಾಂಗ್ ಕೈ ಷೆಕ್‌ರ ಬಾಲ್ಯ ಜೀವನ ಮತ್ತು ಏಳಿಗೆ ಚಿಯಾಂಗ್ ಕೈ ಷೆಕ್‌ರ ನಾಯಕತ್ವದಲ್ಲಿ ರಾಷ್ಟ್ರೀಯವಾದಿಗಳ ಉತ್ತರದ ದಂಡಯಾತ್ರೆ
* ರಾಷ್ಟ್ರೀಯ ಸರ್ಕಾರದ ಸ್ಥಾಪನೆ
* ಚಿಯಾಂಗ್ ಕೈ ಷೆಕ್‌ರ ನಾಯಕತ್ವದಲ್ಲಿ ಕುಮಿಂಟಾಂಗ್ ರಾಷ್ಟ್ರೀಯ ಸರ್ಕಾರದ ಸಾಧನೆಗಳು

## 140.1 ಪೀಠಿಕೆ

ಕುಮಿಂಟಾಂಗ್ ಪಕ್ಷ ದೀರ್ಘ ಇತಿಹಾಸ ಮತ್ತು ಆದರ್ಶಗಳನ್ನು ಹೊಂದಿರುವ ಒಂದು ರಾಜಕೀಯ ಪಕ್ಷ. ಅದನ್ನು ಚೀನಾ ಗಣರಾಜ್ಯವನ್ನು ಮುಕ್ತ, ಪ್ರಜಾಸತ್ತಾತ್ಮಕ, ಸಂಮೃದ್ಧ, ಬಲಿಷ್ಠ ಮತ್ತು ಗೌರವಯುತ ಆಧುನಿಕ ರಾಷ್ಟ್ರವನ್ನಾಗಿ ನಿರ್ಮಿಸುವ ಗುರಿಯಿಂದ ರಚಿಸಲಾಯಿತು. ಪಕ್ಷದ ದೀರ್ಘ ಇತಿಹಾಸವು ತನ್ನ ಆದರ್ಶಗಳ ಈಡೇರಿಕೆಗೆ ಪಕ್ಷದ ಹೋರಾಟದ ಅಪೂರ್ವ ದಾಖಲೆಯನ್ನು ನೀಡುತ್ತದೆ. ಕುಮಿಂಟಾಂಗ್ ಪಕ್ಷವನ್ನು ಚೀನಾ ಗಣರಾಜ್ಯದ ರಾಷ್ಟ್ರಪಿತನೆನಿಸಿರುವ ಡಾ. ಸನ್‌ಯಾತ್‌ಸೇನ್ ಸ್ಥಾಪಿಸಿದರು.

ಒಂದು ಶತಮಾನಕ್ಕೆ ಹೆಚ್ಚಿನ ಕಾಲದವರೆಗೆ ಕುಮಿಂಟಾಂಗ್ ಪಕ್ಷ ಮತ್ತು ಚೀನಾ ಗಣರಾಜ್ಯಗಳ ಅವಿಭಾಜ್ಯವಾಗಿದ್ದವು. ಸನ್‌ಯಾತ್‌ಸೇನರ ರಾಜಕೀಯ ಪಕ್ಷವಾಗಿದ್ದ ತುಂಗ್ ಮೆಂಗ್ ಹುಯ್ ಇತರ ಅನೇಕ ರಾಜಕೀಯ ಪಕ್ಷಗಳ ವಿಲೀನದೊಂದಿಗೆ ಆಗಸ್ಟ್ 1912 ರಲ್ಲಿ ಬೇಯಿಂಗ್‌ನಲ್ಲಿ ಸ್ಥಾಪಿತವಾಯಿತು. ಜುಲೈ 1914 ರಲ್ಲಿ ಸನ್‌ಯಾತ್‌ಸೇನರು ಕುಮಿಂಟಾಂಗ್ ಪಕ್ಷವನ್ನು ಪುನರ್ ಸಂಘಟಿಸಿದರು. ಕುಮಿಂಟಾಂಗ್ ಪಕ್ಷವು ಚೀನಾದ ಇತಿಹಾಸದಲ್ಲಿ ಬಹಳ ಕಾಲದವರೆಗೆ ಸಾರ್ವಜನಿಕರ ಬೆಂಬಲವನ್ನು ಹೊಂದಿದ್ದ ಏಕೈಕ ರಾಜಕೀಯ ಪಕ್ಷವಾಗಿತ್ತು.

ಸನ್‌ಯಾತ್‌ಸೇನರ ಮರಣಾನಂತರ, ಚಿಯಾಂಗ್ ಕೈ ಷೆಕ್‌ರು ಪಕ್ಷದ ನಾಯಕತ್ವವನ್ನು ವಹಿಸಿಕೊಂಡರು. ಕ್ಯಾಂಟನ್ ಸರ್ಕಾರದ ನಾಯಕರಾಗಿ ಚಿಯಾಂಗ್ ಕೈ ಷೆಕ್‌ರು ಆಧುನಿಕ ಚೀನಾದ ಇತಿಹಾಸದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದರು. 1928 ರಲ್ಲಿ ರಾಷ್ಟ್ರೀಯ ಪಡೆಗಳು ಅವರ ನಾಯಕತ್ವದಲ್ಲಿ ಪೀಕಿಂಗ್‌ನ್ನು ವಶಪಡಿಸಿಕೊಂಡು ಉತ್ತರದ ಸರ್ಕಾರವನ್ನು ರದ್ದುಪಡಿಸಿದವು. ಚಾಂಗ್ ಸುಚ್-ಲಿಯಾಂಗ್‌ನ ನೇತೃತ್ವದಲ್ಲಿ ಮಂಚೂರಿಯಾ ಸ್ವ ಇಚ್ಛೆಯಿಂದ ರಾಷ್ಟ್ರೀಯ ಚೀನಾವನ್ನು ಸೇರಿದಾಗ ಚೀನಾದ ಏಕೀಕರಣ ಪೂರ್ಣಗೊಂಡಿತು. ಚಿಯಾಂಗನು ತನ್ನ ರಾಜಧಾನಿಯನ್ನು ಪೀಕಿಂಗ್‌ನಿಂದ ನಾನ್‌ಕಿಂಗ್‌ಗೆ ವರ್ಗಾಯಿಸಿದನು. ಉತ್ತಮ ಸರ್ಕಾರವನ್ನು ಸಂಘಟಿಸಲಾಯಿತು. ರಾಷ್ಟ್ರೀಯ ಜನತಾ ಸಮ್ಮೇಳನವು 1931 ರಲ್ಲಿ ಒಂದು ಸಂವಿಧಾನವನ್ನು ಸಿದ್ಧಪಡಿಸಿತು. ಅದನ್ನು 1935 ರಲ್ಲಿ ತಿದ್ದುಪಡಿ ಮಾಡಲಾಯಿತು. ಚಿಯಾಂಗ್ ಕೈ ಷೆಕ್‌ರು 1949 ರಲ್ಲಿ ಕಮ್ಯುನಿಸ್ಟ್ ಆಳ್ವಿಕೆಯ ಸ್ಥಾಪನೆಯವರೆಗೆ ರಾಷ್ಟ್ರೀಯ ಸರ್ಕಾರದ ನಾಯಕತ್ವ ವಹಿಸಿದ್ದರು. ನಂತರ ಅವರು ಫಾರ್ಮೋಸಾ ದ್ವೀಪದಲ್ಲಿ ಆಶ್ರಯ ಪಡೆದು ಅಲ್ಲಿ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿದರು.

## 140.2 ಕುಮಿಂಟಾಂಗ್ ಪಕ್ಷದ ಏಳಿಗೆ

ಕುಮಿಂಟಾಂಗ್ ಪಕ್ಷವು ದೀರ್ಘ ಇತಿಹಾಸ ಮತ್ತು ಆದರ್ಶಗಳ ಒಂದು ರಾಜಕೀಯ ಪಕ್ಷ. ಚೀನಾ ಗಣರಾಜ್ಯವನ್ನು ಒಂದು ಮುಕ್ತ, ಪ್ರಜಾಸತ್ತಾತ್ಮಕ, ಸಂಮೃದ್ಧಿ, ಬಲಿಷ್ಠ ಮತ್ತು ಗೌರವಯುತ ಆಧುನಿಕ ರಾಷ್ಟ್ರವನ್ನಾಗಿ ನಿರ್ಮಿಸುವ ಧ್ಯೇಯದಿಂದ ಅದನ್ನು ರಚಿಸಲಾಯಿತು. ಪಕ್ಷದ ದೀರ್ಘ ಇತಿಹಾಸವು ಅದರ ಆದರ್ಶಗಳನ್ನು ನನಸಾಗಿಸಲು ಪಕ್ಷದ ಹೋರಾಟದ ಸುಂದರ ದಾಖಲೆಯನ್ನು ನೀಡುತ್ತದೆ.

ಚೀನಾದಲ್ಲಿ ಕುಮಿಂಟಾಂಗ್ ಪಕ್ಷದ ಏಳಿಗೆಯು ಆ ದೇಶದ ಇತಿಹಾಸದ ಪ್ರಮುಖ ಘಟನೆಗಳಲ್ಲಿ ಒಂದಾಗಿದೆ. ಈ ಪಕ್ಷದ ಸ್ಥಾಪನೆಯೊಂದಿಗೆ ಏಕೀಕೃತ ಚೀನ ಏಳಿಗೆಗೆ ಬಂದಿತು. ಡಾ. ಸನ್‌ಯಾತ್‌ಸೆನರು 1905 ರಲ್ಲಿ ಚೀನಾದಲ್ಲಿ ಟಿ. ತುಂಗ್ ಮೆಂಗ್ ಹುಯ್ ಎಂಬ ಒಂದು ಕ್ರಾಂತಿಕಾರಿ ಪಕ್ಷವನ್ನು ಸ್ಥಾಪಿಸಿದರು. ಅದು ಮಂಚೂಗಳ ಕಾಲದಲ್ಲಿ ಭೂಗತ ಕ್ರಾಂತಿಕಾರಿ ಸಂಘಟನೆಯಾಗಿ ಕಾರ್ಯಾಚರಣೆ ನಡೆಸುತ್ತಿದ್ದಿತು. ಆದರೆ 1911 ರ ಕ್ರಾಂತಿಯ ನಂತರ ಈ ಪಕ್ಷವು ಬಹಿರಂಗವಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು ಮತ್ತು ಈ ಅವಧಿಯಲ್ಲಿ ಅದು ನಾನ್‌ಕಿಂಗ್‌ನಲ್ಲಿ ಡಾ. ಸನ್‌ಯಾತ್‌ಸೆನರು ತಾತ್ಕಾಲಿಕ ಅಧ್ಯಕ್ಷನಾಗಿದ್ದ ಒಂದು ಕ್ರಾಂತಿಕಾರಿ ಸರ್ಕಾರವನ್ನು ಸ್ಥಾಪಿಸಿತು. ನಂತರ ತುಂಗ್ ಮೆಂಗ್ ಹುಯ್ ಪಕ್ಷವು ಇತರ ಅನೇಕ ರಾಜಪಕ್ಷಗಳ ವಿಲೀನಗೊಂಡು ಆಗಸ್ಟ್ 1912 ರಲ್ಲಿ ಬೀಜಿಂಗ್‌ನಲ್ಲಿ ಕುಮಿಂಟಾಂಗ್ ಪಕ್ಷವನ್ನು ರಚಿಸಿತು. ಈ ಪಕ್ಷವು ಮಂಚೂಗಳ ವಿರುದ್ಧ ಹೋರಾಟವನ್ನು ಮುಂದುವರಿಸಿತು. ಆದರೆ ಅದು ಹಣಕಾಸಿನ ಕೊರತೆಯಿಂದ ಯೂವಾನನೊಂದಿಗೆ ರಾಜಿ ಮಾಡಿಕೊಳ್ಳಬೇಕಾಯಿತು. ರಾಜನ ಅಧಿಕಾರದ ವಿರುದ್ಧ ಪಕ್ಷಕ್ಕೆ ಅಧಿಕಾರವನ್ನು ಉಳಿಸಿಕೊಳ್ಳುವುದು ಬಹುಮಟ್ಟಿಗೆ ಅಸಾಧ್ಯವೆಂದು ಅದು ಭಾವಿಸಿತು. 1912 ರಲ್ಲಿ ಮಾಡಿಕೊಳ್ಳಲಾದ ಒಡಂಬಡಿಕೆಯಿಂದ (ರಾಜಿ) ಡಾ. ಸನ್‌ಯಾತ್‌ಸೆನರು ಯೂವಾನನ ಪರವಾಗಿ ಅಧಿಕಾರ ತ್ಯಜಿಸಿದರು ಮತ್ತು ಇದರೊಂದಿಗೆ ಯೂವಾನ್ ಷಿಕಾಯಿಯ ಅಧ್ಯಕ್ಷನಾಗಿದ್ದ ಹೊಸ ಗಣರಾಜ್ಯ ಉದಯಿಸಿತು. ಯೂವಾನ್ ಅಧ್ಯಕ್ಷನಾದಾಗ ತನ್ನ ಅಧಿಕಾರಕ್ಕೆ ಇರುವ ಏಕೈಕ ಅಪಾಯವೆಂದರೆ ಅದು ಕುಮಿಂಟಾಂಗ್ ಪಕ್ಷವೆಂದು ಖಚಿತವಾಗಿ ಅರಿತಿದ್ದನು. ಆದ್ದರಿಂದ ಪಕ್ಷವನ್ನು ನಾಶಪಡಿಸಲು ಅವನು ಅವಕಾಶವನ್ನು ಬಯಸಿದನು. 1913 ರಲ್ಲಿ ನಡೆದ ಚುನಾವಣೆಗಳ ಕಾಲದಲ್ಲಿ ಕುಮಿಂಟಾಂಗ್ ಪಕ್ಷ ಉತ್ತಮ ಬಹುಮತ ಪಡೆಯಿತು. ಕುಮಿಂಟಾಂಗ್ ಪಕ್ಷದಲ್ಲಿ ಸನ್‌ಯಾತ್‌ಸೆನ್‌ರ ಉಪನಾಯಕರಾಗಿದ್ದ ಸುಂಗ್ ಚಿಯಾವೋ ಜೆನ್ ಉತ್ಸಾಹದಿಂದ ಸಂಪುಟ ವ್ಯವಸ್ಥೆಗೆ ಬೆಂಬಲ ನೀಡಿದರು ಮತ್ತು ಅವರನ್ನು ಪ್ರಧಾನಮಂತ್ರಿ ಅಭ್ಯರ್ಥಿಯೆಂದು ವ್ಯಾಪಕವಾಗಿ ಪರಿಗಣಿಸಲಾಗಿತ್ತು. ಸುಂಗನು ತನ್ನ ಅಧಿಕಾರಕ್ಕೆ ಕುತ್ತೆಂದು ಯೂವಾನನು ಪರಿಗಣಿಸಿದನು ಮತ್ತು ಮಾರ್ಚ್ 20, 1913 ರಂದು ಸುಂಗನ ಹತ್ಯೆಯ ನಂತರ ಮಾಧ್ಯಮಗಳಲ್ಲಿ ಯೂವಾನನೇ ಇದಕ್ಕೆ ಕಾರಣನೆಂದು ಊಹಾಪೋಹಗಳು ಎದ್ದವು. ಕುಮಿಂಟಾಂಗ್ ಪಕ್ಷ ಮತ್ತು ಯೂವಾನರ ನಡುವೆ ಉದ್ವಿಘ್ನತೆ ಮತ್ತಷ್ಟು ತೀವ್ರಗೊಂಡಿತು. ಇದು ಯೂವಾನನು ತನ್ನ ಸೈನ್ಯದ ಬಲದಿಂದ ಸರ್ಕಾರವನ್ನು ವಶಪಡಿಸಿಕೊಳ್ಳುವಂತೆ ಮತ್ತು ಕ್ರಮೇಣ ರಾಷ್ಟ್ರೀಯ ಮತ್ತು ಪ್ರಾಂತೀಯ ಶಾಸನ ಸಭೆಗಳನ್ನು ವಿಸರ್ಜಿಸಿದನು. ಕುಮಿಂಟಾಂಗ್ ಪಕ್ಷವು ಯೂವಾನನ ವಿರುದ್ಧ ವಿಫಲವಾದ "ಎರಡನೇ ಕ್ರಾಂತಿ" ಗೆ ಪ್ರಯತ್ನಿಸಿತು. ಆದರೆ ಸೈನ್ಯದ ಬೆಂಬಲದಿಂದ ಯೂವಾನನು ದಂಗೆಯನ್ನು ಸುಲಭವಾಗಿ ಅಡಗಿಸಿದನು ಮತ್ತು ಸನ್‌ಯಾತ್‌ಸೆನರೂ ಸೇರಿದಂತೆ ಕುಮಿಂಟಾಂಗ್ ಪಕ್ಷದ ಮುಖಂಡರು ಜಪಾನಿಗೆ ತಲೆ ತಪ್ಪಿಸಿಕೊಂಡು ಓಡಿಹೋಗುವಂತೆ ಮಾಡಿದನು. ಕಡೆಗೆ ಯೂವಾನನು 1913 ರಲ್ಲಿ ಕುಮಿಂಟಾಂಗ್ ಪಕ್ಷವನ್ನು ಬಹಿಷ್ಕರಿಸಿದ್ದರಿಂದ ಅದು ಭೂಗತವಾಯಿತು.

ನಂತರ ಯೂವಾನನು ಒಂದು ದೊಡ್ಡ ರಾಜಕೀಯ ಅಪರಾಧವನ್ನು ಎಸಗಿದನು. ಹಾಂಗ್‌ಕ್ಸಿಯನ್ ಮಗದ ಹೆಸರಿನಲ್ಲಿ ಅವನು ತನ್ನನ್ನು ಚೀನಾ ಸಾಮ್ರಾಜ್ಯದ ಚಕ್ರವರ್ತಿಯೆಂದು ಘೋಷಿಸಿಕೊಂಡು ರಾಜಪ್ರಭುತ್ವವನ್ನು ಪುನಃ ಸ್ಥಾಪಿಸಿದನು. ಅವನು ಡಿಸೆಂಬರ್ 12, 1915 ರಿಂದ ಮಾರ್ಚ್ 22, 1916 ರವರೆಗೆ ಅಲ್ಪ ಅವಧಿಗೆ ಚೀನಾದ ಚಕ್ರವರ್ತಿಯಾಗಿದ್ದನು. ಇದನ್ನು ಕ್ರಾಂತಿಕಾರಿಗಳು ಮಾತ್ರವಲ್ಲದೆ ಬಹು ಮುಖ್ಯವಾಗಿ ಯೂವಾನನ ಅಧೀನ ಸೇನಾ ದಂಡನಾಯಕರು ವಿರೋಧಿಸಿದರು. ಅವರು ಯೂವಾನನು ಚಕ್ರವರ್ತಿಯಾದಲ್ಲಿ ಸೈನ್ಯದ ಬೆಂಬಲವಿಲ್ಲದೆ ಆಡಳಿತ ನಡೆಸುವನೆಂದು ನಂಬಿದ್ದರು. ಸಾರ್ವತ್ರಿಕ ವಿರೋಧವನ್ನು ಎದುರಿಸಿದ ಯೂವಾನನು ರಾಜಪ್ರಭುತ್ವವನ್ನು ರದ್ದುಪಡಿಸಿದನು ಮತ್ತು ಕೆಲವು ತಿಂಗಳುಗಳ ನಂತರ ನಿಧನನಾದನು.

## 140.3 ಕುಮಿಂಟಾಂಗ್ ಪಕ್ಷದ ಪುನರ್ರಚನೆ

ಸನ್‌ಯಾತ್‌ಸೇನರು ಚೀನಾಕ್ಕೆ ಹಿಂತಿರುಗಿದಾಗ ಅವರು ದೇಶದಲ್ಲಿ ಅರಾಜಕತೆಯಿದ್ದುದನ್ನು ಕಂಡರು. ಸೈನಿಕ ನಾಯಕರು ತಮ್ಮ ಪ್ರಭಾವಿತ ವಲಯದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು. ಸನ್‌ಯಾತ್‌ಸೇನರು ಈ ಸನ್ನಿವೇಶದ ಲಾಭವನ್ನು ಪಡೆದರು ಮತ್ತು ಕ್ಯಾಂಟನ್‌ನಲ್ಲಿ ಒಂದು ಸರ್ಕಾರವನ್ನು ರಚಿಸಿದರು. ಅದು ಸ್ವಲ್ಪ ಸಮಯದ ನಂತರ ಚೀನಾದ ರಾಷ್ಟ್ರೀಯ ಸರ್ಕಾರವಾಯಿತು. ಡಾ. ಸನ್‌ಯಾತ್‌ಸೇನರು ಹೊಸ ಸರ್ಕಾರದ ಅಧ್ಯಕ್ಷರಾದರು.

ಜುಲೈ 1914 ರಲ್ಲಿ ಟೋಕಿಯೋದಲ್ಲಿ ಕುಮಿಂಟಾಂಗ್ ಪಕ್ಷವನ್ನು ಚುಂಗ್ ಹುವಾ ಕೆ ಮಿಂಗ್ ತಂಗ್ ಎಂಬುದಾಗಿ ಪುನರ್ ಸಂಘಟಿಸಲಾಯಿತು ಮತ್ತು 1919 ರಲ್ಲಿ ಇದನ್ನು ಚುಂಗ್ ಕುವೊ ಮಿನ್ ಟ್ಯಾಂಗ್ ಎಂದು ಮರು ನಾಮಕರಣ (ಚುಟುಕಾಗಿ ಕುಮಿಂಟಾಂಗ್) ಮಾಡಲಾಯಿತು. ಸನ್‌ಯಾತ್‌ಸೇನರು ರಷ್ಯಾದ ನೆರವನ್ನು ಸ್ವೀಕರಿಸಿದರು ಮತ್ತು 1922 ರ ನಂತರ ಅನೇಕ ಕಮ್ಯುನಿಸ್ಟ್ ಏಜೆಂಟರು ಮುಖ್ಯವಾಗಿ ಮೈಕೇಲ್ ಬೊಕೊದಿನ್ ಮತ್ತು ವಿ.ಕೆ. ಬ್ಲುಚರ್ ಕುಮಿಂಟಾಂಗ್ ಪಕ್ಷದ ಪುನರ್ ರಚನೆಯಲ್ಲಿ ನೆರವಾದರು. 1924 ರಲ್ಲಿ ಅದರ ಉದ್ಘಾಟನೆಯಿಂದ ಕುಮಿಂಟಾಂಗ್ ಪಕ್ಷವು 14 ಸಭೆಗಳನ್ನು ನಡೆಸಿತು. ಈ ಸಭೆಗಳು ಒಂದು "ಕ್ರಾಂತಿಕಾರಿ" ಪಕ್ಷದಿಂದ ಒಂದು "ಪ್ರಜಾಸತ್ತಾತ್ಮಕ ಕ್ರಾಂತಿಕಾರಿ" ಪಕ್ಷವಾಗಿ ಮತ್ತು ಸಂಪೂರ್ಣ ಪ್ರಜಾಸತ್ತಾತ್ಮಕ ಪಕ್ಷವಾಗಿ ಪಕ್ಷದ ಬೆಳವಣಿಗೆಯ ದಾಖಲೆಯಲ್ಲಿ ಒದಗಿಸುತ್ತದೆ. 1924 ರಲ್ಲಿ ಗುವಾಂಗ್‌ಜೌನಲ್ಲಿ ನಡೆದ ಪಕ್ಷದ ಸಭೆಯಲ್ಲಿ ಕಮ್ಯುನಿಸ್ಟರನ್ನೊಳಗೊಂಡ ಒಂದು ಸಮ್ಮಿಶ್ರ ಸರ್ಕಾರವು ಸನ್‌ಯಾತ್‌ಸೇನರ ಜನಸಾಮಾನ್ಯರ ಮೂರು ತತ್ವಗಳಾದ ರಾಷ್ಟ್ರೀಯತೆ, ಪ್ರಜಾಪ್ರಭುತ್ವ ಮತ್ತು ಜನಸಾಮಾನ್ಯರ ಜೀವನಾವಶ್ಯಕತೆ (ಜನಸಾಮಾನ್ಯರ ಆರ್ಥಿಕ ಪ್ರಗತಿ) ಗಳನ್ನೊಳಗೊಂಡ ಒಂದು ರಾಜಕೀಯ ಸಿದ್ಧಾಂತವನ್ನು ಅಂಗೀಕರಿಸಿತು. ಸನ್‌ಯಾತ್‌ಸೇನರು ಚೀನಾದ ರಾಷ್ಟ್ರೀಯ ಪುನರ್ ಸಂಘಟನೆಯಲ್ಲಿ ಹಂತಹಂತವಾದ ಬೆಳವಣಿಗೆಯನ್ನು ಅನುಸರಿಸಬೇಕೆಂದು ಆಲೋಚಿಸಿದರು. ಸೈನಿಕ ಸರ್ಕಾರ, ಕುಮಿಂಟಾಂಗ್ ಪಕ್ಷದ ಪ್ರತಿನಿಧಿ ಸರ್ಕಾರ ಮತ್ತು ಜನಪ್ರಿಯ ಸಾರ್ವಭೌಮಾಧಿಕಾರ.

ಕುಮಿಂಟಾಂಗ್ ಪಕ್ಷವು ಚೀನಾದ ಇತಿಹಾಸದಲ್ಲಿ ದೀರ್ಘವಾದ ಜನಪ್ರಿಯ ಬೆಂಬಲವನ್ನು ಪಡೆದ ಏಕೈಕ ರಾಜಕೀಯ ಪಕ್ಷವಾಗಿತ್ತು. ನೂರು ವರ್ಷಗಳಿಗೂ ಹೆಚ್ಚು ಕಾಲ ಕುಮಿಂಟಾಂಗ್ ಪಕ್ಷ ಮತ್ತು ರಾಷ್ಟ್ರೀಯ ಸರ್ಕಾರಗಳು ಅವಿಭಾಜ್ಯವಾಗಿದ್ದವು. ಈ ಕಾಲದಲ್ಲಿ ಕುಮಿಂಟಾಂಗ್ ಪಕ್ಷವು ಮಂಚು ಸರ್ಕಾರ ಮತ್ತು "ಸಂವಿಧಾನಾತ್ಮಕ ರಾಜಪ್ರಭುತ್ವವಾದಿಗಳು". 1915 ರಲ್ಲಿ ತನ್ನನ್ನು ಚಕ್ರವರ್ತಿಯೆಂದು ಘೋಷಿಸಿಕೊಂಡ ಯೂವಾನನ ಬೆದರಿಕೆಗಳು, ಸೇನಾ ದಂಡನಾಯಕ ದಬ್ಬಾಳಿಕೆ, ಸರ್ಕಾರವನ್ನು ಉರುಳಿಸುವ ಕಮ್ಯುನಿಸ್ಟರ ಪ್ರಯತ್ನದಿಂದ ಉಂಟಾದ ಸಂಕಷ್ಟಗಳು, ಜಪಾನಿನ ಆಕ್ರಮಣ ಮತ್ತು ಕಮ್ಯುನಿಸ್ಟರ ಹತೋಟಿಯಲ್ಲಿದ್ದ ಮುಖ್ಯ ಭಾಗಗಳೊಂದಿಗೆ ಸಂಘರ್ಷ ಮುಂತಾದ ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು.

1926 ರಲ್ಲಿ ಕುಮಿಂಟಾಂಗ್ ಪಕ್ಷದ ನಾಯಕ ಜನರಲ್ ಚಿಯಾಂಗ್ ಕೈ ಷೆಕ್‌ನು ಬೀಜಿಂಗ್ ಸರ್ಕಾರದ ವಿರುದ್ಧ ಗುವಾಂಗ್‌ಜೌನಿಂದ ಉತ್ತರದ ಕಡೆಗೆ ಮುನ್ನುಗ್ಗುವ ಮೂಲಕ ಉತ್ತರದ ದಂಡಯಾತ್ರೆಯನ್ನು ಕೈಗೊಂಡನು. 1927 ರಲ್ಲಿ ಕಮ್ಯುನಿಸ್ಟರನ್ನು ಪಕ್ಷದಿಂದ ಉಚ್ಛಾಟಿಸಿದಾಗ ಮತ್ತು ಎರಡು ಗುಂಪುಗಳ ನಡುವೆ ಆಂತರ್ಯುದ್ಧ ಪ್ರಾರಂಭವಾದಾಗ ತಾತ್ಕಾಲಿಕ ನಿಲುಗಡೆಯ ನಂತರ ಕುಮಿಂಟಾಂಗ್ ಪಡೆಗಳು 1928 ರಲ್ಲಿ ಬೀಜಿಂಗ್‌ನ್ನು ಅಂತಿಮವಾಗಿ ವಶಪಡಿಸಿಕೊಂಡವು. 1928 ರಲ್ಲಿ ಕುಮಿಂಟಾಂಗ್ ಸರ್ಕಾರವು ರಾಜತಾಂತ್ರಿಕ ಮಾನ್ಯತೆಯನ್ನು ಪಡೆಯಿತು ಮತ್ತು ಪ್ರಾತನಿಧ್ಯದ ಕಾಲ ಆರಂಭವಾಯಿತು. ಅನೇಕ ಕುಮಿಂಟಾಂಗ್ ದಾಳಿಗಳ ನಂತರ ಕಮ್ಯುನಿಸ್ಟರು ದಕ್ಷಿಣ ಮತ್ತು ಮಧ್ಯ ಚೀನಾದ ನೆಲೆಗಳಿಂದ ಬಲವಂತವಾಗಿ ನಿರ್ಗಮಿಸುವಂತಾಯಿತು ಮತ್ತು ವಾಯುವ್ಯ ಭಾಗದಲ್ಲಿ ಹೊಸ ಭದ್ರ ನೆಲೆಗಳನ್ನು ಸ್ಥಾಪಿಸಿದರು. ಕುಮಿಂಟಾಂಗ್ ಸೇನೆ ಹೆಚ್ಚುತ್ತಿದ್ದ ಜಪಾನಿನ ಬೆದರಿಕೆಯನ್ನು ಕಡೆಗಣಿಸಿ 1937 ರಲ್ಲಿ ಜಪಾನಿಯರು ಉತ್ತರ ಚೀನಾದ ಮೇಲೆ ಆಕ್ರಮಣ ಮಾಡುವವರೆಗೂ ಕಮ್ಯುನಿಸ್ಟರ ವಿರುದ್ಧ ಯುದ್ಧವನ್ನು ಮುಂದುವರಿಸಿತು. ಅಧಿಕಾರ ಶಾಹಿಯ ಅದಕ್ಷತೆ ಮತ್ತು ಭ್ರಷ್ಟಾಚಾರಗಳಿಂದ ಜರ್ಝರಿತವಾಗಿದ್ದರೂ ಅದು 1947 ರವರೆಗೂ ಚೀನಾದ ಕೇಂದ್ರ ಸರ್ಕಾರದ ಮೇಲೆ ಹತೋಟಿಯನ್ನು ಹೊಂದಿತ್ತು. ಆದರೆ ಪ್ರಯತ್ನಗಳ ಮತ್ತು ಸ್ಥಳೀಯ ಹಂತದ ಆಡಳಿತದ ಮೇಲೆ ಅದರ ಹತೋಟಿ ಎಂದಿಗೂ ಪರಿಪೂರ್ಣವಾಗಿರಲಿಲ್ಲ.

ಹಣದುಬ್ಬರದಿಂದ ಮತ್ತಷ್ಟು ಜಟಿಲವಾಗಿದ್ದ ಪೂರ್ಣ ಪ್ರಮಾಣದ ಅಂತರ್ಯುದ್ಧದಿಂದ 1945 ರಿಂದ 1949 ರವರೆಗಿನ ವರ್ಷಗಳು ವಿಶಿಷ್ಟವಾಗಿದ್ದವು. ಕುಮಿಂಟಾಂಗ್ ಪಕ್ಷದ ಅಧಿಕಾರ ಏಕಪ್ರಕಾರವಾಗಿ ಕುಸಿಯಿತು ಮತ್ತು 1949 ರ ಕಡೆಯ ವೇಳೆಗೆ ಮುಖ್ಯ ಭೂಮಿ ಕಮ್ಯುನಿಸ್ಟರ ಹತೋಟಿಗೊಳಪಟ್ಟಿತು. ಚೀನಾದಿಂದ ಉಚ್ಚಾಟಿಸಲ್ಪಟ್ಟ ಕುಮಿಂಟಾಂಗ್ ಪಕ್ಷವು ಮೊದಲು ಚಿಯಾಂಗ್‌ನ ನಂತರ ಅವನ ಮಗ ಚಿಯಾಂಗ್ ಚಿಂಗ್-ಕುವೊ ಮತ್ತು ಲೀ ತೆಂಗ್-ಹುಯಿಯ ನಾಯಕತ್ವದಲ್ಲಿ ತೈವಾನಿನಲ್ಲಿ ಅಧಿಕಾರದಲ್ಲಿತ್ತು.

ಹೀಗೆ ಕುಮಿಂಟಾಂಗ್ ಪಕ್ಷವು ಚೀನಾದಲ್ಲಿ ರಾಷ್ಟ್ರೀಯ ಸ್ಥಿರತೆ ಮತ್ತು ಪ್ರಗತಿಯನ್ನು ಸಾಧಿಸಿದ ರಾಜಕೀಯ ಪಕ್ಷವೆಂಬುದನ್ನು ಇತಿಹಾಸ ಸಮರ್ಥಿಸುತ್ತದೆ.

## 140.4 ಚಿಯಾಂಗ್ ಕೈ ಷೆಕ್‌ರ ಪ್ರಾರಂಭದ ಜೀವನ ಮತ್ತು ಏಳಿಗೆ

ಡಾ. ಸನ್‌ಯಾತ್‌ಸೆನರ ಮರಣಾ ನಂತರ ಚೀನಾದ ನಾಯಕತ್ವಕ್ಕಾಗಿ ಅನೇಕ ಸ್ಪರ್ಧಿಗಳು ಕಣದಲ್ಲಿದ್ದರೂ ಚಿಯಾಂಗ್ ಕೈ ಷೆಕ್ ನೆಚ್ಚಿನವರೆಂಬುದು ಸ್ಪಷ್ಟವಾಗಿತ್ತು. ಅವರು ಸನ್‌ಯಾತ್‌ಸೆನರ ನಾದಿನಿಯನ್ನು ಮದುವೆಯಾಗಿದ್ದರು. 1926 ರಲ್ಲಿ ಕುಮಿಂಟಾಂಗ್ ಪಕ್ಷಕ್ಕಾಗಿ ಬೀಜಿಂಗ್‌ನ್ನು ವಶಪಡಿಸಿಕೊಳ್ಳಲು ತೀಕ್ಷ್ಣವಾದ ಪ್ರಚಾರವನ್ನು ನಡೆಸಿದರು ಮತ್ತು ಎರಡನೇ ಮಹಾಯುದ್ಧದಲ್ಲಿ ಜಪಾನಿನ ವಿರುದ್ಧ ಯುದ್ಧ ನಡೆಸಿದರು. ಖಂಡಿತವಾಗಿಯೂ ಈ ಯುದ್ಧ ಪ್ರೇಮಿಯೂ ತನ್ನ ದೇಶವನ್ನು ರಕ್ಷಿಸುವ ಅವಕಾಶವನ್ನು ಹೊಂದಿದ್ದನೇ ವಿನಃ ಸಮಾಜವಾದಿ ಕವಿಯೊಬ್ಬನ ನಾಯಕತ್ವದ ಬಡ ರೈತರನ್ನಲ್ಲ. ಬಲಿಷ್ಠನಾಗಿದ್ದ ಚಿಯಾಂಗ್ ಕೈ ಷೆಕ್ ಚೀನಾವನ್ನು ಹೇಗೆ ಕಳೆದುಕೊಂಡನು.

ಮಾವೋತ್ಸೆತುಂಗನಂತೆ ಚಿಯಾಂಗನು ತನ್ನ ಯೌವನದ ಕಠಿಣವಾದ ವಾಸ್ತವತೆಯಿಂದ ಅರಿತವನಾಗಿ ರಾಷ್ಟ್ರೀಯ ಕೀರ್ತಿಯ ಕನಸನ್ನು ಹೊಂದಿದ್ದನು. 1887 ರಲ್ಲಿ ಪೂರ್ವದ ಜೇಜಿಯಾಂಗ್ ಪ್ರಾಂತದ ಒಂದು ದೂರದ ಹಳ್ಳಿಯಲ್ಲಿ ಜನಿಸಿದ ಅವನು ತನ್ನ ತಂದೆಯ ಮರಣದ ನಂತರ ಒಂಭತ್ತನೇ ವಯಸ್ಸಿನಲ್ಲಿಯೇ ದುಡಿಯತೊಡಗಿದನು (ದುಡಿಮೆಯನ್ನು ಆರಂಭಿಸಿದನು). ತನ್ನ 18 ನೇ ವಯಸ್ಸಿನಲ್ಲಿ ಚೀನಾವನ್ನು ಬಿಟ್ಟು ಟೋಕಿಯೋದ ಸೈನಿಕ ತರಬೇತಿ ಅಕಾಡೆಮಿಯ ಸೈನಿಕರೊಂದಿಗೆ ತರಬೇತಿಗಾಗಿ ಹೋದನು. ಅಲ್ಲಿನ ಸೈನಿಕರ ಶಿಸ್ತು ಮತ್ತು ಸುಸಜ್ಜಿತ ವ್ಯವಸ್ಥೆಯಿಂದ ಪ್ರೇರಿತನಾದ ಅವನು ಒಂದು ದಿನ ಚೀನ ಆಧುನಿಕ ಸೈನ್ಯವನ್ನು ಹೊಂದುವುದೆಂದು ನಂಬಿದನು. ಅವನು ಜಪಾನಿನ ನಿಷ್ಠುರವಾದಿ ಲೇಖಕರು ಮತ್ತು ಸೈನಿಕ ಅಕಾಡೆಮಿಯ ಬಿಗಿ ಆಡಳಿತವನ್ನು ಮೈಗೂಡಿಸಿಕೊಂಡು 'ಕಹಿಯನ್ನು ನುಂಗಿ' ಜೀರ್ಣಿಸಿಕೊಳ್ಳಲು ಕಲಿತನು.

1911 ರ ಕ್ರಾಂತಿ ಆರಂಭವಾಗುತ್ತಿದ್ದಂತೆ ಚಿಯಾಂಗನು ಚೀನಾಕ್ಕೆ ಹಿಂದಿರುಗಿ ಕುಮಿಂಟಾಂಗ್ ಪಕ್ಷವನ್ನು ಸೇರಿದನು. ಅದು ತನ್ನ ಕೀರ್ತಿಯ ಉತ್ತುಂಗದಲ್ಲಿದ್ದಾಗ 1926 ರಲ್ಲಿ ಅವನು ಸನ್‌ಯಾತ್‌ಸೆನರ ಉತ್ತರಾಧಿಕಾರಿಯಾದಾಗ, ಮಂಚೂಗಳನ್ನು ಉರುಳಿಸಲಾಗಿತ್ತು. ಆದರೆ ಅದು ಗುಂಪುಗಾರಿಕೆ ಹಾಗೂ ವ್ಯವಸ್ಥಿತ ಅಪರಾಧೀಕರಣದ ಹಿಡುಗಿಗೆ ಒಳಗಾಗಿತ್ತು. ಸೋವಿಯತ್ ರಷ್ಯ ಮತ್ತು ಸನ್‌ಯಾತ್‌ಸೆನ್ ಬೆಂಬಲದಿಂದ ಚಿಯಾಂಗನು ಪಕ್ಷದ ಹೊಸ ಸೈನ್ಯವನ್ನು ಕಟ್ಟಿ ಯುದ್ಧ ನಾಯಕರನ್ನು ಅಡಗಿಸಿದನು. ಈ ವೇಳೆಗೆ ಕುಮಿಂಟಾಂಗ್ ಸೇನೆ 1928 ರಲ್ಲಿ ಬೀಜಿಂಗ್‌ನ್ನು ಪ್ರವೇಶಿಸಿ ಕಮ್ಯುನಿಸ್ಟರನ್ನು ಪಕ್ಷದ ಹುದ್ದೆಗಳಿಂದ ಕೆಳಗಿಳಿಸಿದನು.

ಚಿಯಾಂಗ್ ಕೈ ಷೆಕ್ ಮಹತ್ವದ ನಿರ್ಧಾರಗಲು ಚೀನಾದ ಶ್ರೀಮಂತ ಕುಟುಂಬವಾಗಿದ್ದ ಸುಂಗ್ ಮನೆತನದೊಂದಿಗೆ ಅವನ ವಿವಾಹ ಸಂಬಂಧವನ್ನು ಮಾಡಿಕೊಂಡನು. 1927 ರಲ್ಲಿ ಅವನು ಸುಂಗ್ ಮನೆತನದ ಮೀ-ಲಿಂಗಳನ್ನು ಮದುವೆಯಾಗಿ ಅವಳ ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರು. "ನನಗೆನಿಸುತ್ತದೆ. ಜೀಸಸ್ ಒಂದು ರಾಷ್ಟ್ರೀಯ ಕ್ರಾಂತಿಯ ನಾಯಕನೆಂಬ ಕಾರಣಕ್ಕೆ ನಾವು ಅವನನ್ನು ನಂಬಬೇಕು" ಎಂಬುದಾಗಿ ಅವರು ಹೇಳಿದರು. ನಂತರ ಅವರು "ಸಾರ್ವಜನಿಕ ಸಂಬಂಧಗಳು ಸುಂಗಳ ಪ್ರತಿಭೆ" ಎಂದು ಹೇಳಿದರು.

ಕುಮಿಂಟಾಂಗ್ ಪಕ್ಷವು ಜಪಾನಿನ ಸಾಮ್ರಾಜ್ಯಶಾಹಿ ಆಕಾಂಕ್ಷೆಗಳ ವಿರುದ್ಧ ಪ್ರಬಲ ಪ್ರತಿರೋದವಾಗಿದ್ದಿತೆಂಬ ನಂಬಿಕೆಯೇ ಎರಡನೇ ಮಹಾಯುದ್ಧದ ಕಾಲದಲ್ಲೇ ಚಿಯಾಂಗನಿಗೆ ನಾಲ್ಕು ಪ್ರಬಲ ರಾಷ್ಟ್ರಗಳಲ್ಲಿ ಚಿಯಾಂಗನಿಗೆ ಒಂದು ಸ್ಥಾನವನ್ನು ಖಾತ್ರಿ ಪಡಿಸಿತು. ಆಯಾಸಗೊಂಡಂತೆ ಕಾಣುತ್ತಿದ್ದ ಸಾಧುವಿನಂತಹ ಸೇನಾ ನಾಯಕನು ಜೋಸೆಫ್ ಸ್ಟಾಲಿನ್, ಫ್ರಾಂಕ್ಲಿನ್ ರೂಸ್ವೆಲ್ಟ್ ಮತ್ತು ವಿಲ್ಸನ್ ಚರ್ಚಿಲರೊಂದಿಗೆ ಮಿಂಚಿದನು.

ಈ ನಡುವೆ ಪಾಶ್ಚಿಮಾತ್ಯ ಹಣ ಮತ್ತು ಸೇನಾ ನೆರವಿನಿಂದ ಕುಮಿಂಟಾಂಗ್ ಪಕ್ಷದ ಉನ್ನತ ಅಧಿಕಾರಿಗಳಲ್ಲಿ ಸ್ವಾರ್ಥ ಮತ್ತು ಭ್ರಷ್ಟಾಚಾರಗಳು ಮಿತಿಮೀರಿ ಬೆಳೆದುದರಿಂದ, ಚಿಯಾಂಗನು ಚೀನಾದ ಶ್ರೀಮಂತ ಭೂಮಾಲೀಕರೊಂದಿಗೆ ಸಂಬಂಧದ ಮೂಲಕ ಪಕ್ಷದ ಬಲ ಸಾಮರ್ಥ್ಯವನ್ನು ಹೆಚ್ಚಿಸಲು ಜನಸಂಖ್ಯೆಯ ಶೇಕಡ 90 ರಷ್ಟನ್ನು ಪ್ರತಿನಿಧಿಸುತ್ತಿದ್ದ ರೈತರನ್ನು ದೂರ ಮಾಡಿದನು. ಎರಡನೇ ಮಹಾಯುದ್ಧದ ಮುಕ್ತಾಯದೊಂದಿಗೆ ಕಮ್ಯುನಿಸ್ಟರು ತಮ್ಮ ಅಪಾರ ಸಂಖ್ಯೆ ಮತ್ತು ಸುಲಭವಾಗಿ ಅನುಸರಿಸಿ ಸಿದ್ಧಾಂತದ ಮೂಲಕ ಪ್ರಬಲ ಅಜೇಯ ಪ್ರತಿಸ್ಪರ್ಧಿಗಳಾದರು. ನಾಲ್ಕು ವರ್ಷಗಳ ಅಂತರ್ಯುದ್ಧದ ನಂತರ ಚಿಯಾಂಗ್ ಮತ್ತು ರಾಷ್ಟ್ರೀಯವಾದಿಗಳು ಬಲವಂತವಾಗಿ ತೈವಾನ್ ದ್ವೀಪಕ್ಕೆ ಓಡಿಹೋದರು. ಅಲ್ಲಿ ಅವರು ದೇಶಭ್ರಷ್ಟ ಸರ್ಕಾರವನ್ನು ಸ್ಥಾಪಿಸಿ ಮುಖ್ಯಭೂಮಿಯನ್ನು ಪುನಃ ಸ್ವಾಧೀನಪಡಿಸಿಕೊಳ್ಳುವ ಕನಸನ್ನು ಉಳಿಸಿಕೊಂಡರು.

ಸನ್‌ಯಾತ್‌ಸೆನರಂತೆ ಚಿಯಾಂಗರು ಅಪರಿಪೂರ್ಣ ಕೊಡುಗೆಯನ್ನು ಬಿಟ್ಟು ಹೋದರು. ಪಾಶ್ಚಿಮಾತ್ಯ ಪ್ರಜಾಪ್ರಭುತ್ವವಾದಿಗಳ ಪ್ರಿಯಕರನಾಗಿದ್ದು, ಅವನು ತೈವಾನಿನ ಮೇಲೆ ಸೈನಿಕ ಕಾನೂನನ್ನು ಹೇರಿದನು. 1975 ರಲ್ಲಿ ಅವನ ಮರಣದ ನಂತರ ಅವನ ಮಗ ಮತ್ತು ಉತ್ತರಾಧಿಕಾರಿ ಚಿಯಾಂಗ್ ಚಿಂಗ್-ಕುವೊ ಅಂತಿಮವಾಗಿ ಅದನ್ನು ತೆಗೆದುಹಾಕಿದನು. ಸನ್‌ಯಾತ್‌ಸೆನ್‌ರಂತೆಯೇ ಅವನು ಒಡೆದುಹೋಗಿದ್ದ ದೇಶವನ್ನು ಒಂದುಗೂಡಿಸಲು ಪ್ರಯತ್ನಿಸಿ ವಿಫಲನಾದನು. ಆದರೆ ತನ್ನ ಪೂರ್ವಿಕರಂತಲ್ಲದೆ ಅವನು ಅಪ್ಪಟ ಪ್ರಜಾಪ್ರಭುತ್ವವಾಗಿ ಬೆಳೆದು ಒಂದು ಸಮೃದ್ಧ ಆರ್ಥಿಕ ವ್ಯವಸ್ಥೆಯನ್ನು ಬಿಟ್ಟುಹೋದನು.

## 140.5 ಉತ್ತರದ ದಂಡಯಾತ್ರೆ

1926 ರ ಬೇಸಿಗೆಯಲ್ಲಿ ಕ್ರಾಂತಿಕಾರಿ ಸರ್ಕಾರವು ಚಿಯಾಂಗ್ ಕೈ ಷೆಕ್‌ನನ್ನು ಕ್ಯಾಂಟನ್‌ನಲ್ಲಿ ಎಲ್ಲಾ ಸಶಸ್ತ್ರ ಪಡೆಗಳ ಮುಖ್ಯ ದಂಡನಾಯಕನನ್ನಾಗಿ ನೇಮಿಸಿ ಯುದ್ಧ ನಾಯಕರನ್ನು (ಉತ್ತರದ ಸೈನಿಕ ದಂಡನಾಯಕರು) ಸಂಹರಿಸಿ ಚೀನಾವನ್ನು ಏಕೀಕರಣಗೊಳಿಸುವ ವಿಶೇಷ ಸೂಚನೆಯನ್ನು ನೀಡಿತು. ಉತ್ತರದ ದಂಡಯಾತ್ರೆಯೆಂದು ಕರೆಯಲಾಗುವ ಸೇನಾ ಕಾರ್ಯಾಚರಣೆಯು ಅತ್ಯಂತ ತ್ವರಿತವಾದ ಮತ್ತು ಭಾರೀ ಯಶಸ್ವಿಯಾಗಿತ್ತು. ಅಕ್ಟೋಬರ್ 1926 ರಲ್ಲು ವು-ಹಾನ್ ನಗರವನ್ನು ವಶಪಡಿಸಿಕೊಳ್ಳಲಾಯಿತು ಮತ್ತು ಮಾರ್ಚ್ 1927 ರಲ್ಲಿ ನಾನ್‌ಕಿಂಗ್ ರಾಷ್ಟ್ರೀಯ ಸೇನೆಯ ವಶವಾಯಿತು. ಸನ್‌ಯಾತ್‌ಸೆನರ ಜನಸಾಮಾನ್ಯರ ಮೂರು ತತ್ವಗಳಲ್ಲಿ ಪ್ರಮುಖವಾಗಿದ್ದ ಏಕೀಕೃತ ಹಾಗೂ ಬಲಿಷ್ಠ ಚೀನಾದ ಉದ್ದೇಶಕ್ಕೆ ಹೋರಾಡುವ ಪ್ರತಿಜ್ಞೆ ಮಾಡಿದ್ದ ಕ್ರಾಂತಿಕಾರಿಗಳು ಪಡೆದಿದ್ದ ತರಬೇತಿಯನ್ನಾಗಲಿ ಅಥವಾ ಹೋರಾಟದ ಉತ್ಸಾಹವನ್ನಾಗಲಿ ಹೊಂದಿರದ ಸೇನಾ ಮುಖಂಡರ ಸೈನಿಕರು ಶೀಘ್ರವಾಗಿ ಸೋತು ಹೋದರು. ಮಿಗಿಲಾಗಿ ಉತ್ತರದ ದಂಡಯಾತ್ರೆಯು ವಿದೇಶಿ ವಿರೋಧಿಯಾಗಿದ್ದಷ್ಟೇ ಯುದ್ಧ ನಾಯಕರ ವಿರೋಧಿಯೂ ಆಗಿದ್ದುದರಿಂದ, ಯುದ್ಧ ನಾಯಕರಿಗೆ ವಿದೇಶೀ ಹಿತಾಸಕ್ತಿಗಳು ನೆರವು ನೀಡುತ್ತಿವೆಯೆಂಬ ನಂಬಿಕೆಯು ಚೀನಿಯರ ದೃಷ್ಟಿಯಲ್ಲಿ ಅವರ ಸ್ಥಾನವನ್ನು ಹಾಳು ಮಾಡಿತು. ಉದಾಹರಣೆಗೆ ಚಿಯಾಂಗ್ ತ್ಸೋ-ಲಿನ್ ಮತ್ತು ವು ಪೀಪುವನ್ನು ಜಪಾನಿಯರು ಮತ್ತು ಬ್ರಿಟಿಷರ ಕೈಗೊಂಬೆಗಳೆಂದು ಪರಿಗಣಿಸಲಾಗಿತ್ತು.

ಮುಖ್ಯವಾಗಿ ಯುದ್ಧ ನಾಯಕರನ್ನು (ಸೇನಾ ನಾಯಕರು) ಸೋಲಿಸಲು ಚಿಯಾಂಗ್ ಕೈ ಷೆಕರು ಆರಂಭಿಸಿದ ಉತ್ತರದ ದಂಡಯಾತ್ರೆಯು ತ್ವರಿತವಾದ ರಾಷ್ಟ್ರೀಯತೆಯ ಸ್ವರೂಪವನ್ನು ಪಡೆಯಿತು. ಮಿಲಿಯಗಟ್ಟಲೆ ಚೀನಿಯರಿಗೆ ಉತ್ತರದ ದಂಡಯಾತ್ರೆಯು ಯಶಸ್ಸು ಚೀನಾದ ಏಕೀಕರಣ ಮಾತ್ರವಾಗಿರದೆ ಅಪಮಾನ ಒಪ್ಪಂದಗಳನ್ನು ರದ್ದುಪಡಿಸುವುದೂ ಆಗಿದ್ದಿತು.

ಕ್ರಾಂತಿಕಾರಿಗಳು ಯಾಂಗ್ಸಿ ನದಿ ಕಣಿವೆಯನ್ನು ತಲುಪಿದ ನಂತರ ಕುಮಿಂಟಾಂಗ್ ಸೇನೆಯು ಎರಡು ವಿರೋಧಿ ಗುಂಪುಗಳಾಗಿ ಒಡೆಯಿತು. ಆ ವೇಳೆಗೆ ಕುಮಿಂಟಾಂಗ್ ಪಕ್ಷದ ಎಡಪಂಥೀಯರು ಮತ್ತು ಅವರ ಕಮ್ಯುನಿಸ್ಟ್ ಮಿತ್ರರ ಹತೋಟಿಯಲ್ಲಿದ್ದ ವು-ಹನ್ ನಗರವನ್ನು ವಶಪಡಿಸಿಕೊಂಡ ನಂತರ ಕುಮಿಂಟಾಂಗ್ ಸರ್ಕಾರ ಅಲ್ಲಿಗೆ ತನ್ನ ಸ್ಥಾನವನ್ನು ಬದಲಾಯಿಸಿತು. ಅದು ಹ್ಯಾಂಕೋದಲ್ಲಿದ್ದ ಬ್ರಿಟಿಷ್ ರಿಯಾಯಿತಿಗಳನ್ನು ಬಲವಂತವಾಗಿ ವಶಪಡಿಸಿಕೊಂಡಿತಲ್ಲದೆ ವಿದೇಶೀ-ವಿರೋಧಿ ಉಗ್ರರೂಪವನ್ನು ತಾಳಿತು. ಈ ವೇಳೆಗೆ ಯಾಂಗ್ಸಿ ಕಣಿವೆಯ ಕೆಳಭಾಗದಲ್ಲಿ ಹೋರಾಟದಲ್ಲಿ ತೊಡಗಿದ್ದ ಚಿಯಾಂಗ್ ಕೈ ಷೆಕ್‌ನು ಅನಗತ್ಯವಾಗಿ ಅನೇಕ ವಿದೇಶಿ ಶತ್ರುಗಳನ್ನು ಆಹ್ವಾನಿಸಿದ ಆಧಿಕಾರಿಗಳ ನೀತಿಯ ಸಂಭವನೀಯ ಪರಿಣಾಮದ ಬಗ್ಗೆ ಅಪಾರವಾಗಿ ಚಿಂತಿಸತೊಡಗಿದನು. ಮಿಗಿಲಾಗಿ ಕಮ್ಯುನಿಸ್ಟರು ಮತ್ತು ಕುಮಿಂಟಾಂಗ್ ಎಡಪಂಥೀಯರು ಉತ್ತರದ ದಂಡಯಾತ್ರೆಯನ್ನು ಸೇನಾ-ನಾಯಕರ ವಿರೋಧಿ ಆಂದೋಲನದಿಂದ ಒಂದು

ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯಾಗಿ ಪರಿವರ್ತಿಸತೊಡಗಿದ್ದರು. ಭೂಮಾಲೀಕರನ್ನು ಉಚ್ಚಾಟಿಸುವ ಮೂಲಕ ಮತ್ತು ರಾಜಕೀಯ ಉದ್ದೇಶಗಳಿಗೆ ಮುಷ್ಕರಗಳಿಗೆ ಕರೆ ನೀಡುವ ಮೂಲಕ ಅವರು ರೈತರು ಮತ್ತು ಕಾರ್ಮಿಕರನ್ನು ಯಶಸ್ವಿಯಾಗಿ ಸಂಘಟಿಸಿದರು. ಕುಮಿಂಟಾಂಗ್ ಪಕ್ಷದ ಹತೋಟಿಯಲ್ಲಿದ್ದ ಪ್ರದೇಶಗಳಲ್ಲಿ ಉತ್ಪಾದನೆ ಸ್ಥಗಿತಗೊಂಡಿತು ಮತ್ತು ಗುಂಪು ಹಿಂಸಾಚಾರದ ವಿರುದ್ಧ ಯಾವ ಆಸ್ತಿಗಳ ಮಾಲೀಕರೂ ಸುರಕ್ಷಿತವಾಗಿರಲಿಲ್ಲ. ನಂತರವೇ ಚಿಯಾಂಗ್ ಕೈ ಷೆಕ್ ಕ್ರಾಂತಿಯ ಹಾದಿಯನ್ನು ಬದಲಿಸಲು ನಿರ್ಧರಿಸಿದನು ಮತ್ತು ನಂತರದ ಚೀನಾದ ಇತಿಹಾಸದ ಮೇಲೆ ಬಹುಕಾಲದವರೆಗೆ ಪರಿಣಾಮ ಬೀರಿದ ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡನು.

ಮಾರ್ಚ್ 1927 ರಲ್ಲಿ ಚಿಯಾಂಗನು ಷಾಂಗೈಯನ್ನು ವಶಪಡಿಸಿಕೊಳ್ಳಲು ತನ್ನ ಪಡೆಗಳನ್ನು ಕಳುಹಿಸಿದನು ಮತ್ತು ಕ್ರಾಂತಿಕಾರಿಗಳು ಆ ನಗರವನ್ನು ವಶಪಡಿಸಿಕೊಳ್ಳುವ ಮೊದಲು ಚಳುವಳಿಗಳನ್ನು ಮತ್ತು ಪ್ರದರ್ಶನಗಳನ್ನು ಸಂಘಟಿಸುವಲ್ಲಿ ನಿರತರಾಗಿದ್ದ ಎಲ್ಲಾ ಕಮ್ಯುನಿಸ್ಟರನ್ನು ನಾಶಪಡಿಸಲು ಆದೇಶ ನೀಡಿದನು. ಷಾಂಗೈಯ ಸಂಕುಚಿತವಾದಿ ವ್ಯಾಪರಸ್ಥರು ಮತ್ತು ರಹಸ್ಯ ಸಂಘಗಳ ಸಹಾಯಿಯದಿಂದ ಅವನು ತಕ್ಷಣದ ವಿಜಯವನ್ನು ಸಾಧಿಸಿದನು. ಷಾಂಗೈ ನಗರವನ್ನು ವಶಪಡಿಸಿಕೊಂಡುದು ಮಾತ್ರವಲ್ಲದೆ ಅಸಂಖ್ಯ ಕಮ್ಯುನಿಸ್ಟರು ಮತ್ತು ಎಡಪಂಥೀಯರನ್ನು ಸೆರೆಹಿಡಿದು ಕೊಲ್ಲಲಾಯಿತು. ಆ ವೇಳೆಗೆ ಷಾಂಗೈನಲ್ಲಿ ಕಮ್ಯುನಿಸ್ಟ್ ಚಟುವಟಿಕೆಗಳಿಗೆ ಮುಖ್ಯ ಸಂಘಟಿಸಕನಾಗಿದ್ದ ಚೌ ಎನ್ ಲಾಯ್ ಸ್ವಲ್ಪದರಲ್ಲೇ ಪಾರಾದನು. ಇದರೊಂದಿಗೆ ಆರಂಭವಾದ ಚಿಯಾಂಗ್ ಮತ್ತು ಕಮ್ಯುನಿಸ್ಟರ ನಡುವಿನ ತೀವ್ರವಾದ ಹಗೆತನವು ಕಾಲ ಕಳೆದಂತೆ ಮತ್ತಷ್ಟು ಹೆಚ್ಚಿತು. ಚಿಯಾಂಗನ ದಂಗೆಗೆ ಕುಮಿಂಟಾಂಗ್ ಪಕ್ಷದ ಕೇಂದ್ರ ಸಮಿತಿಯ ಒಪ್ಪಿಗೆ ನೀಡದಿದ್ದುದರಿಂದ, ವು-ಹನ್ ಸರ್ಕಾರ ಅವನನ್ನು ಮುಖ್ಯ ದಂಡನಾಯಕನ ಹುದ್ದೆಯಿಂದ ವಜಾಗೊಳಿಸಿತು. ಇದಕ್ಕೆ ಪ್ರತಿಕಾರವಾಗಿ ಚಿಯಾಂಗನು ನಾನ್‌ಕಿಂಗ್‌ನಲ್ಲಿ ಪ್ರತ್ಯೇಕ ಸರ್ಕಾರವನ್ನು ಸ್ಥಾಪಿಸಿದನು. ಪಕ್ಷ ಹೋರಾಟ ಮುಂದುವರಿಯುತ್ತಿದ್ದಂತೆ ಯುದ್ಧ ನಾಯಕರ ವಿರುದ್ಧದ ಯುದ್ಧವನ್ನು ನಿಲ್ಲಿಸಲಾಯಿತು. ಪಕ್ಷದ ಪ್ರಬಲ ಒತ್ತಡದಿಂದಾಗಿ ಚಿಯಾಂಗನು ಅಂತಿಮವಾಗಿ ತನ್ನ ಸ್ಥಾನಕ್ಕೆ ರಾಜೀನಾಮೆ ನೀಡಿ ಜಪಾನಿಗೆ ತಲೆತಪ್ಪಿಸಿಕೊಂಡು ಹೋದನು.

ನಂತರ ಕುಮಿಂಟಾಂಗ್ ಪಕ್ಷದ ಎಡಪಂಥೀಯರೂ ಸಹ ಕಮ್ಯುನಿಸ್ಟರ ಗುರಿಗಳ ಬಗ್ಗೆ ಸಂಶಯ ಪಡತೊಡಗಿದರು ಮತ್ತು ಕಮ್ಯುನಿಸ್ಟರು ರಷ್ಯಾದ ಪ್ರತಿನಿಧಿಗಳಾಗಿದ್ದು ಕುಮಿಂಟಾಂಗ್ ಸರ್ಕಾರವನ್ನು ಉರುಳಿಸಿ, ಚೀನಾವನ್ನು ಕಮ್ಯುನಿಸ್ಟರ ಆಳ್ವಿಕೆಗೆ ಒಳಪಡಿಸಬೇಕೆಂಬುದು ಅವರ ಉದ್ದೇಶವೆಂಬ ಚಿಯಾಂಗನ ಅಭಿಪ್ರಾಯಗಳನ್ನು ನಂಬುವಂತಾಯಿತು. ಜೋಸೆಫ್ ಸ್ಟಾಲಿನ್ನನು ಚೀನಾದ ಕಮ್ಯುನಿಸ್ಟರಿಗೆ ಕಳುಹಿಸಿದನೆಂದು ಹೇಳಲಾದ ರಹಸ್ಯ ತಂತೀ ಸಂದೇಶದ ಬಗ್ಗೆ ಕುಮಿಂಟಾಂಗ್ ಮುಖಂಡ ವಾಂಗ್ ಚಿಂಗ್-ವೀ ಗೆ ತಿಳಿಯಿತು. ಅದರಲ್ಲಿ ಸೋವಿಯತ್ ಮುಖಂಡನು ಕುಮಿಂಟಾಂಗ್ ಪಕ್ಷದ ಹತೋಟಿಗೆ ಮತ್ತು ಕಮ್ಯುನಿಸ್ಟರೊಂದಿಗೆ ಸಹಕರಿಸಲು ನಿರಾಕರಿಸಿದ ವಿರೋಧಿ ಶಕ್ತಿಗಳನ್ನು ತೊಡೆದುಹಾಕಲು ಕೈಗೊಳ್ಳಬೇಕಾದ ಕ್ರಮಗಳನ್ನು ಗುರುತಿಸಿದ್ದನು. ವ್ಯಾಂಗ್ ಮತ್ತು ಅವನ ಸಹೋದ್ಯೋಗಿಗಳು ಜಾಗ್ರತರಾಗಿ ಚಿಯಾಂಗನ ಕಮ್ಯುನಿಸ್ಟರಿಗೆ ಏನು ಮಾಡಿದ್ದಕ್ಕೆ ಟೀಕಿಸಿದ್ದರೋ ಕಮ್ಯುನಿಸ್ಟರಿಂದ ಕುಮಿಂಟಾಂಗ್ ಪಕ್ಷದ ಉನ್ನತ ಹುದ್ದೆಗಳನ್ನು ಕಸಿದುಕೊಂಡಿದ್ದರೋ ಅದನ್ನೇ ಮಾಡಲು ಮುಂದಾದರು. ಕಮ್ಯುನಿಸ್ಟರು ಅಲ್ಪಸಂಖ್ಯಾತರಾಗಿದ್ದು ನಿಷ್ಫಲ ವಿರೋಧವನ್ನು ಮಾತ್ರವೇ ನೀಡಿದರು. ಕಮ್ಯುನಿಸ್ಟರ ಉಚ್ಚಾಟನೆಯ ಕ್ರಮವು ಕುಮಿಂಟಾಂಗ್ ಪಕ್ಷದ ಎಡ ಮತ್ತು ಬಲ ಪಂಥಗಳ ನಡುವೆ ಹೊಂದಾಣಿಕೆ ದಾರಿ ಮಾಡಿಕೊಟ್ಟಿತು. ಆಗಸ್ಟ್ 1927 ರಲ್ಲಿ ನಾನ್‌ಕಿಂಗ್‌ನ ಪ್ರತ್ಯೇಕ ಸರ್ಕಾರವನ್ನು ರದ್ದುಪಡಿಸಲಾಯಿತು ಮತ್ತು ವು-ಹಾನ್ ಸರ್ಕಾರವನ್ನು ನಾನ್‌ಕಿಂಗ್‌ಗೆ ವರ್ಗಾಯಿಸಲಾಯಿತು. ಚಿಯಾಂಗನು 1928 ರ ಪ್ರಾರಂಭದಲ್ಲಿ ಚೀನಾಕ್ಕೆ ಹಿಂದಿರುಗಿದನು. ಉತ್ತರದ ದಂಡಯಾತ್ರೆಯನ್ನು ಪುನರಾರಂಭಿಸಲಾಯಿತು ಮತ್ತು ಜಪಾನಿನ ಅಡೆತಡೆಯ ಹೊರತಾಗಿಯೂ ಪೀಕಿಂಗ್‌ನನ್ನು ಅಂತಿಮವಾಗಿ ವಶಪಡಿಸಿಕೊಳ್ಳಲಾಯಿತು. ಪ್ರಬಲ ಸೇನಾ ನಾಯಕರಲ್ಲಿ ಕಡೆಯವನಾದ ಚಾಂಗ್-ತ್ಸೊ-ಲಿನ್‌ನನ್ನು ಮಂಚೂರಿಯಾಕ್ಕೆ ಹಿಮ್ಮೆಟ್ಟುತ್ತಿದ್ದಾಗ ಕೊಲ್ಲಲಾಯಿತು. ಅವನ ಮಗ ಮತ್ತು ಉತ್ತರಾಧಿಕಾರಿಯದ ಚಾಂಗ್ ಸುಚ್-ಲಿಯಾಂಗನು 1928 ರ ಡಿಸೆಂಬರ್‌ನಲ್ಲಿ ಕ್ರಾಂತಿಕಾರಿ ಸರ್ಕಾರಕ್ಕೆ ತನ್ನ ನಿಷ್ಠೆಯನ್ನು ಘೋಷಿಸೊಕಂಡನು. ಚೀನಾ ಹೆಸರಿಗೆ ಒಂದುಗೂಡಿತು.

## 140.6 ರಾಷ್ಟ್ರೀಯವಾದಿಗಳ ಆಳ್ವಿಕೆ

ಉತ್ತರ ಚೀನಾದ ಸೇನಾ ದಿಗ್ವಿಜಯದ ನಂತರ ರಾಷ್ಟ್ರೀಯ ಸರ್ಕಾರವನ್ನು ರಚಿಸಲಾಯಿತು. ಚೀನಾ ಹೆಸರಿಗೆ ಮತ್ತೊಮ್ಮೆ ಒಂದುಗೂಡಿದಾಗ ನಾನ್‌ಕಿಂಗ್‌ನಲ್ಲಿ ರಾಷ್ಟ್ರೀಯ ಸರ್ಕಾರವು ಸೈನ್ಯದ ಕಾಲ ಮುಗಿಯಿತು ಮತ್ತು ಕ್ರಾಂತಿಯ ಎರಡನೆ ಹಂತವಾದ ರಾಜಕೀಯ ಆರಂಭವನ್ನು ಅಧಿಕೃತವಾಗಿ ಘೋಷಿಸಿತು. ಅಕ್ಟೋಬರ್ 1928 ರಲ್ಲಿ ಅಂಗೀಕರಿಸಲಾದ ರಾಷ್ಟ್ರೀಯ ಸರ್ಕಾರದ ಆವಯವ ಕಾಯಿದೆಯು ಸರ್ಕಾರದ ಸಾಂಸ್ಥಿಕ ಚೌಕಟ್ಟನ್ನು ಒದಗಿಸಿತು. ಪಕ್ಷದ ಕೇಂದ್ರೀಯ ಕಾರ್ಯಕಾರಿ ಸಮಿತಿಯ ರಾಜಕೀಯ ಸಮಿತಿಯು "ರಾಷ್ಟ್ರೀಯ ಸರ್ಕಾರದಿಂದ ಪ್ರಮುಖ ರಾಷ್ಟ್ರೀಯ ವ್ಯವಹಾರಗಳಿಗೆ ಮಾರ್ಗದರ್ಶನ ನೀಡಬೇಕಾಗಿತ್ತು ಮತ್ತು ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕಾಗಿತ್ತು. ರಾಜಕೀಯ ಸಮಿತಿಯ ರಾಜಕೀಯ ತೀರ್ಮಾನಗಳನ್ನು (ನಿರ್ಧಾರಗಳು) ಆವಯವ ಕಾನೂನು ಹೆಸರಿಸುವ ಸರ್ಕಾರಿ ಪ್ರತಿನಿಧಿಗಳ ಕ್ರಮದ ಮೂಲಕ ಕಾರ್ಯಗತಗೊಳಿಸಲಾಗುತ್ತಿತ್ತು. ಸರ್ಕಾರದ ಐದು ಶಾಖೆಗಳಿದ್ದವು. ಅವುಗಳೆಂದರೆ ಕಾರ್ಯಾಂಗದ ಶಾಖೆ, ನ್ಯಾಯಾಂಗ ಶೈಖೆ, ಪರೀಕ್ಷಾ ಶಾಖೆ ಮತ್ತು ನಿಯಂತ್ರಣ ಶಾಖೆ. ರಾಜ್ಯ ಸಮಿತಿಯ ಅಧ್ಯಕ್ಷನು ಆಗಿದ್ದ ಅಧ್ಯಕ್ಷನು ಸರ್ಕಾರದ ಮುಖಂಡನಾಗಿದ್ದನು. ಅಧ್ಯಕ್ಷನು ದೇಶದ ಮತ್ತು ಸೈನ್ಯದ ಮುಖ್ಯಸ್ಥನಾಗಿದ್ದನು. ಆದರೆ ಅವನ ನಿಜವಾದ ಅಧಿಕಾರದ ಮಿತಿಯನ್ನು ಸ್ಪಷ್ಟಪಡಿಸಿರಲಿಲ್ಲ. ಎಲ್ಲಾ ಆಡಳಿತಾಧಿಕಾರಿಗಳೂ ಆವಯವ ಕಾಯಿದೆಯು ಕರೆಯುವ "ರಾಷ್ಟ್ರೀಯ ಸರ್ಕಾರದ ಕೈಯಲ್ಲಿದ್ದವು ಮತ್ತು ಈ ರಾಷ್ಟ್ರೀಯ ಸರ್ಕಾರ ಐದು ಶಾಖೆಗಳನ್ನು ಒಳಗೊಂಡಿತ್ತು (ಯುಆನ್). ಈ ಐದು ಯೂಆನ್ (ಶಾಖೆಗಳ) ಅಧ್ಯಕ್ಷರು ಸಹಿ ಮಾಡಬೇಕಾಗಿತ್ತು. ಈ ವ್ಯವಸ್ಥೆಯು ಚಿಯಾಂಗ್ ಕೈ ಷೆಕ್‌ನಿಗೆ ಸರ್ವಾಧಿಕಾರದ ಅಧಿಕಾರಗಳನ್ನು ಚಲಾಯಿಸಲು ಅವಕಾಶವಾಗುವಂತೆ ಮಾಡಿತ್ತು. 1928 ರಿಂದ 1931 ರವರೆಗೆ ರಾಷ್ಟ್ರೀಯ ಸರ್ಕಾರದ ಅಧ್ಯಕ್ಷನಾಗಿ ಅವನು ನಾಗರೀಕ ಸರ್ಕಾರದ ಮೇಲೆ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದ್ದಲ್ಲದೆ, ರಾಷ್ಟ್ರೀಯ ಸೈನ್ಯದ ಮೇಲೂ ಹತೋಟಿಯನ್ನು ಹೊಂದಿದ್ದನು. 1928 ರ ಕಾಯಿದೆಯು ಪ್ರಾಂತೀಯ ಸರ್ಕಾರಗಳ ರಚನೆಯನ್ನು ನಿರ್ಧರಿಸಿತು.

1931 ರ ತಾತ್ಕಾಲಿಕ ಸಂವಿಧಾನವು 1928 ರ ಆವಯವ ಕಾಯಿದೆಯನ್ನು ಬಿಡುಗಡೆ ಮಾಡಿತು. ತಾತ್ಕಾಲಿಕ ಸಂವಿಧಾನವನ್ನು ಕುಮಿಂಟಾಂಗ್ ಪಕ್ಷವು ನೇಮಕ ಮಾಡಿದ ರಾಷ್ಟ್ರೀಯ ಜನತಾ ಸಮ್ಮೇಳನದ ಸದಸ್ಯರು ರಚಿಸಿದ್ದರು. ಈ ಸಂವಿಧಾನದಡಿಯಲ್ಲಿ ಹಳೆಯ ಆವಯವ ಕಾಯಿದೆಯ ರಾಜಕೀಯ ರಚನೆ ಮುಂದುವರಿಯಿತು. ಸೇನೆಯ ಪರಮೋಚ್ಛ ಹತೋಟಿಯನ್ನು ಅಧ್ಯಕ್ಷನಿಂದ ಸಮಗ್ರ ರಾಷ್ಟ್ರೀಯ ಸರ್ಕಾರಕ್ಕೆ ವರ್ಗಾಯಿಸಿದುದು ಈ ಸಂವಿಧಾನದ ಪ್ರಮುಖ ಬದಲಾವಣೆಯಾಗಿತ್ತು. 1931 ರಲ್ಲಿ ಚಿಯಾಂಗ್ ಕೈ ಷೆಕ್‌ನು ಅಧ್ಯಕ್ಷ ಪದವಿಯನ್ನು ತ್ಯಜಿಸಿದನು. ಕುಮಿಂಟಾಂಗ್ ಪಕ್ಷದ ಹಿರಿಯ ಸದಸ್ಯನಾಗಿದ್ದ ಲಿನ್‌ಸೆನ್ 1943 ರವರೆಗೂ ಅಧ್ಯಕ್ಷನಾಗಿದ್ದು, ನಂತರ ಚಿಯಾಂಗ್ ಕೈ ಷೆಕ್‌ನೇ ಪುನಃ ಆ ಹುದ್ದೆಯನ್ನು ವಹಿಸಿಕೊಂಡನು.

ತಾತ್ಕಾಲಿಕ ಸಂವಿಧಾನವು ರಾಷ್ಟ್ರೀಯ ಸರ್ಕಾರಕ್ಕೆ ಗೌರವದ ಕಾನೂನು ತಳಹದಿಯನ್ನು ನೀಡಿತು. ಅದು ಪ್ರದೇಶ, ನಾಗರೀಕ ಹಕ್ಕು, ಧ್ವಜ, ಗಣರಾಜ್ಯದ ರಾಜಧಾನಿಯ ಬಗ್ಗೆ ಸಾಮಾನ್ಯ ತತ್ವಗಳನ್ನು ವಿವರಿಸಿತು; ಜನರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿಸಿತು. ಜನರ ಜೀವನಾವಶ್ಯಕತೆಯನ್ನು ಸ್ಪಷ್ಟಪಡಿಸಿತು. ಎಲ್ಲಾ ಮಕ್ಕಳಿಗೂ ಶಿಕ್ಷಣದ ಭರವಸೆಯನ್ನು ನೀಡಿತು ಮತ್ತು ಕೇಂದ್ರ ಹಾಗೂ ಸ್ಥಳೀಯ ಸರ್ಕಾರಗಳ ಅಧಿಕಾರಗಳನ್ನು ವಿಷದಪಡಿಸಿತು. ಈ ಎಲ್ಲಾ ತತ್ವಗಳು ಕಾಗದದ ಮೇಲೆ ಉಳಿದವು. ಆವಯವ ಕಾಯಿದೆಯ ಸ್ಥಾನವನ್ನು ಆಕ್ರಮಿಸಿದುದು ಈ ಸಂವಿಧಾನದ ಮಹತ್ವವಾಗಿತ್ತು.

## 140.7 ಚಿಯಾಂಗ್ ಕೈ ಷೆಕ್‌ರ ರಾಷ್ಟ್ರೀಯ ಸರ್ಕಾರದ ನಾಯಕತ್ವದಲ್ಲಿ ಕುಮಿಂಟಾಂಗ್ ಪಕ್ಷದ ಸಾಧನೆಗಳು

ರಾಷ್ಟ್ರೀಯತೆಯ ಬೆಳವಣಿಗೆ ಮತ್ತು ಪ್ರಸಾರದಲ್ಲಿ ಚಿಯಾಂಗ್ ಕೈ ಷೆಕ್‌ರ ನಾಯಕತ್ವದಲ್ಲಿ ಕುಮಿಂಟಾಂಗ್ ಪಕ್ಷ ಗಮನಾರ್ಹ ಪಾತ್ರವನ್ನು ನಿರ್ವಹಿಸಿತು. ಚೀನಿಯರಲ್ಲಿ ಐಕ್ಯತೆಯ ಭಾವನೆಯನ್ನು ಸೃಷ್ಟಿಸಿದುದೇ ಈ ಪಕ್ಷವಾಗಿತ್ತು. ಈ ಪಕ್ಷವು ಮೊದಲು ಸನ್‌ಯಾತ್‌ಸೆನರು ಮತ್ತು ನಂತರ ಚಿಯಾಂಗ್ ಕೈ ಷೆಕ್‌ರ ನಾಯಕತ್ವದಲ್ಲಿ ಕಾರ್ಮಿಕರು ಮತ್ತು ಕೂಲಿಕಾರರು ಹಾಗೂ ರೈತರಲ್ಲಿ ತಾವು ಈ ದೇಶದ ನಿಜವಾದ ಶಕ್ತಿಯೆಂಬುದನ್ನು ಅರಿತುಕೊಳ್ಳುವಂತೆ ಮಾಡಿತು. ಅದು ಅವರಲ್ಲಿ ರಾಷ್ಟ್ರೀಯತೆಯ ಭಾವನೆಯು ಬೇರು ಬಿಡುವಂತೆ ಹಾಗೂ ಅದನ್ನು ಅಲುಗಿಸಲಾಗದಷ್ಟು ಆಳವಾಗಿ ಹೋಗುವಂತೆ ಮಾಡಲು ಪ್ರಯತ್ನಿಸಿತು. ಅವರು ದೂರದ ಹಳ್ಳಿಗಳಿಗೂ ರಾಷ್ಟ್ರೀಯತೆಯ ಸಂದೇಶವನ್ನು ಕೊಂಡೊಯ್ದರು. ಹೊಸ ಪಕ್ಷವು ರಾಷ್ಟ್ರೀಯ ಹೆಮ್ಮೆ, ಸ್ವಾವಲಂಬನೆ ಮತ್ತು ಚೀನಾದ

ಪರಮಾಧಿಕಾರವನ್ನು ಎಲ್ಲವುಗಳಿಗಿಂತಲೂ ಮೇಲೆ ಇರಿಸಿದ ಒಂದು ಕಾರ್ಯಕ್ರಮ ಮತ್ತು ನೀತಿಯನ್ನು ಮುಂದಿಟ್ಟರು. ಅದು ತಮ್ಮ ದೇಶ ಮತ್ತು ಪರಮಾಧಿಕಾರಕ್ಕೆ ಸಂಬಂಧಿಸಿದಂತೆ ಸಾಮ್ರಾಜ್ಯಶಾಹಿ ವಿರೋಧಿಯಾಗಿದ್ದ ದೇಶದ ಮೊದಲ ಸಂಘಟಿತ ಪಕ್ಷವಾಗಿತ್ತು.

ರಾಷ್ಟ್ರೀಯ ನಾಯಕರಾದ ಸನ್‌ಯಾತ್‌ಸೆನ್ ಮತ್ತು ಚಿಯಾಂಗ್ ಕೈ ಷೆಕ್ ಮೊದಲಾದವರು ಚೀನೀಯರಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಮೂಡಿಸುವ ಮೂಲಕ ಅಪಾರವಾದುದನ್ನು ಸಾಧಿಸಿದರು. ಅವರು ಧರ್ಮ ಪ್ರಚಾರಕರ ಆಸಕ್ತಿ ಮತ್ತು ಉತ್ಸಾಹಗಳಿಂದ ಕೆಲಸ ಮಾಡಿದರು. ಚೀನಿಯರ ಭಾವನೆಗಳನ್ನು ಪ್ರಚೋದಿಸಲು ಮತ್ತು ಒಂದು ದೇಶದ ಜನರಾಗಿ ಅವರನ್ನು ಒಂದುಗೂಡಿಸಲು ಅವರು ಸಭೆಗಳು ಮತ್ತು ಪ್ರದರ್ಶನಗಳನ್ನು ಏರ್ಪಡಿಸಿದರು. ಅವರು ದೇಶವನ್ನು ಒಡೆದುಹಾಕಿದ್ದ ಮತ್ತು ಏಕತೆಯ ಭಾವನೆಯನ್ನು ಬೆಸೆಯಲು ಪ್ರಬಲ ಅಡ್ಡಿಯಾಗಿದ್ದ ಯುದ್ಧ ನಾಯಕರ ಹೆಚ್ಚುತ್ತಿದ್ದ ಪ್ರಾಬಲ್ಯವನ್ನು ಮುರಿಯಲು ಆಕ್ರಮಣಗಳನ್ನು ಕೈಗೊಂಡರು.

ಈ ನಂತರ ರಾಷ್ಟ್ರೀಯ ಸರ್ಕಾರವು ತನ್ನ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸೈನಿಕ ಸುಧಾರಣೆಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಮುಕ್ತವಾಯಿತು. ಸೈನಿಕ ವ್ಯಕ್ತಿಯಾಗಿ ಚಿಯಾಂಗ್ ಕೈ ಷೆಕ್‌ನು ಆಧುನಿಕ ಸೈನ್ಯವನ್ನು ರಚಿಸುವಲ್ಲಿ ಅಪಾರ ಆಸಕ್ತಿಯನ್ನು ಹೊಂದಿದ್ದನು. ಸೈನ್ಯದ ತರಬೇತಿಗಾಗಿ ಅವನು ಅಪಾರ ಸಂಖ್ಯೆಯಲ್ಲಿ ಜರ್ಮನಿಯ ಸೈನಿಕ ಅಧಿಕಾರಿಗಳನ್ನು ನೇಮಿಸಿಕೊಂಡನು. ಜರ್ಮನಿಯ ಸೇನಾ ನಿಯೋಗವೊಂದನ್ನು ಔಪಚಾರಿಕವಾಗಿ ಸ್ಥಾಪಿಸಲಾಯಿತು. ಯುದ್ಧಾ ನಂತರದ ಆಧುನಿಕ ಜರ್ಮನಿಯ ಸೈನ್ಯವನ್ನು ರೂಪಿಸಿದ ಜನರಲ್ ವೊನ್ ಸೀಟ್ ಅದನ್ನು ವ್ಯವಸ್ಥೆಗೊಳಿಸಿದ್ದನು. ಅವನು ಚೀನಾದ ಸೈನ್ಯವನ್ನು ಜರ್ಮನಿಯ ಉಪಕರಣಗಳಿಂದ ಸಜ್ಜುಗೊಳಿಸಲು ಮತ್ತು ಚೀನಾದ ಶಸ್ತ್ರಾಸ್ತ್ರ ಕೈಗಾರಿಕೆಯನ್ನು ನಿರ್ಮಿಸಲು ಪ್ರೋತ್ಸಾಹ ನೀಡುವ ಕಾರ್ಯದಲ್ಲಿ ತೊಡಗಿದನು. ವೊನ್ ಸೀಟನು ಚೀನಾದ ತ್ವರಿತವಾದ ಕೈಗಾರಿಕೀಕರಣದ ಪ್ರಾಮುಖ್ಯತೆಯನ್ನು ಮನವರಿಕೆ ಮಾಡಿಕೊಟ್ಟನು. ಜರ್ಮನಿಯ ಸಲಹಗಾರರು ಸೈನಿಕ ಸುಧಾರಣೆಗಳಲ್ಲಿ ಬಡ್ತಿಯಲ್ಲಿ ವ್ಯಕ್ತಿಗತ ನಿಷ್ಠೆಗಿಂತಲೂ ಸಾಮರ್ಥ್ಯಕ್ಕೆ ಆದ್ಯತೆ ನೀಡಿದರು. ಆದರೆ ಚಿಯಾಂಗನು ಇತರರಿಗಿಂತಲೂ ಹಳೆಯ ಸಹೋದ್ಯಾಗಿಗಳ ಬಗ್ಗೆ ಒಲವು ತೋರಿದನು ಮತ್ತು ಅವರ ವೈಯುಕ್ತಿಕ ನಿಷ್ಠೆಯನ್ನು ಅವಲಂಭಿಸಿದನು. ತ್ವರಿತವಾದ ಕೈಗಾರಿಕೀಕರಣಕ್ಕಾಗಿ ಒಂದು ರಾಷ್ಟ್ರೀಯ ಸಂಪನ್ಮೂಲಗಳ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. ಹೆದ್ದಾರಿಗಳು, ರೈಲುಮಾರ್ಗಗಳು, ಬಂದರುಗಳು ಮತ್ತು ವಾಯು ನೆಲೆಗಳ ನಿರ್ಮಾಣ ಹಾಗೂ ಎಲ್ಲಾ ಹಣಕಾಸಿನ ಮತ್ತು ಆರ್ಥಿಕ ಯೋಜನೆಯಲ್ಲಿ ಸೈನಿಕ ದೃಷ್ಟಿಗೆ ಪ್ರಾಮುಖ್ಯತೆ ನೀಡಲಾಯಿತು.

ರಾಷ್ಟ್ರೀಯ ಸರ್ಕಾರದ ಶಾಸಕಾಂಗ ಶಾಖೆಯು (ಯುಆನ್) ಸ್ವಿಟ್ಜರ್ಲೆಂಡಿನ ಸಂಹಿತೆಯ ಆಧಾರದ ಮೇಲೆ ನಾಗರೀಕ ಸಂಹಿತೆಯನ್ನು ಸಿದ್ಧಪಡಿಸಿತು. ಚೀನಾದ ನಾಗರೀಕ ಸಂಹಿತೆಯು ತನ್ನ ಐದು ಪುಸ್ತಕಗಳಲ್ಲಿ ಆಧುನಿಕ ವಾಣಿಜ್ಯಕ್ಕೆ ಅಗತ್ಯವಾದ ಕರಾರು ಸಂಬಂಧಗಳು ಮತ್ತು ಆಸ್ತಿ ಹಕ್ಕು ಒಡೆತನ ಮುಂತಾದ ತತ್ವಗಳನ್ನು ಒಳಗೊಂಡಿದ್ದವು. ನಾಲ್ಕು ಮತ್ತು ಐದನೇ ಪುಸ್ತಕಗಳು ಪಾಶ್ಚಿಮಾತ್ಯ ಸಿದ್ಧಾಂತಗಳು ಮತ್ತು ಚೀನಾದ ಸಂಪ್ರದಾಯಗಳ ನಡುವೆ ಹೊಂದಾಣಿಕೆಯ ಏರ್ಪಡಿಸುವ ಉದ್ದೇಶವನ್ನು ಹೊಂದಿದ ಕುಟುಂಬದ ಕಾನೂನು ಮತ್ತು ವಂಶಪಾರಂಪರ್ಯಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಒಳಗೊಂಡಿದ್ದವು. ಈ ಪ್ರಮುಖ ಕಾನೂನು ಗ್ರಂಥದ ಐದು ಪುಸ್ತಕಗಳು ಆಧುನಿಕ ಚೀನಾದ ಕಾನೂನು ವ್ಯವಸ್ಥೆಯ ಆಧಾರವಾದವು. 1929 ಮತ್ತು 1931 ರ ನಡುವಿನ ವರ್ಷಗಳಲ್ಲಿ ಬ್ಯಾಂಕಿಂಗ್ (ಹಣಕಾಸು ಸಂಸ್ಥೆಗಳು) ಷೇರು ವಿನಿಮಯ ಕೇಂದ್ರಗಳು, ವಾಣಿಜ್ಯ ಸಂಘಗಳು, ಮುದ್ರಣ ಹಕ್ಕು, ವಾಣಿಜ್ಯ ಕಂಪನಿಗಳು, ಗಣಿಗಾರಿಕೆ ಕಾನೂನುಗಳು, ಅರಣ್ಯ ಮತ್ತು ಮೀನುಗಾರಿಕೆಗೆ ಸಂಬಂಧಿಸಿದಂತೆ ಅನೇಕ ಕಾನೂನುಗಳು ಜಾರಿಗೆ ಬಂದವು. 1928 ರಲ್ಲಿ ಒಂದು ದಂಡಸಂಹಿತೆಯನ್ನು ಹೊರಡಿಸಲಾಯಿತು ಮತ್ತು ಅಂತಿಮವಾಗಿ 1935 ರಲ್ಲಿ ಅದನ್ನು ಸ್ವೀಕರಿಸಲಾಯಿತು. ವಿಚಾರಣೆಯ ಸಂಹಿತೆಯನ್ನು ರೂಪಿಸಲಾಯಿತು ಮತ್ತು ಜಿಲ್ಲಾ ನ್ಯಾಯಾಲಯಗಳಿಂದ ನಾನ್‌ಕಿಂಗ್‌ನಲ್ಲಿ ಸರ್ವೋಚ್ಛ ನ್ಯಾಯಾಲಯದವರೆಗೆ ಆಧುನಿಕ ನ್ಯಾಯಾಲಯಗಳ ಒಂದು ವ್ಯವಸ್ಥೆಯನ್ನು ಏರ್ಪಡಿಸಲಾಯಿತು.

ಆಧುನಿಕ ವಾಣಿಜ್ಯ ಮತ್ತು ಕೈಗಾರಿಕಾ ಅಭಿವೃದ್ಧಿಗಳಿಗೆ ರಾಷ್ಟ್ರೀಯ ಸರ್ಕಾರವು ಕೈಗೊಂಡ ಹಣಕಾಸಿನ ಕ್ರಮಗಳೂ ಅಷ್ಟೆ ಪ್ರಮುಖವಾಗಿವೆ. ಟಿ.ವಿ. ಸುಂಗ್ ಆಧುನಿಕ ಹಣಕಾಸಿನ ವ್ಯವಸ್ಥೆಯನ್ನು ಏರ್ಪಡಿಸಲು ಕಾರಣನಾದ ವ್ಯಕ್ತಿಯಾಗಿದ್ದನು. ಅವನು ಆಯವ್ಯಯ ಪದ್ಧತಿಯನ್ನು ವ್ಯವಸ್ಥೆಗೊಳಿಸಿದನು. ಅವನು ಕ್ಯಾಂಟನ್‌ನಲ್ಲಿದ್ದ ವಿದೇಶಿ ಕಡಲ ಸುಂಕದ ಆಡಳಿತವನ್ನು ತನ್ನ ಆದಾಯವನ್ನು ರಾಷ್ಟ್ರೀಯ ಸರ್ಕಾರಕ್ಕೆ ಒಪ್ಪಿಸುವಂತೆ ಒತ್ತಾಯಿಸಿದನು. ಸುಂಗನು ನಾನ್‌ಕಿಂಗ್‌ನಲ್ಲಿ ಕಾರ್ಯಾಂಗ ಶಾಖೆಯ (ಯುಆನ್ ವಿಭಾಗದ) ಅಧ್ಯಕ್ಷನಾಗಿದ್ದುದರ ಜೊತೆಗೆ ಹಣಕಾಸಿನ ಸಚಿವನೂ ಆಗಿದ್ದನು. ಅವನು ಸೈನ್ಯದ ವೆಚ್ಚವನ್ನು ಮಿತಿಗೊಳಿಸಲಾಗಲಿಲ್ಲ. ವಿವಿಧ

ಮೂಲಗಳಿಂದ ಆದಾಯ ಹೆಚ್ಚಿತು. 1929 ರಲ್ಲಿ ರಾಷ್ಟ್ರೀಯ ಸರ್ಕಾರ ಸುಂಕದ ಸ್ವಾಯತ್ತತೆಯನ್ನು ಪಿಂತೆಗೆದುಕೊಂಡ ನಂತರ ಅದು ಆ ಮೂಲದಿಂದ ಇನ್ನೂ ಹೆಚ್ಚಿನ ಆಧಾಯವನ್ನು ಗಳಿಸಲು ಸಾಧ್ಯವಾಯಿತು. ಕಡಲ ತೆರಿಗೆಯು ಅತ್ಯಂತ ಹೆಚ್ಚಿನ ಆಧಾಯದ ಮೂಲವಾಗಿತ್ತು. ಉಪ್ಪಿನ ತೆರಿಗೆ ನಂತರದ ಪ್ರಮುಖ ಆಧಾಯ ಮೂಲವಾಗಿದ್ದು, ಒಟ್ಟು ಆಧಾಯದ ಸುಮಾರು 1/3 ಭಾಗದಷ್ಟನ್ನು ಒದಗಿಸುತ್ತಿದ್ದಿತು. ಮಧ್ಯ, ಗಣಿಗಾರಿಕೆ, ಹೊಗೆಸೊಪ್ಪು ಮತ್ತಿತರ ವಸ್ತುಗಳ ಮೇಲಿನ ಕ್ರೋಢೀಕೃತ ತೆರಿಗೆಯು ಉಳಿದ ಆಧಾಯದ ಬಹುಪಾಲನ್ನು ಒದಗಿಸುತ್ತಿದ್ದಿತು. ಚೀನಾ ಬೆಳ್ಳಿಯ ನಾಣ್ಯಗಳನ್ನು ಚಲಾವಣೆಗೆ ತಂದಿತು, ಆದರೆ ಅಮೆರಿಕಾದ ಬೆಳ್ಳಿ ನೀತಿಯು ಚೀನಾದ ನಾಣ್ಯ ಪದ್ಧತಿಯ ಮೇಲೆ ಪರಿಣಾಮ ಬೀರಿತು. ಅದು ಸರ್ಕಾರದ ಬೆಳ್ಳಿಯ ಖರೀದಿಗೆ ಕೃತಕವಾದ ಹೆಚ್ಚಿನ ಬೆಲೆಯನ್ನು ನಿಗಧಿಪಡಿಸಿತು. ಸ್ವಾಭಾವಿಕವಾಗಿಯೇ ಚೀನಾದ ಬೆಳ್ಳಿಯ ನಾಣ್ಯ ಪದ್ಧತಿಯನ್ನು ಅಮೆರಿಕಾದ ಬೆಳ್ಳಿ ಬೆಲೆಯ ನಿಯಂತ್ರಣದ ಮೂಲಕ ಕೃತಕವಾಗಿ ದುಬಾರಿಯಾಗುವಂತೆ ಮಾಡಲಾಗಿತ್ತು. ಆದರೆ ಚೀನಾದ ಬೆಳ್ಳಿಯ ಉತ್ಪಾದನೆ ಕಡಿಮೆಯಿದ್ದುದರಿಂದ, ಬೆಳ್ಳಿಯ ಅತಿ ಹೆಚ್ಚಿನ ಬೆಲೆಯು ತೀವ್ರವಾದ ಆರ್ಥಿಕ ಕುಸಿತಕ್ಕೆ ಕಾರಣವಾಗಿ ತಕ್ಷಣದ ಕ್ರಮಗಳ ಅಗತ್ಯವಿತ್ತು. ಚೀನಾ ಬೆಳ್ಳಿಯಿಂದ ದೂರವಾಯಿತು. ತನ್ನ ಬೆಳ್ಳಿಯ ನಾಣ್ಯಗಳನ್ನು ರದ್ದುಪಡಿಸಿತು ಮತ್ತು ಸರ್ಕಾರದ ನಿಯಂತ್ರಣಕ್ಕೊಳಪಟ್ಟ ಕಾಗದದ ನಾಣ್ಯಗಳನ್ನು ಜಾರಿಗೆ ತಂದಿತು. ಇದು ಕೈಗಾರಿಕೆ ಮತ್ತು ವ್ಯಾಪಾರಗಳ ಅಭಿವೃದ್ಧಿಗೆ ಸಹಾಯಕವಾಯಿತು.

ಸಂಪರ್ಕ ವ್ಯವಸ್ಥೆಯನ್ನು ವಿಸ್ತರಿಸಲಾಯಿತು. ಈಗಾಗಲೇ ಇದ್ದ ರೈಲು ಮಾರ್ಗಗಳ ಆಡಳಿತದ ನಿರ್ವಹಣೆಗೆ ಮತ್ತು ಹೊಸ ಮಾರ್ಗಗಳ ನಿರ್ಮಾಣ ಯೋಜನೆ ಮತ್ತು ಅನುಷ್ಠಾನಕ್ಕೆ 1928 ರಲ್ಲಿ ರೈಲ್ವೆ ಮಂತ್ರಿ ಸ್ಥಾಪಿಸಲಾಯಿತು. 1928 ಕ್ಕೆ ಮೊದಲು ರೈಲು ಮಾರ್ಗದ ಅಭಿವೃದ್ಧಿಯು ಉತ್ತರ ಚೀನ ಮತ್ತು ಮಂಚೂರಿಯಾಗಳಲ್ಲಿ ಕೇಂದ್ರೀಕೃತವಾಗಿತ್ತು. ಈಗ ಮಧ್ಯ ಮತ್ತು ದಕ್ಷಿಣ ಚೀನಾಗಳಿಗೆ ವ್ಯವಸ್ಥೆಯನ್ನು ವಿಸ್ತರಿಸಲು ಹೊಸ ರೈಲು ಮಾರ್ಗಗಳನ್ನು ನಿರ್ಮಿಸಲಾಯಿತು. ರಾಷ್ಟ್ರೀಯ ಸರ್ಕಾರದ ರಸ್ತೆಮಾರ್ಗಗಳ ನಿರ್ಮಾಣದ ಕಾರ್ಯಕ್ರಮವೂ ಅಷ್ಟೇ ಪ್ರಮುಖವಾಗಿತ್ತು. 1929 ರಲ್ಲಿ ರಾಷ್ಟ್ರೀಯ ರಸ್ತೆಗಳ ಯೋಜನಾ ಆಯೋಗವನ್ನು ಸ್ಥಾಪಿಸಲಾಯಿತು. ಇದೇ ಸಮಯದಲ್ಲಿ ಆಂತರಿಕ ಮತ್ತು ವಿದೇಶೀ ಸಂಚಾರಕ್ಕೆ ವಾಯುಮಾರ್ಗ ವ್ಯವಸ್ಥೆಯನ್ನು ಏರ್ಪಡಿಸಲಾಯಿತು. 1929 ರಲ್ಲಿ ಚೀನಾದ ರಾಷ್ಟ್ರೀಯ ವಾಯುಯಾನ ನಿಗಮವನ್ನು ಸ್ಥಾಪಿಸಲಾಯಿತು. ಅಲ್ಲದೆ ರಾಷ್ಟ್ರೀಯ ಸರ್ಕಾರವು ಆಧುನಿಕ ಅಂಚೆ ವ್ಯವಸ್ಥೆಯನ್ನು ಉತ್ತಮಪಡಿಸಿತು ಮತ್ತು ದೂರವಾಣಿ ಹಾಗೂ ದೂರಸಂಪರ್ಕ ವ್ಯವಸ್ಥೆಗಳನ್ನು ವಿಸ್ತರಿಸಿತು. ಚೀನಾದ ನೌಕಾಯಾನವೂ ತ್ವರಿತವಾಗಿ ಬೆಳೆಯಿತು.

ಆಧುನಿಕ ಶಿಕ್ಷಣವೂ ತ್ವರಿತವಾಗಿ ಹರಡಿತು. ಅನೇಕ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳಿದ್ದವು. ರಾಷ್ಟ್ರೀಯ ಸರ್ಕಾರವು ಉನ್ನತ ಶಿಕ್ಷಣ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯಗಳು, ಸ್ವತಂತ್ರ ಮಹಾವಿದ್ಯಾಲಯಗಳು (ಕಾಲೇಜು) ಮತ್ತು ತಾಂತ್ರಿಕ ಮಹಾವಿದ್ಯಾಲಯಗಳನ್ನಾಗಿ ವಿಂಗಡಿಸಿ ಅವುಗಳನ್ನು ಪುನರ್ ವ್ಯವಸ್ಥೆಗೊಳಿಸಿತು. ಒಂದು ಸಂಸ್ಥೆಯನ್ನು ವಿಶ್ವವಿದ್ಯಾನಿಲಯವೆಂದು ಪರಿಗಣಿಸಲು ಅದು ಕನಿಷ್ಠ ಮೂರು ಮಹಾವಿದ್ಯಾಲಯಗಳನ್ನು ಒಳಗೊಂಡಿರಬೇಕಾಗಿದ್ದಿತು. 1938 ರಲ್ಲಿ ಸ್ಥಾಪಿಸಲಾದ 'ಅಕಾಡೆಮಿಯ ಸಿನಿಕಾ' ಎಲ್ಲಾ ಕ್ಷೇತ್ರಗಳಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ವಿದ್ವಾಂಸರ ಒಂದು ಸಂಘವಾಗಿತ್ತು. ಶಾಲೆಗಳಲ್ಲಿ ಸನ್‌ಯಾತ್‌ಸೆನರ ಮೂರು ತತ್ವಗಳನ್ನು ಬೋಧಿಸಲಾಯಿತು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುವುದು ಅವನ ಕಡೆಯ ಇಚ್ಛೆಯಾಗಿತ್ತು. ಚಿಯಾಂಗನು ಕನ್‌ಫ್ಯೂಷಿಯಸ್ಸನ ತತ್ವಜ್ಞಾನವನ್ನು ಆಧರಿಸಿದ "ನವ ಜೀವನ ಚಳುವಳಿ " (ನ್ಯೂಲೈಫ್ ಮೂವ್‌ಮೆಂಟ್) ಎಂಬ ಸೈದ್ಧಾಂತಿಕ ಚಳುವಳಿಯನ್ನು ಆರಂಭಿಸಿದನು. ಸಾಹಿತ್ಯ ಅಭಿವೃದ್ಧಿಗೊಂಡಿತು. ವಾಸ್ತವವಾಗಿ ಸಾಹಿತ್ಯ ಪುನರುಜ್ಜೀವನವಾಯಿತು. ಅಲ್ಲದೆ ರಾಷ್ಟ್ರೀಯ ಸರ್ಕಾರವು ಕೃಷಿಯನ್ನು ಪ್ರೋತ್ಸಾಹಿಸಿತು. ಆದರೆ ಗೇಣಿ ಸಮಸ್ಯೆಗಳಿಗೆ ಅತ್ಯಂತ ಕಡಿಮೆ ಗಮನವನ್ನು ನೀಡಿತು.

ವಿದೇಶಿ ಸಂಬಂಧಗಳ ರಂಗದಲ್ಲಿ ರಾಷ್ಟ್ರೀಯ ಸರ್ಕಾರವು ಅಸಮಾನ ಒಪ್ಪಂದಗಳನ್ನು ರದ್ದುಪಡಿಸುವ ಕಡೆಗೆ ಗಮನ ಹರಿಸಿತು. ಮೊದಲನೆ ಮಹಾಯುದ್ಧದಲ್ಲಿ ಜರ್ಮನಿ, ಆಸ್ಟ್ರಿಯಾ ಮತ್ತು ಹಂಗೇರಿಗಳು ಚೀನಾದಲ್ಲಿ ಹೊಂದಿದ್ದ ಹಕ್ಕು ಬಾಧ್ಯತೆಗಳನ್ನು ವಿಸರ್ಜಿಸಲಾಯಿತು ಮತ್ತು ಬಾಲ್ಶೆವಿಕ್ ಕ್ರಾಂತಿಯ ನಂತರ ರಷ್ಯ ತನ್ನ ವಿಶೇಷ ಸವಲತ್ತುಗಳನ್ನು ತ್ಯಜಿಸಿತು. ಈ ನಂತರ ರಾಷ್ಟ್ರೀಯ ಸರ್ಕಾರದ ಅಧೀನದಲ್ಲಿದ್ದ ಚೀನ ಇತರ ಐರೋಪ್ಯ ರಾಷ್ಟ್ರಗಳು ಮತ್ತು ಜಪಾನಿನಿಂದ ಅಂತಹುದೇ ಕ್ರಮವನ್ನು ಬಯಸಿತು. ಎರಡು ವರ್ಷಗಳ ಅವಧಿಯಲ್ಲಿ (1928-1929) ಈ ದೇಶಗಳೊಂದಿಗೆ ಅನೇಕ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಈ ಒಪ್ಪಂದಗಳು ಚೀನಾದ ತೆರಿಗೆಗಳ ಸ್ವಾಯತ್ತತೆಯ ತತ್ವವನ್ನು ಮಾನ್ಯ ಮಾಡಿದವು. ಹೀಗೆ 87 ವರ್ಷಗಳು ನಂತರ ನಿಯಮತಿ ತೆರಿಗೆ ವ್ಯವಸ್ಥೆ ಕೊನೆಗೊಂಡಿತು. ಆದಾಗ್ಯೂ ಸವಲತ್ತುಗಳನ್ನು ಹಿಂದಕ್ಕೆ ಪಡೆಯುವಲ್ಲಿ ಸರ್ಕಾರ ಭಾಗಶಃ ಯಶಸ್ವಿಯಾಯಿತು. ಕೆಲವನ್ನು ವಾಪಸ್

ಪಡೆಯಲಾಯಿತು ಮತ್ತು ಷಾಂಘೈನಲ್ಲಿ ನಡೆದ ಅಂತರರಾಷ್ಟ್ರೀಯ ಇತ್ಯರ್ಥವೂ ಸೇರಿದಂತೆ ಇತರ ಅನೇಕ ರಿಯಾಯಿತಿಗಳು ವಿದೇಶೀಯರ ಹಿಡಿತದಲ್ಲಿಯೇ ಉಳಿದವು. ಮುಕ್ತ ಪ್ರಾದೇಶಿಕ ಎಲ್ಲೆಯ ವಿಷಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಮತ್ತು ಜಪಾನ್ ಅವಕಾಶ ನೀಡಲು ನಿರಾಕರಿಸಿದವು. ಚೀನಾದ ನ್ಯಾಯಾಂಗ ವ್ಯವಸ್ಥೆಯನ್ನು ಟೀಕಿಸಿದ ಅವುಗಳು ಚೀನಾ ತನ್ನ ಕಾನೂನು ಸಂಹಿತೆಗಳನ್ನು ಪರಿಷ್ಕರಿಸಿದ ನಂತರ, ಬಂಧಿಖಾನೆಗಳನ್ನು ಆಧುನೀಕರಿಸಿದ ನಂತರ ಮತ್ತು ಇತರ ವಿವಿಧ ಸುಧಾರಣೆಗಳನ್ನು ಜಾರಿಗೆ ತಂದ ನಂತರವೇ ಪ್ರಾದೇಶಿಕ ಎಲ್ಲೆಯ ವ್ಯವಸ್ಥೆಯನ್ನು ಹಂತಹಂತವಾಗಿ ರದ್ದುಪಡಿಸಲು ಒಪ್ಪಿದವು. ಒಡಂಬಡಿಕೆಗಳು ತಡವಾದುದರಿಂದ ರಾಷ್ಟ್ರೀಯ ಸರ್ಕಾರವು ಜನವರಿ 1932 ರಲ್ಲಿ ಪ್ರಾದೇಶಿಕ ಎಲ್ಲೆ ಕೊನೆಗೊಂಡಿತೆಂದು ಪ್ರಕಟಿಸಿತು. ಬಲಿಷ್ಠ ರಾಷ್ಟ್ರಗಳು ಇದಕ್ಕೆ ಬಗ್ಗಲು ನಿರಾಕರಿಸಿದಾಗ ಚೀನಾದ ಸರ್ಕಾರ ಡಿಸೆಂಬರ್ 1931 ರಲ್ಲಿ ಎರಡನೇ ಮಹಾಯುದ್ಧದ ಪ್ರಾರಂಭದ ವೇಳೆಗೆ ಚೀನಾ ವಿದೇಶೀಯರು ಇನ್ನೂ ಪ್ರಾದೇಶಿಕ ಮಿತಿಯ ಹಕ್ಕನ್ನು ಅನುಭವಿಸುತ್ತಿದ್ದ ಕೆಲವೇ ಸಾರ್ವಭೌಮ ರಾಷ್ಟ್ರಗಳಲ್ಲಿ ಒಂದಾಗಿತ್ತು. ಒಟ್ಟಿನಲ್ಲಿ ಚಿಯಾಂಗ್ ಕೈ ಷೇಕ್ ಚೀನಾದ ರಾಷ್ಟ್ರೀಯ ನಾಯಕರಲ್ಲಿ ಒಬ್ಬನು. ಅವನು ದೇಶಕ್ಕೆ ಏಕತೆಯನ್ನು ನೀಡಿದನು ಮತ್ತು 1949 ರಲ್ಲಿ ಚೀನಾದಲ್ಲಿ ಕಮ್ಯುನಿಸ್ಟರ ಆಳ್ವಿಕೆಯ ಆರಂಭದವರೆಗೂ ದೇಶ ಅವನ ಹಿಂದೆ ಭದ್ರವಾಗಿ ನಿಂತಿದ್ದಿತು ಮತ್ತು ಅವನಿಗೆ ಕ್ರಿಯಾತ್ಮಕ ಬೆಂಬಲ ನೀಡಿತು.

## 140.8 ಮುಕ್ತಾಯ

ಈ ಘಟಕದಲ್ಲಿ ನಾವು ಕುಮಿಂಟಾಂಗ್ ಪಕ್ಷದ ಏಳಿಗೆಯು ಚೀನಾದ ಇತಿಹಾಸದ ಅತ್ಯಂತ ಪ್ರಮುಖ ಘಟಕಗಳಲ್ಲೊಂದು ಎಂಬುದನ್ನು ಅಧ್ಯಯನ ಮಾಡಿದೆವು. ಈ ಘಟಕದ ಸ್ಥಾಪನೆಯೊಂದಿಗೆ ಏಕೀಕೃತ ಚೀನಾ ಉದಯಿಸಲು ಪ್ರಾರಂಭಿಸಿತು. ನಿರೀಕ್ಷಿಸಿದ್ದಂತೆ ಅಗತ್ಯವಾಗಿದ್ದ ದೇಶದ ರಾಜಕೀಯ ಐಕ್ಯತೆಯ ಕಾರ್ಯದಲ್ಲಿ ಪ್ರಾರಂಭದ ತೊಂದರೆಗಳಿದ್ದಿತು.

ನೀವು ಚೀನಾದಲ್ಲಿ ಅಧಿಕಾರವನ್ನು ಪಡೆಯಲು ಯಶಸ್ವಿಯಾದ ಜನರಲ್ ಚಿಯಾಂಗ್ ಕೈ ಷೇಕ್‌ನ ಬಗ್ಗೆಯೂ ತಿಳಿದುಕೊಂಡಿರಿ. ಅವನು ಸನ್‌ಯಾತ್‌ಸೆನರ ಮೂರು ತತ್ವಗಳನ್ನು ಅನುಷ್ಠಾನಗೊಳಿಸಲು ಬದ್ಧನಾಗಿದ್ದನು. ಅವನ ನಾಯಕತ್ವದಲ್ಲಿ ಚೀನಾ ರಾಜಕೀಯ ಐಕ್ಯತೆಯನ್ನು ಪಡೆಯಿತು. ನಂತರ ಅವನು ಕುಮಿಂಟಾಂಗ್ ಪಕ್ಷದ ಸ್ಥಾಯೀ ಸಮಿತಿಯ ಅಧ್ಯಕ್ಷನಾಗಿ ಆಯ್ಕೆಯಾದನು. ಡಾ. ಸನ್‌ಯಾತ್‌ಸೆನರ ಮರಣದ ನಂತರ ಅವನು ಚೀನಾದ ರಾಷ್ಟ್ರೀಯ ಸೇನೆಯ ಮುಖ್ಯ ದಂಡನಾಯಕನಾದನು. 1928 ರ ವೇಳೆಗೆ ಅವನು ಷಾಂಘೈ ನಾನ್‌ಕಿಂಗ್ ಮತ್ತು ಪೀಕಿಂಗ್‌ಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ಚೀನಾದ ಐಕ್ಯತೆಯನ್ನು ಸಾಧಿಸಿದನು. 1949 ರಲ್ಲಿ ಚೀನಾದಲ್ಲಿ ಕಮ್ಯುನಿಸ್ಟ್ ಸರ್ಕಾರದ ಏಳಿಗೆಯವರೆಗೂ ಅವನು ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿದ್ದನು.

## 140.9 ನಿಮ್ಮ ಪ್ರಗತಿಯನ್ನು ಪರೀಕ್ಷಿಸಿ - ಉತ್ತರಗಳು

***I*** ***ಕೆಳಗಿನವುಗಳಿಗೆ ಪ್ರತಿಯೊಂದಕ್ಕೂ ಐದು ವಾಕ್ಯಗಳಲ್ಲಿ ಉತ್ತರಿಸಿ***

1. ಸುಂಗ್ ಮೀ-ಲಿಂಗ್
2. ಚುಂಗ್ ಹುಚ್-ಲಿಯಾಂಗ್
3. 1928 ರ ಆವಯವ ಕಾಯಿದೆ

***II*** ***ಕೆಳಗಿನವುಗಳಿಗೆ ಪ್ರತಿಯೊಂದಕ್ಕೂ 15 ವಾಕ್ಯಗಳ ಉತ್ತರ ಬರೆಯಿರಿ***

1. ಕುಮಿಂಟಾಂಗ್ ಪಕ್ಷದ ಸಂಘಟನೆ ಮತ್ತು ಅದರ ಮುಖ್ಯ ಕಲ್ಪನೆ ತತ್ವಗಳನ್ನು ಚರ್ಚಿಸಿ.
2. ಚಿಯಾಂಗ್ ಕೈ ಷೇಕ್‌ನ ನಾಯಕತ್ವದಲ್ಲಿ ರಾಷ್ಟ್ರೀಯ ಸರ್ಕಾರದ ಸಾಧನೆಗಳನ್ನು ವಿವರಿಸಿ.
3. ಚೀನಾದಲ್ಲಿ ರಾಜಕೀಯ ಶಕ್ತಿಯಾಗಿ ಚಿಯಾಂಗ್ ಕೈ ಷೇಕ್‌ನ ಪ್ರಾಬಲ್ಯವನ್ನು ಗುರುತಿಸಿ.

## 140.10 ಕೆಲವು ಉಪಯುಕ್ತ ಪುಸ್ತಕಗಳು


1. R.S. Gupta : History of Modern China
2. Brain Harison : South East Asia
3. Clyde P.H. : The Far East
4. Hsu .C.Y. : The History of Modern China

# ಘಟಕ - 141

## ಚೀನಾ ಜಪಾನಿನ ಸಂಬಂಧಗಳು ಮತ್ತು ಮಂಚೂರಿಯಾ ಬಿಕ್ಕಟ್ಟು

*ರಚನೆ*


141.0 ಉದ್ದೇಶಗಳು

141.1 ಪೀಠಿಕೆ

141.2 ಚೀನ-ಜಪಾನಿನ ಸಂಬಂಧಗಳು

141.3 1931 ರ ಮಂಚೂರಿಯಾ ಘಟನೆ

141.4 ರಾಷ್ಟ್ರಗಳ ಒಕ್ಕೂಟ ಸಂಘದ ಕ್ರಮ

141.4.1 ಷಾಂಘೈ ಯುದ್ಧ

141.5 ಮಂಚುಕೊದ ರಚನೆ

141.5.1 ಜಪಾನ್ ಮತ್ತು ಮಂಚುಕೊ

141.5.2 ಮಂಚುಕೊದ ಅಭಿವೃದ್ಧಿ

141.6 ಮಂಚೂರಿಯಾ ಬಿಕ್ಕಟ್ಟಿನ ಪಲಿತಾಂಶಗಳು

141.7 ಮುಕ್ತಾಯ

141.8 ನಿಮ್ಮ ಪ್ರಗತಿಯ ಪರಿಶೀಲನೆ - ಉತ್ತರಗಳು

141.9 ಕೆಲವು ಉಪಯುಕ್ತ ಪುಸ್ತಕಗಳು

## 141.0 ಉದ್ದೇಶಗಳು

ಈ ಘಟಕದಲ್ಲಿ ನಾವು 1905 ರ ಯುದ್ಧದ ನಂತರೆ ಹದಗೆಟ್ಟ ಚೀನಾ-ಜಪಾನಿನ ಸಂಬಂಧಗಳ ಬಗ್ಗೆ ಚರ್ಚಿಸಲಿದ್ದೇವೆ. ಜಪಾನ್ ವಿಸ್ತರಣಾ ನೀತಿ ಮತ್ತು ಸಾಮ್ರಾಜ್ಯಶಾಹಿ ಶೋಷಣೆಯ ನೀತಿಯನ್ನು ಅನುಸರಿಸಿತು. ಇದು ಜಪಾನ್ ಮಂಚೂರಿಯಾವನ್ನು ವಶಪಡಿಸಿಕೊಳ್ಳಲು ಮತ್ತು ಆ ಭಾಗದಲ್ಲಿ ಒಂದು ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಲು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಪರಿಣಾಮವಾಗಿ ಜಪಾನ್ ಕಠಿಣ ಸಮಯವನ್ನು ಎದುರಿಸಬೇಕಾಯಿತು. ಅಂತಿಮವಾಗಿ ಚೀನಾ-ಜಪಾನಿನ ಘರ್ಷಣೆಯು ಎರಡನೇ ಮಹಾಯುದ್ಧದಲ್ಲಿ ವಿಶ್ವದ ರಾಷ್ಟ್ರಗಳ ಭಾಗವಹಿಸುವಿಕೆಯ ಒಂದು ಭಾಗವಾಯಿತು.

ಅಲ್ಲದೆ ಈ ಘಟಕದಲ್ಲಿ ನಾವು ಜಪಾನ್ ಹೇಗೆ ಮಂಚೂರಿಯಾವನ್ನು ಆಕ್ರಮಿಸಿಕೊಂಡಿತೆಂಬುದನ್ನು ತಿಳಿದೆವು. ಅದು ಬಹಿರಂಗವಾಗಿಯೇ ಬಲಪ್ರಯೋಗ ಮಾಡಿತು. ಆದರೆ ಅದು ಕೇವಲ ಒಂದು ಪೋಲೀಸ್ ಕಾರ್ಯಾಚರಣೆಯೆಂದು ವಿಶ್ವಕ್ಕೆ ಭರವಸೆ ನೀಡಿತು. ಅದಕ್ಕೆ ಸಾಮ್ರಾಜ್ಯವನ್ನು ವಿಸ್ತರಿಸಲು ಅಥವಾ ಘರ್ಷಣೆಯ ತೀವ್ರತೆಯನ್ನು ವಿಸ್ತರಿಸಲು ಯಾವುದೇ ಬೇಸರವಿರಲಿಲ್ಲ. ಕ್ರಮೇಣ ಜಪಾನಿನ ಮಾತು ಮತ್ತು ಕೃತಿಗಳ ನಡುವೆ ಬಹಳ ವ್ಯತ್ಯಾಸವಿದೆಯೆಂಬುದು ವಿಶ್ವಕ್ಕೆ ಸ್ಪಷ್ಟವಾಯಿತು.

## 141.1 ಪೀಠಿಕೆ

ವಾಷಿಂಗ್ಟನ್ ಸಮ್ಮೇಳನದೊಂದಿಗೆ 1894-95 ರ ಮೊದಲ ಚೀನಾ-ಜಪಾನಿನ ಯುದ್ಧದೊಂದಿಗೆ ಆರಂಭವಾದ ಜಪಾನಿನ ಸಾಮ್ರಾಜ್ಯಶಾಹಿ ನೀತಿಯ ಮೊದಲ ಹಂತ ಕೊನೆಗೊಂಡಿತು. ಮೊದಲನೆ ಚೀನಾ-ಜಪಾನ್ ಯುದ್ಧ ಮತ್ತು ವಾಷಿಂಗ್ಟನ್ ಸಮ್ಮೇಳನದ ನಡುವಿನ ಕಾಲದಲ್ಲಿ ಅದರ ಸಾಧನೆಗಳು ಕಡಿಮೆ ಮಹತ್ವದೇನಲ್ಲ. ಈ ಕಾಲದಲ್ಲಿ ಅದು ರಷ್ಯಾದ ಮುನ್ನಡೆಯನ್ನು ತಡೆಯಿತು. ಕೊರಿಯಾ ಮತ್ತು ಮಂಚೂರಿಯಾಗಳಲ್ಲಿ ಭದ್ರವಾಗಿ ತಳವೂರಿತು ಮತ್ತು ಕೆಲವು ಪೆಸಿಫಿಕ್ ದ್ವೀಪಗಳಲ್ಲಿ ಆಡಳಿತ ಮೇಲ್ವಿಚಾರಣೆಯ ಹಕ್ಕುಗಳನ್ನು ಪಡೆಯಿತು. ಜಪಾನಿನಲ್ಲಿ ರಾಜಕೀಯ ಪಕ್ಷಗಳ ಸರ್ಕಾರದ ಬೆಳವಣಿಗೆಯಿಂದಾಗಿ ವಾಷಿಂಗ್ಟನ್ ಸಮ್ಮೇಳನದ ನಂತರ ಕಡೇ ಪಕ್ಷ ಒಂದು ದಶಕದವರೆಗೆ ಚೀನಾದ ಬಗ್ಗೆ ಸಮಾಧಾನಪಡಿಸುವ ನೀತಿಯನ್ನು ಅನುಸರಿಸಿತು. ಈ ಕಾಲದಲ್ಲಿ ಚೀನಾವನ್ನು ಸಂತೈಸುವ ಅದರ ನೀತಿಯನ್ನು ಷಾಂಟುಂಗನ್ನು ಬೇಷರತ್ತಾಗಿ ಚೀನಾಕ್ಕೆ ಹಿಂದಿರುಗಿಸಿದುದರಲ್ಲಿ ಕಾಣಬಹುದಾಗಿದೆ. ಆದರೆ ಚೀನಾ-ಜಪಾನ್ ಸಂಬಂಧಗಳ ವಿಷಯದಲ್ಲಿ ಈ ಸಂತೈಸುವ ಧೋರಣೆಯನ್ನು ಅನೇಕ ಕಾರಣಗಳಿಂದಾಗಿ ಮುಂದೆಯೂ ಉಳಿಸಿಕೊಳ್ಳಲಾಗಲಿಲ್ಲ. ಇದರ ಪರಿಣಾಮವಾಗಿ ಜಪಾನ್ ತನ್ನ ಸಾಮ್ರಾಜ್ಯಶಾಹಿ ನೀತಿಯ ಎರಡನೇ ಹಂತವನ್ನು ಆರಂಭಿಸಿತು. 1931 ರಲ್ಲಿ ಮಂಚೂರಿಯಾವನ್ನು ವಶಪಡಿಸಿಕೊಳ್ಳುವುದರೊಂದಿಗೆ ಇದು ಆರಂಭವಾಯಿತು.

ಮಂಚೂರಿಯಾದ ರಾಜಧಾನಿ ಮಾಕ್ಡೇನ್ ಪಟ್ಟಣದ ಹೊರವಲಯದಲ್ಲಿ ಸೆಪ್ಟೆಂಬರ್ 18, 1931 ರ ದುರದೃಷ್ಟಕರ ರಾತ್ರಿಯಂದು ನಡೆದ ಸ್ಫೋಟದ ಘಟನೆಯು ದೂರ ಪ್ರಾಚ್ಯದ ಎರಡು ನೆರೆಹೊರೆಯ ರಾಷ್ಟ್ರಗಳಾದ ಚೀನಾ ಮತ್ತು ಜಪಾನ್‌ಗಳ ನಡುವೆ ತೀವ್ರಗೊಂಡ ಹಗೆತನದಲ್ಲಿ ಪರ್ಯಾವಸನವಾಯಿತು. ಈ ಘಟನೆಯು 1945 ರಲ್ಲಿ ಜಪಾನಿನ ಶರಣಾಗತಿಯವರೆಗೆ ನಡೆದ ಸರಣಿ ಘಟನೆಗಳಲ್ಲಿ ಮೊದಲನೆಯದಾಗಿತ್ತು.

## 141.2 ಚೀನಾ-ಜಪಾನ್ ಸಂಬಂಧಗಳು

ಚೀನಾ ಮತ್ತು ಜಪಾನ್ ದೂರಪ್ರಾಚ್ಯದ ಎರಡು ಪ್ರಮುಖ ರಾಷ್ಟ್ರಗಳು 19 ನೇ ಶತಮಾನದ ಕಡೆಯಿಂದ 1937 ರವರೆಗೆ ಚೀನಾದೊಂದಿಗೆ ಜಪಾನಿನ ಸಂಬಂಧಗಳು ಸ್ನೇಹಪೂರ್ಣವಾಗಿರಲಿಲ್ಲ. ಜಪಾನಿನ ಪ್ರಾದೇಶಿಕ ವಿಸ್ತರಣೆಯು ಸಂಬಂಧಗಳು ಹಾಳಾಗಲು ಮುಖ್ಯ ಕಾರಣವಾಗಿತ್ತು. ಅವುಗಳ ಸಂಬಂಧಗಳ ಇತಿಹಾಸದ ಮುಖ್ಯ ಹಂತಗಳೆಂದರೆ:

1. ಚೀನಾ -ಜಪಾನ್ ಯುದ್ಧ (1894-95)
2. ಮೊದಲನೆ ಮಹಾಯುದ್ಧ (1914-1918)
3. ಚೀನಾದೊಂದಿಗೆ ಜಪಾನಿನ ಸೌಹಾರ್ಧ (ಸ್ನೇಹಯುತ) ಸಂಬಂಧಗಳು (1920-1931)

4. ಮಂಚೂರಿಯಾದ ಮೇಲೆ ಜಪಾನಿನ ಆಕ್ರಮಣ

5. 1937 ರಲ್ಲಿ ಜಪಾನಿನ ಚೀನಾ ಆಕ್ರಮಣ

1937 ರ ಚೀನಾ-ಜಪಾನ್ ಯುದ್ಧವು ಎರಡನೇ ಮಹಾಯುದ್ಧದಲ್ಲಿ ಲೀನವಾಯಿತು. ಕೊರಿಯಾ ಸಮಸ್ಯೆ 1894-95 ರಲ್ಲಿ ಚೀನ ಮತ್ತು ಜಪಾನುಗಳ ನಡುವೆ ಸಶಸ್ತ್ರ ಘರ್ಷಣೆಗೆ ಪ್ರಮುಖ ಕಾರಣವಾಗಿತ್ತು. ಈ ಯುದ್ಧದಲ್ಲಿ ಚೀನಾ ಸೋತುಹೋಯಿತು. ಷಿಮಾನೋಸೆಕಿ ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ಯುದ್ಧ ಕೊನೆಗೊಂಡಿತು. ಈ ಒಪ್ಪಂದದಂತೆ ಚೀನಾ, ಕೊರಿಯಾದ ಸ್ವಾತಂತ್ರ್ಯವನ್ನು ಮಾನ್ಯಮಾಡಿತು. ಅದು ಫಾರ್ಮೋಸಾ ದ್ವೀಪ, ಪೆಸ್ಕಡೋರಸ್ ಮತ್ತು ಲಿಯೋಮಂಗ್ ಪರ್ಯಾಯ ದ್ವೀಪಗಳನ್ನು ಜಪಾನಿಗೆ ಬಿಟ್ಟುಕೊಟ್ಟಿತು. ಜಪಾನಿಗೆ ಯುದ್ಧ ವೆಚ್ಚವನ್ನು ಕೊಡಲು ಒಪ್ಪಿತು ಮತ್ತು ಐರೋಪ್ಯ ರಾಷ್ಟ್ರಗಳಿಗೆ ಸರಿಸಮಾನವಾಗಿ ಜಪಾನಿನೊಂದಿಗೆ ವಾಣಿಜ್ಯ ಸಂಬಂಧಗಳಿಗೆ ಸಮ್ಮತಿಸಿತು. ವಾಸ್ತವವಾಗಿ ಜಪಾನಿನ ಚಟುವಟಿಕೆಗಳಿಗೆ ಚೀನಾದ ಬಾಗಿಲುಗಳನ್ನು ತೆರೆಯಲಾಯಿತು. 1904 ರಿಂದ 1905 ರವರೆಗೆ ಮಂಚೂರಿಯಾವನ್ನು ವಶಪಡಿಸಿಕೊಳ್ಳಲು ಜಪಾನ್ ಮತ್ತು ರಷ್ಯಾಗಳು ಚೀನಾದ ನೆಲದಲ್ಲಿ ಯುದ್ಧ ಮಾಡಿದವು. ಜಪಾನ್ ರಷ್ಯಾವನ್ನು ಸೋಲಿಸಿತು. ಈ ವಿಜಯವು ದಕ್ಷಿಣ ಮಂಚೂರಿಯಾದಲ್ಲಿ ಜಪಾನ್ ರಷ್ಯಾದ ಉತ್ತರಾಧಿಕಾರಿಯಾಗುವಂತೆ ಮಾಡಿತು. ಚೀನಾದ ವಿಷಯದಲ್ಲಿ ಅದು ಜಪಾನಿಗೆ ವಿಶೇಷ ಸ್ಥಾನವನ್ನು ನೀಡಿತು. ಈ ಯುದ್ಧವು ದೂರ ಪ್ರಾಚ್ಯದಲ್ಲಿ ಜಪಾನಿಗೆ ನಾಯಕತ್ವವನ್ನು ದೊರಕಿಸಿಕೊಟ್ಟಿತು. ಅಂದಿನಿಂದ ಅದು ಪಾಶ್ಚಿಮಾತ್ಯ ದೇಶಗಳೊಂದಿಗೆ ಬಹಿರಂಗ ಸ್ಪರ್ಧೆ ಮತ್ತು ಹಗೆತನದಲ್ಲಿ ತೊಡಗಿತು ಮತ್ತು ಭಯೋತ್ಪಾದನೆಯ ಸಾಮ್ರಾಜ್ಯಶಾಹಿ ನೀತಿಯನ್ನು ಅನುಸರಿಸಿತು. ಈ ನಂತರ ಚೀನಾ ಕೊರಿಯಾವನ್ನು ಕಳೆದುಕೊಂಡಿತು. ಬಹಳ ವರ್ಷಗಳಿಂದ ಚೀನಾ ಕೊರಿಯಾದ ಮೇಲೆ ತನ್ನ ಪರಮಾಧಿಕಾರವನ್ನು ಸ್ಥಾಪಿಸಿದ್ದಿತು. 1910 ರ ವೇಳೆಗೆ ಜಪಾನ್ ಇಡೀ ಕೊರಿಯಾದ ಪ್ರದೇಶವನ್ನು ಸಂಪೂರ್ಣವಾಗಿ ಕಬಳಿಸಿತು. ಆನಂತರ ಕೊರಿಯಾ ಜಪಾನಿನ ವಸಾಹತುವಾಗಿ ಉಳಿಯಿತು.

ಮೊದಲನೆ ಮಹಾಯುದ್ಧದಲ್ಲಿ ಜಪಾನಿನ ಆಕ್ರಮಣಕಾರಿ ಚಟುವಟಿಕೆಗಳಿಂದ ಚೀನಾ ಅಪಾರ ಕಷ್ಟಗಳಿಗೆ ಗುರಿಯಾಯಿತು. ಷಾಂಟುಂಗ್ ಪ್ರಾಂತಕ್ಕೆ ತನ್ನ ಪಡೆಗಳನ್ನು ಕಳುಹಿಸಿ ಜಪಾನ್ ಕಿಯಾಂಚ್ ನಗರವನ್ನು ವಶಪಡಿಸಿಕೊಂಡಿತು. ಜರ್ಮನಿಯೊಂದಿಗೆ ಯುದ್ಧದ ಸೋಗಿನಲ್ಲಿ ಚೀನಾದ ತಟಸ್ಥತೆಯನ್ನು ಉಲ್ಲಂಘಿಸಿ ಅದು ಷಾಂಟುಂಗ್‌ನಲ್ಲಿ ಭದ್ರವಾಗಿ ಬೇರುಬಿಟ್ಟಿತು. ಚೀನಾದಲ್ಲಿ ಜರ್ಮನ್ನರು ಅನುಭವಿಸುತ್ತಿದ್ದ ಎಲ್ಲಾ ಸವಲತ್ತುಗಳನ್ನು ಜಪಾನ್ ವಹಿಸಿಕೊಂಡಿತು. 1915 ರಲ್ಲಿ ಜಪಾನ್ ಚೀನಾದ ಮುಂದೆ ಪ್ರಸಿದ್ಧವಾದ "21 ಬೇಡಿಕೆಗಳ" ನ್ನಿಟ್ಟಿತು. ಯುದ್ಧ ಬೆದರಿಕೆಯಿಂದಾಗಿ ಚೀನ ಆ ಬೇಡಿಕೆಗಳಲ್ಲಿ ಕೆಲವನ್ನು ಒಪ್ಪಿಕೊಂಡಿತು. ಜಪಾನಿಗೆ ಅಪಾರವಾಗಿ ಲಾಭವಾಯಿತು. 1915 ರಲ್ಲಿ ಚೀನ ಮಹಾಯುದ್ಧವನ್ನು ಪ್ರವೇಶಿಸಲು ನಿರ್ಧರಿಸಿತು. ಇದರಿಂದ ಚೀನಾಕ್ಕೆ ಯಾವ ಲಾಭವೂ ಆಗಲಿಲ್ಲ. ಯುದ್ಧದ ನಂತರ ಷಾಂಟುಂಗ್‌ನಲ್ಲಿ ಜರ್ಮನಿಯ ಹಕ್ಕುಗಳನ್ನು ಜಪಾನ್ ಪಡೆಯಿತು. ಇದು ಚೀನಾಕ್ಕೆ ಇಷ್ಟವಾಗಲಿಲ್ಲ. ಪ್ರತಿಭಟನೆಯಾಗಿ ಚೀನ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಿಲ್ಲ. ಚೀನ, ಜರ್ಮನಿಯೊಂದಿಗೆ ಪ್ರತ್ಯೇಕ ಒಪ್ಪಂದವನ್ನು ಮಾಡಿಕೊಂಡಿತು.

1920 ರಿಂದ 1931 ರವರೆಗೆ ಚೀನ-ಜಪಾನಿನ ಸಂಬಂಧಗಳು ಅಷ್ಟೊಂದು ಹಾಳಾಗಿರಲಿಲ್ಲ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳು ಜಪಾನಿನ ಬಗ್ಗೆ ಭಯಪಟ್ಟವು. ಯುದ್ಧದ ನಂತರ ಜಪಾನ್ ವಿಶ್ವರಾಷ್ಟ್ರವಾಗಿ ಹೊರಹೊಮ್ಮಿತು ಮತ್ತು ಚೀನಾದಲ್ಲಿ ಅದರ ಪ್ರಭಾವ ಹೆಚ್ಚಿತು. ಇದರಿಂದ ಅಮೆರಿಕಾ ಮತ್ತು ಬ್ರಿಟನ್ ಎಚ್ಚೆತ್ತವು. ಅವುಗಳು ಜಪಾನನ್ನು ಅದರದೇ ಮಿತಿಯಲ್ಲಿ ಇಡಲು ನಿರ್ಧರಿಸಿದವು. ಇದೇ ವೇಳೆಗೆ ಅವು ಚೀನಾದ ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸಲು ಬಯಸಿದವು. ದೂರಪ್ರಾಚ್ಯ ಸಮಸ್ಯೆಯನ್ನು ಚರ್ಚಿಸಲು 1922 ರಲ್ಲಿ ವಾಷಿಂಗ್ಟನ್‌ನಲ್ಲಿ ಒಂದು ಸಮ್ಮೇಳನವನ್ನು ನಡೆಸಲಾಯಿತು. ಒಂದು ಒಪ್ಪಂದವೇರ್ಪಟ್ಟು ಅದರಂತೆ ಚೀನಾದ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮಾಧಿಕಾರವನ್ನು ರಕ್ಷಿಸುವುದು ಎಲ್ಲಾ ರಾಷ್ಟ್ರಗಳ ಜವಾಬ್ದಾರಿಯೆಂದು ಒಪ್ಪಿಕೊಳ್ಳಲಾಯಿತು. ಆದರೆ ಜಪಾನ್ ಈ ಒಪ್ಪಂದವನ್ನು ಗೌರವಿಸಲಿಲ್ಲ.

## 141.3 1931 ರ ಮಂಚೂರಿಯಾ ಘಟನೆ

ಮಂಚೂರಿಯಾದಲ್ಲಿ ಜಪಾನಿನ ಆರ್ಥಿಕ ಹಿತಾಸಕ್ತಿ ಹೊಸದೇನಾಗಿರಲಿಲ್ಲ. ಉತ್ತರದಲ್ಲಿ ರಷ್ಯಾದ ವಿರುದ್ಧ ಮಂಚೂರಿಯ ತಡೆಗೋಡೆಯ ದೇಶವಾಗಬೇಕೆಂಬುದು ಜಪಾನಿನ ಬಯಕೆಯಾಗಿತ್ತು. ರಷ್ಯ ಕಮ್ಯುನಿಸ್ಟ್ ದೇಶವಾದ ನಂತರ ಮಂಚೂರಿಯಾದಲ್ಲಿ ಜಪಾನಿನ ಹಿತಾಸಕ್ತಿಗಳು ಹೊಸ ತಿರುವನ್ನು ಪಡೆದವು ಮತ್ತು ಮತ್ತಷ್ಟು ಬಲಗೊಂಡವು.

ಮಂಚೂರಿಯಾದಲ್ಲಿ ವಿದೇಶಿ ಬಂಡವಾಳ ಹೂಡಿಕೆಯ ಶೇಕಡ 70 ರಷ್ಟಿದ್ದ ಬೃಹತ್ ಬಂಡವಾಳವನ್ನೊಳಗೊಂಡ ದಕ್ಷಿಣ ಮಂಚೂರಿಯಾದ ರೈಲ್ವೇ ಕಂಪನಿಯ ಒಡೆತನ ಮತ್ತು ಚೀನಾದೊಂದಿಗೆ ಅದರ ಉತ್ತಮವಾದ ವ್ಯಾಪಾರಗಳು ಮಂಚೂರಿಯಾದಲ್ಲಿ ಜಪಾನಿನ ಹಿತಾಸಕ್ತಿಗಳನ್ನು ಮತ್ತಷ್ಟು ಹೆಚ್ಚಿಸಿದವು ಮತ್ತು ಬಲಪಡಿಸಿದವು. 1929 ರ ಮಹಾ ಆರ್ಥಿಕ ಕುಸಿತದ ನಂತರ ಜಪಾನನ್ನು ಬಲಿತೆಗೆದುಕೊಂಡ ಹಣಕಾಸಿನ ಬಿಕ್ಕಟ್ಟು ಮತ್ತು ಆರ್ಥಿಕ ಗೊಂದಲಗಳಿಂದ ಸೈನಿಕವಾದಿಗಳು ಮತ್ತು ಬಂಡವಾಳಶಾಹಿಗಳು ಇದರಿಂದ ಹೊರಬಂದು ದೇಶವನ್ನು ಮತ್ತೊಮ್ಮೆ ಪ್ರಗತಿಪಥದಲ್ಲಿರಿಸಲು ಮಂಚೂರಿಯಾವನ್ನು ಆಕ್ರಮಿಸಿಕೊಳ್ಳುವುದು ಒಂದೇ ಪರಿಹಾರವೆಂದು ಭಾವಿಸುವಂತೆ ಮಾಡಿತು.

ಜಪಾನ್ 1931 ರವರೆಗೂ ಮಂಚೂರಿಯಾವನ್ನು ಸೇರಿಸಿಕೊಳ್ಳಲು ಬಯಸಿರಲಿಲ್ಲ. ಅದು ಮಂಚೂರಿಯಾದ ಕೈಗೊಂಬೆ ಯುದ್ಧ ನಾಯಕ ಚಂಗ್ ತ್ಸೊ-ಲಿನ್‌ನ ಮೂಲಕ ಚೀನಾದ ಸಾರ್ವಭೌಮಾಧಿಕಾರದೊಂದಿಗೆ ಘರ್ಷಣೆಯನ್ನು ಉಳಿಸಿಕೊಂಡಿದ್ದಿತು. 1928 ರಲ್ಲಿ ಅವನ ಮರಣದ ನಂತರ ಅವನ ಮಗ ಚಂಗ್ ಸೆತ್ ಲಿಯಾಂಗ್ ಕೈ ಷೆಕ್‌ನು ಕುಮಿಂಟಾಂಗ್ ಪಕ್ಷದ ಧ್ವಜದಡಿಯಲ್ಲಿ ಚೀನಾವನ್ನು ಒಂದುಗೂಡಿಸಿದನು. ಚಿಯಾಂಗ್ ಸೆತ್-ಲಿಯಾಂಗನು ರಾಷ್ಟ್ರೀಯವಾದಿಯಾದನು ಮತ್ತು ಚಿಯಾಂಗ್ ಕೈ ಷೆಕ್‌ನನ್ನು ಬೆಂಬಲಿಸಿದನು. ಹೀಗೆ ಜಪಾನಿಗೆ ಒಂದು ಸಮಸ್ಯೆಯನ್ನು ಸೃಷ್ಟಿಸಿದನು. 1931 ರವರೆಗೆ ವಕತ್ಸುಕಿ ಮತ್ತು ಷಿದೆಹರರನ್ನು ಒಳಗೊಂಡಂತೆ ಪಕ್ಷದ ಮುಖಂಡರು ಜಪಾನಿನಲ್ಲಿ ಹೊಸ ಸನ್ನಿವೇಶದೊಂದಿಗೆ ವ್ಯವಹರಿಸುವಲ್ಲಿ ಶಾಂತಿಯುತ ರಾಜತಂತ್ರ ನೀತಿಯನ್ನು ಪ್ರತಿಪಾದಿಸಿದರು.

ಸೇನಾ ಮುಖಂಡರು ಈ ನೀತಿಯನ್ನು ತಿರುವು ಮುರುವು ಮಾಡಿದರು. ಚೀನಾದ ಸೇನಾ ತಜ್ಞರಾದ ಕುಮಿಂಟಾಂಗ್ ಸೇನೆಯ ಜನರಲ್ ತಕೆಕಾವ ಮತ್ತು ಜನರಲ್ ಹೊಂಜೊ ಮಂಚೂರಿಯಾದಲ್ಲಿ ನೇರ ಕಾರ್ಯಾಚರಣೆಯ ಪರವಾಗಿದ್ದರು. ಆದ್ದರಿಂದ ಸೆಪ್ಟೆಂಬರ್ 18, 1931 ರ ರಾತ್ರಿ ಮುಕ್ಡೇನ್‌ಗೆ ಉತ್ತರದ ರೈಲ್ವೇ ಹಳಿಯ ಮೇಲೆ ಬಾಂಬೊಂದು ಸ್ಫೋಟಿಸಿತು. ಅದಕ್ಕೆ ಚೀನಿಯರು ಕಾರಣವೆಂದು ದೂರವಾಯಿತು. ಅವರನ್ನು ಶಿಕ್ಷಿಸಲು ಮಾಕ್ಡೇನ್‌ನಲ್ಲಿ ಚೀನಾದ ಸೇನೆಯ ಮೇಲೆ ದಾಳಿ ಮಾಡುವಂತೆ ಇಟಗಾಕಿ ಜಪಾನಿನ ಪಡೆಗಳಿಗೆ ಆದೇಶ ನೀಡಿದನು. ಮಂಚೂರಿಯಾದಲ್ಲಿ ಸೈನ್ಯವನ್ನು ಹತೋಟಿಯಲ್ಲಿಡಲು ಅಸಮರ್ಥವಾದ ಜಪಾನಿನ ಸರ್ಕಾರವು "ಜಪಾನಿನ ಸೇನೆಯ ಕಾರ್ಯಾಚರಣೆಯ ಆತ್ಮರಕ್ಷಣೆಗಾಗಿ ತೆಗೆದುಕೊಳ್ಳಲಾಗಿದ್ದು ಅನಿವಾರ್ಯವಾಗಿದ್ದಿತು" ಎಂಬುದಾಗಿ ಘೋಷಿಸಿತು.

1932 ರ ಪ್ರಾರಂಭದ ವೇಳೆಗೆ ಇಡೀ ಮಂಚೂರಿಯಾವನ್ನು ಆಕ್ರಮಿಸಿಕೊಳ್ಳಲಾಯಿತು ಮತ್ತು ಅದೇ ವರ್ಷ ಫೆಬ್ರವರಿಯಲ್ಲಿ ಮಂಚೂರಿಯಾವನ್ನು ಸ್ವತಂತ್ರ ರಾಜ್ಯವೆಂದು ಘೋಷಿಸಲಾಯಿತು. ಈ ವೇಳೆಗೆ ಟೀನ್‌ಟ್ಸಿನ್‌ನಲ್ಲಿದ್ದ ಪದಚ್ಯುತ ಮಂಚು ಚಕ್ರವರ್ತಿ ಪು-ಹುಯಿಯನ್ನು ಮಂಚೂರಿಯಾ ಮತ್ತು ಜೆಹೋಲ್‌ನ ಒಳಮಂಗೋಲಿಯಾ ಪ್ರಾಂತದ ಐದು ಸಾವಿರ ಚದರ ಮೈಲಿಗಳನ್ನೊಳಗೊಂಡ ಮಂಚುಕೋ ಎಂದು ಕರೆಯಲಾಗಿದ್ದ ಹೊಸ ಗಣರಾಜ್ಯದ ನಾಯಕತ್ವ ವಹಿಸಲು ಆಹ್ವಾನಿಸಲಾಯಿತು. ಹೀಗೆ ಜಪಾನ್ ಪ್ರಾಯೋಜಿತ ಹೊಸ ಮಂಚುಕೋ ರಾಜ್ಯ ಅಸ್ತಿತ್ವಕ್ಕೆ ಬಂದಿತು. ಆದಾಗ್ಯೂ ಸರ್ಕಾರದಲ್ಲಿ ಬಹುಸಂಖ್ಯಾತ ಅಭಿಪ್ರಾಯ ಚೀನಾದಲ್ಲಿ ಮತ್ತಷ್ಟು ವಿಸ್ತರಣೆಯ ಪರವಾಗಿರಲಿಲ್ಲ. ಆದರೂ ಸೇನಾನಾಯಕರೂ ಮಂಚೂರಿಯಾ ಆಕ್ರಮಣವನ್ನು ಮುಂದುವರಿಸಿದರು. ಸರ್ಕಾರದ ತೀರ್ಮಾನವನ್ನು ಕೈಗೊಳ್ಳುವ ಅಧಿಕಾರವನ್ನು ಸೇನೆ ಕಿತ್ತುಕೊಂಡಿದ್ದುದನ್ನು ಜಪಾನಿನ ಪ್ರಧಾನಿ ಇನುಕೈ ಇಷ್ಟಪಡಲಿಲ್ಲ. ಆದರೆ ಮೇ 1932 ರಲ್ಲಿ ಇನುಕಿಯನ್ನು ಕೊಲ್ಲಲಾಯಿತು.

## 141.4 ರಾಷ್ಟ್ರಗಳ ಒಕ್ಕೂಟ ಸಂಘ ಕೈಗೊಂಡ ಕ್ರಮ

ಮಂಚೂರಿಯಾದ ಮೇಲೆ ಜಪಾನಿನ ಆಕ್ರಮಣದ ನಂತರ ತಕ್ಷಣವೇ ಚೀನ ರಾಷ್ಟ್ರಗಳ ಒಕ್ಕೂಟ ಸಂಘವನ್ನು ಸಂಪರ್ಕಿಸಿ ಜಪಾನನ್ನು ಆಕ್ರಮಣಕಾರಿ ರಾಷ್ಟ್ರವೆಂದು ಪರಿಗಣಿಸುವಂತೆ ಮತ್ತು ಮಂಚೂರಿಯಾವನ್ನು ಚೀನಾಕ್ಕೆ ಹಿಂದಿರುಗಿ ನೀಡಲು ವ್ಯವಸ್ಥೆ

ಮಾಡುವಂತೆ ಕೇಳಿಕೊಂಡಿತು. ಆದರೆ ಜಪಾನ್ ದೃಢ ನಿಲುವನ್ನು ತಾಳಿತು. ಚೀನಾಕ್ಕೆ ಯಾವ ಯುದ್ಧ ಬೆದರಿಕೆಯಾಗಲಿ ಅಥವಾ ಚೀನಾದಲ್ಲಿ ಯಾವ ಯುದ್ಧವಾಗಲಿ ಆರಂಭವಾಗಿಲ್ಲವೆಂದು ಅದು ಒಕ್ಕೂಟ ಸಂಘಕ್ಕೆ ಸ್ಪಷ್ಟಪಡಿಸಿತು. ದಕ್ಷಿಣ ಮಂಚೂರಿಯಾದಲ್ಲಿ ತನ್ನ ರೈಲುಮಾರ್ಗಗಳನ್ನು ರಕ್ಷಿಸಿಕೊಳ್ಳಲು ಜಪಾನ್ ಪೋಲಿಸ್ ಕ್ರಮವನ್ನು ಮಾತ್ರವೇ ಕೈಗೊಳ್ಳುತಿರುವುದಾಗಿಯೂ ಅದು ಸ್ಪಷ್ಟಪಡಿಸಿತು. ಚೀನಾದಲ್ಲಿ ತನಗೆ ಯಾವ ಪ್ರಾದೇಶಿಕ ಹಿತಾಸಕ್ತಿಯೂ ಇಲ್ಲವೆಂದೂ ಅದು ಪ್ರಪಂಚಕ್ಕೆ ಖಚಿತಪಡಿಸಿತು.

ಸೆಪ್ಟೆಂಬರ್ 30, 1931 ರಂದು ರಾಷ್ಟ್ರಗಳ ಒಕ್ಕೂಟ ಸಂಸ್ಥೆಯ ಭದ್ರತಾ ಸಮಿತಿಯು ಸರ್ವಾನುಮತದ ಒಂದು ನಿರ್ಣಯವನ್ನು ಅಂಗೀಕರಿಸಿ ಪರಿಸ್ಥಿತಿ ಸಹಜ ಸ್ಥಿತಿಗೆ ಬರುತ್ತಿದ್ದಂತೆ ಜಪಾನ್ ಮ್ಯಾಕ್ಡೇನ್‌ನಿಂದ ತನ್ನ ಸೇನೆಯನ್ನು ಹಿಂತೆಗೆದುಕೊಳ್ಳುವುದೆಂದು ನಿರ್ಧರಿಸಿತು. ಚೀನಾ ಅಕ್ಟೋಬರ್‌ನಲ್ಲಿ ಮತ್ತೊಮ್ಮೆ ಮುಕ್ಡೇನ್‌ನಲ್ಲಿ ಜಪಾನಿನ ಪಡೆಗಳಿರುವುದನ್ನು ಭದ್ರತಾ ಸಮಿತಿಯ ಗಮನಕ್ಕೆ ತಂದಿತು. ಮುಕ್ಡೇನ್‌ನಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಚೀನಾದ ಹಿಡಿತದಲ್ಲಿಲ್ಲದಿರುವುದರಿಂದ ಜಪಾನಿನ ಪ್ರಜೆಗಳ ಜೀವ ಮತ್ತು ಆಸ್ತಿಗಳ ರಕ್ಷಣೆಗೆ ಜಪಾನಿನ ಸೇನೆ ಅಲ್ಲಿರಬೇಕೆಂದು ಜಪಾನ್ ಮನವಿ ಮಾಡಿಕೊಂಡಿತು. ಆದಾಗ್ಯೂ, ರಾಷ್ಟ್ರಗಳ ಒಕ್ಕೂಟ ಸಂಘ ಇದನ್ನು ಒಪ್ಪಲಿಲ್ಲ. ಜಪಾನಿನ ಪಡೆಗಳು ಮಾಕ್ಡೇನ್‌ನಿಂದ ನಿರ್ಗಮಿಸಬೇಕೆಂದು ಅದು ತೀರ್ಮಾನಿಸಿತು. ಜಪಾನ್ ನಿರ್ಣಯವನ್ನು ತಿರಸ್ಕರಿಸಿತು. ಡಿಸೆಂಬರ್ 10, 1931 ರಲ್ಲಿ ಭದ್ರತಾ ಸಮಿತಿಯು ಪರಿಸ್ಥಿತಿಯನ್ನು ಸ್ಥಳದಲ್ಲಿಯೇ ಅಧ್ಯಯನ ಮಾಡಿ ಸಮಿತಿಗೆ ವರದಿಯನ್ನು ಸಲ್ಲಿಸಲು ಮಂಚೂರಿಯಾಕ್ಕೆ ಒಂದು ಆಯೋಗವನ್ನು ಕಳುಹಿಸಲು ತೀರ್ಮಾನಿಸಿತು. ಅದರಂತೆ ಲಿಟ್ಟನ್ ಸಮಿತಿಯು ರಾಷ್ಟ್ರಗಳ ಒಕ್ಕೂಟ ಸಂಸ್ಥೆಯ ಪರವಾಗಿ 1932 ರಲ್ಲಿ ಮಂಚೂರಿಯಾಕ್ಕೆ ಭೇಟಿ ನೀಡಿ ಜಪಾನನ್ನು ಆಕ್ರಮಣಕಾರಿಯೆಂದು ಖಂಡಿಸಿತು. ರಾಷ್ಟ್ರಗಳ ಒಕ್ಕೂಟ ಸಂಘ ಲಿಟ್ಟನ್ ಆಯೋಗದ ವರದಿಯನ್ನು ಪುರಸ್ಕರಿಸಿದ್ದರಿಂದ ಜಪಾನ್ ಮಾರ್ಚ್ 1933 ರಲ್ಲಿ ಲೀಗ್‌ನಿಂದ ಹೊರಬಂದಿತು. ಪ್ರಬಲ ರಾಷ್ಟ್ರಗಳೊಂದಿಗೆ ಅದರ ಸಂಬಂಧಗಳು ಹದಗೆಟ್ಟವು. ಇದೇ ಸಮಯದಲ್ಲಿ ಬ್ರಿಟನ್ ಮತ್ತು ಅಮೆರಿಕಾಗಳೊಂದಿಗೆ ಮಾಡಿಕೊಂಡಿದ್ದ ನಿಶ್ಶಸ್ತ್ರೀಕರಣ ಒಪ್ಪಂದಗಳಿಂದಲೂ ಜಪಾನ್ ಹಿಂದೆ ಸರಿಯಿತು. ಇದು ಅದರ ಏಕಾಂಗಿತನದ ಭಾವನೆಯನ್ನು ಮತ್ತಷ್ಟು ಹೆಚ್ಚಿಸಿತು ಮತ್ತು ಅದು ಶತೃ ಪಕ್ಷದ ರಾಷ್ಟ್ರಗಳೊಂದಿಗೆ ಸೇರಲು ಪ್ರೇರೇಪಿಸಿತು. (ಜರ್ಮನಿ ಮತ್ತು ಇಟಲಿಗಳ ಫ್ಯಾಸಿಸ್ಟ್ ಮೈತ್ರಿ) ಇದು 1937 ರಲ್ಲಿ ಚೀನಾದಲ್ಲಿ ಜಪಾನಿನ ಇನ್ನೂ ಹೆಚ್ಚಿನ ಆಕ್ರಮಣಕ್ಕೆ ದಾರಿಮಾಡಿಕೊಟ್ಟಿತು ಮತ್ತು ಡಿಸೆಂಬರ್ 1941 ರಲ್ಲಿ ಅಮೆರಿಕಾದ ಪೆರ್ಲ್ ಹಾರ್ಬರ್‌ನ ಮೇಲೆ ದಾಳಿ ಮಾಡಲು ಪ್ರೋತ್ಸಾಹ ನೀಡಿತು.

ಮಂಚೂರಿಯಾ ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸಿದ ರಾಷ್ಟ್ರಗಳ ಒಕ್ಕೂಟ ಸಂಘವನ್ನು ಟೀಕಿಸಲಾಯಿತು. ಅನೇಕ ಕಾರಣಗಳಿಂದ ಅದು ಜಪಾನಿನ ವಿರುದ್ಧ ದೃಢವಾದ ಕ್ರಮಗಳನ್ನು ಕೈಗೊಳ್ಳಲು ವಿಫಲವಾಯಿತು. ಬ್ರಿಟನ್ ಮತ್ತು ಫ್ರಾನ್ಸ್‌ಗಳು ಚೀನಾದೊಂದಿಗೆ ಹೆಚ್ಚಿನ ವ್ಯಾಪಾರವನ್ನು ಹೊಂದಿರಲಿಲ್ಲ. ಆದ್ದರಿಂದ ಸಮಸ್ಯೆಯು ಪ್ರಬಲ ರಾಷ್ಟ್ರಗಳೊಂದಿಗೆ ಘರ್ಷಣೆಯಲ್ಲಿ ತೊಡಗುವಷ್ಟು ಪ್ರಮುಖವಾಗಿರಲಿಲ್ಲ. ಎರಡು ಪ್ರಬಲ ನೌಕಾ ಶಕ್ತಿಗಳಾಗಿದ್ದ ಬ್ರಿಟನ್ ಮತ್ತು ಅಮೆರಿಕಾಗಳು ಮತ್ತು ಒಂದು ಭಾರೀ ಮಾತ್ರವೇ ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವಲ್ಲಿ ಸಮರ್ಥವಾಗಿದ್ದ ಅವುಗಳ ಜಪಾನಿನ ವಿರುದ್ಧ ಸೈನಿಕ ಕ್ರಮಗಳನ್ನು ಜಾರಿಗೊಳಿಸುವ ಮನಸ್ಥಿತಿಯಲ್ಲಿರಲಿಲ್ಲ.

### *141.4.1 ಷಾಂಘೈ ಯುದ್ಧ*

ಜಪಾನಿನ ದಾಳಿಯನ್ನು ಎದುರಿಸಲಾಗದ ಚೀನಿಯರು ಜಪಾನಿಗೆ ಅಪಾರ ಹಣದ ನಷ್ಟವನ್ನುಂಟುಮಾಡುವ ಬಹಿಷ್ಕಾರ ಚಳುವಳಿಯನ್ನು ಕೈಗೊಂಡರು. ಜಪಾನೀ ವಸ್ತುಗಳ ಬಹಿಷ್ಕಾರದ ಹಾವಳಿಯನ್ನು ಎದುರಿಸಲು ಮತ್ತು ಮಂಚೂರಿಯಾದ ಮೇಲೆ ತನ್ನ ಆಕ್ರಮಣದಿಂದ ಗಮನವನ್ನು ಬದಲಾಯಿಸಲು ಜಪಾನ್ ಷಾಂಘೈನ ಅಂತರ ರಾಷ್ಟ್ರೀಯ ಪಟ್ಟಣದ ನೆಲೆಯ ಮೇಲೆ ತನ್ನ ಪಡೆಯೊಂದನ್ನು ಇಳಿಸಿತು. ಇದು 'ಷಾಂಗೈ ಯುದ್ಧ' (ಜನವರಿ ಮೇ 1932) ವೆಂದು ಕರೆಯಲಾದ ಒಂದು ಪ್ರಕರಣಕ್ಕೆ ಕಾರಣವಾಯಿತು. ಚೀನಾದ ಸರ್ಕಾರ ಮತ್ತೊಮ್ಮೆ ರಾಷ್ಟ್ರಗಳ ಒಕ್ಕೂಟ ಸಂಘಕ್ಕೆ ದೂರು ಸಲ್ಲಿಸಿತು. ಈ ಬಾರಿ ಅತ್ಯಂತ ದೃಢನಿರ್ಧಾರದಿಂದ ವರ್ತಿಸಿದ ಒಕ್ಕೂಟ ಸಂಘವು ಸರ್ವಾನುಮತದಿಂದ ಸೀಮ್ಸನ್ನನ ಮಾನ್ಯತೆ ನೀಡದ ಸಿದ್ಧಾಂತವನ್ನು ಅಂಗೀಕರಿಸಿತು. ಒಕ್ಕೂಟ ಸಂಘದ ನಿರ್ಣಯಗಳ ಬಗ್ಗೆ ಜಪಾನ್ ಅಸಮಾಧಾನವನ್ನು ವ್ಯಕ್ತಪಡಿಸಿದರೂ ಒಂದು ಶಾಂತಿ ಒಪ್ಪಂದವನ್ನು ಮಾಡಿಕೊಂಡಿತು ಮತ್ತು ಅಂತಿಮವಾಗಿ ಷಾಂಘೈ ಪ್ರದೇಶದಿಂದ ತನ್ನ ಪಡೆಗಳನ್ನು ವಾಪಸ್ ಕರೆಸಿಕೊಂಡಿತು.

## 141.5 ಮಂಚುಕೋದ ರಚನೆ

ಷಾಂಘೈನಲ್ಲಿ ಯುದ್ಧ ತ್ವರಿತವಾಗುತ್ತಿದ್ದಂತೆ ಜಪಾನಿಯರು ಮಂಚೂರಿಯಾದಲ್ಲಿ ಕುಯುಕ್ತಿಯ ಒಂದು ಸ್ವಾತಂತ್ರ ಚಳುವಳಿಯನ್ನು ಹುಟ್ಟುಹಾಕಿದರು. ಚಾಂಗ್ ಸುಚ್-ಲಿಯಾಂಗ್‌ನ ಆಡಳಿತವು ಫೆಬ್ರವರಿ 12, 1932 ರಂದು ಕೊನೆಗೊಳ್ಳುವುದೆಂದು ಘೋಷಿಸಲಾಯಿತು. ಆರು ದಿವಸಗಳ ನಂತರ ಮುಕ್ಡೇನ್‌ನಿಂದ ಹೊಸ ಮಂಚುಕೋ ರಾಜ್ಯದ ಉದಯವನ್ನು ಘೋಷಿಸಲಾಯಿತು. ಕಡೆಯ ಮಂಚು ದೊರೆ ಪು-ಯಿಯನ್ನು ಹೊಸದಾಗಿ ರಚಿಸಲಾದ ರಾಜ್ಯದ ಮುಖಂಡನನ್ನಾಗಿ ಮಾಡಲಾಯಿತು. ಮಾರ್ಚ್ 1932 ರಲ್ಲಿ ಒಂದು ಅವಯವ ಕಾನೂನಿನ ಮೂಲಕ ನಾಗರೀಕರ ಮೂಲಭೂತ ಹಕ್ಕುಗಳು, ಆಡಳಿತದ ತತ್ವಗಳು, ಶಾಸಕಾಂಗ ಮತ್ತು ನ್ಯಾಯಾಂಗ ಮೊದಲಾದವುಗಳನ್ನು ಖಾತ್ರಿಪಡಿಸಲಾಯಿತು. ಹೊಸ ರಾಜ್ಯಕ್ಕೆ ಉಪ್ಪಿನ ತೆರಿಗೆಯ ಸಂಗ್ರಹಣೆಯ ಹಕ್ಕು ಮತ್ತು ಸುಂಕ ಮತ್ತು ವಾಣಿಜ್ಯ ತೆರಿಗೆಗಳ ಸಂಪೂರ್ಣ ಸಾಯತ್ತತೆಯನ್ನು ದಯಪಾಲಿಸಲಾಯಿತು. ಸೆಪ್ಟೆಂಬರ್ 13, 1932 ರಂದು ಜಪಾನ್ ಮಂಚುಕೋ ರಾಜ್ಯದ ಸ್ವಾತಂತ್ರವನ್ನು ಮಾನ್ಯಮಾಡಿತು. ಮಂಚುಕೋ ಸರ್ಕಾರವು ಸ್ಥಳೀಯರ ನಿರಂತರ ಚಳುವಳಿಯಿಂದ ಹೊರಬಂದುದೆಂದು ಜಪಾನ್ ಪ್ರಚಾರ ಮಾಡಿತು. ಆದರೆ ಜಪಾನಿನ ಪ್ರಚಾರಕ್ಕೆ ಪ್ರಪಂಚದ ಉಳಿದ ಭಾಗಗಳಿಂದ ಸಹಾನುಭೂತಿಯನ್ನು ಪಡೆಯಲು ವಿಫಲವಾಯಿತು. ಇತರ ದೇಶಗಳು ಮಂಚೂರಿಯಾದ ಕೈಗೊಂಬೆ ಸರ್ಕಾರಕ್ಕೆ ಮಾನ್ಯತೆ ನೀಡಲು ಸಿದ್ಧವಿರಲಿಲ್ಲ. ಜಪಾನ್ ತನ್ನ ಹಗೆತನವನ್ನು ಮುಂದುವರಿಸಿದಾಗ ಒಕ್ಕೂಟ ಸಂಘವು ಕಡೆಗೆ ಚೀನಾದ ಪ್ರದೇಶದ ವಿರುದ್ಧ ಜಪಾನಿನ ಆಕ್ರಮಣವನ್ನು ಖಂಡಿಸಿತು. ಜಪಾನ್ ಕೋಪದಲ್ಲಿ 1933 ರಲ್ಲಿ ರಾಷ್ಟ್ರಗಳ ಒಕ್ಕೂಟ ಸಂಘದಿಂದ ಹೊರಬಂದಿತು.

### *141.5.1 ಜಪಾನ್ ಮತ್ತು ಮಂಚುಕುಯೊ*

ಒಂದು ಸ್ವತಂತ್ರ ಮತ್ತು ಅತ್ಯಂತ ಹೆಚ್ಚಿನ ರಕ್ಷಣೆಗೊಳಪಟ್ಟ ರಾಜ್ಯವನ್ನು ರಚಿಸಿದ ನಂತರ, ಜಪಾನ್ ಮಂಚುಕೋದ ಮೇಲೆ ತನ್ನ ಹಿಡಿತವನ್ನು ಕ್ರೋಢೀಕರಿಸಲು ಪ್ರಾರಂಭಿಸಿತು. ಮಂಚುಕೋದೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡು ಜಪಾನ್ 1915 ರ ತನ್ನ ಚೀನಾ ನೀತಿಗೂ ಮಿಗಿಲಾದ ಎಲ್ಲಾ ಸವಲತ್ತುಗಳು ಮತ್ತು ರಿಯಾಯಿತಿಗಳನ್ನು ಪಡೆದುಕೊಂಡಿತು. ಈ ಒಪ್ಪಂದವು 1915 ರ ಒಪ್ಪಂದಗಳನ್ನು ಬಲಪಡಿಸಿತು ಮತ್ತು ಉಲ್ಲೇಖಿಸಿತು. ಈ ಸವಲತ್ತುಗಳಿಗೆ ಪ್ರತಿಯಾಗಿ ಜಪಾನ್ ಹೊಸ ರಾಜ್ಯಕ್ಕೆ ಕಾನೂನು ಮತ್ತು ಸುವ್ಯವಸ್ಥೆಯ ಖಾತ್ರಿಯನ್ನು ಮತ್ತು ವಿದೇಶೀ ಆಕ್ರಮಣಗಳಿಂದ ರಕ್ಷಣೆಯ ಭರವಸೆ ನೀಡಿತು. ಮಂಚೂರಿಯಾದಲ್ಲಿ ತನ್ನ ಸವಲತ್ತುಗಳನ್ನು ರಕ್ಷಿಸಿಕೊಳ್ಳುವ ನೆಪದಲ್ಲಿ ಜಪಾನ್ ಗುತ್ತಿಗೆಯ ಪ್ರದೇಶದಲ್ಲಿ ತನ್ನದೇ ಆಡಳಿತ ವ್ಯವಸ್ಥೆಯನ್ನು ರೂಪಿಸಿತು. ಕ್ವಾಂಟುಂಗ್ ಸೇನೆಯ ಬಲವನ್ನು ಹೆಚ್ಚಿಸಿತು. ದಕ್ಷಿಣ ಮಂಚೂರಿಯಾ ರೈಲ್ವೇ ಪ್ರದೇಶದ ಆಡಳಿತವನ್ನು ವಹಿಸಿಕೊಂಡಿತು. ಪ್ರದೇಶದಾಚೆಯ ಹಕ್ಕುಗಳನ್ನು ವಹಿಸಿಕೊಂಡಿತು ಮತ್ತು ಸೀಕಿಂಗ್‌ನ್ನು ಮಂಚುಕೋದ ಹೊಸ ರಾಜಧಾನಿಯನ್ನಾಗಿ ಮಾಡಿತು. ಕ್ವಾಂಟುಂಗ್ ಸೇನೆಯ ದಂಡನಾಯಕನ ಹುದ್ದೆಗಳು ಲಿಯೋಟುಂಗ್ ಪರ್ಯಾಯ ದ್ವೀಪದ ರಾಜ್ಯಪಾಲ ಮತ್ತು ಜಪಾನಿನ ರಾಯಭಾರಿ ಈ ಮೂರು ಹುದ್ದೆಗಳನ್ನು ಒಬ್ಬನೇ ವ್ಯಕ್ತಿಯಲ್ಲಿ ಕೇಂದ್ರೀಕರಿಸಲಾಗಿತ್ತು. ವಾಸ್ತವವಾಗಿ, ಈ ವ್ಯಕ್ತಿಯು ಮಂಚುಕೋದಲ್ಲಿ ಅತ್ಯಂತ ಪ್ರಬಲನಾದವನಾಗಿದ್ದು ಮಂಚೂರಿಯಾದ ನಿಜವಾದ ದೊರೆಯಾಗಿದ್ದನು. ಮಂಚುಕೋ ಸರ್ಕಾರದಲ್ಲಿ ಶೇ. 60 ರಷ್ಟು ಉನ್ನತ ಸೇವೆಯ ಹುದ್ದೆಗಳು ಮತ್ತು ಶೇ. 50 ರಷ್ಟು ಕೆಳದರ್ಜೆಯ ಸೇವಾ ಹುದ್ದೆಗಳನ್ನು ಜಪಾನಿಯರೇ ನಿರ್ವಹಿಸುತ್ತಿದ್ದರು. ಸರ್ಕಾರಿ ಸಿಬ್ಬಂದಿಯಲ್ಲಿ ಜಪಾನಿಯರ ಇಷ್ಟು ಪ್ರಮಾಣದ ಉಪಸ್ಥಿತಿಯಿಂದ ಮಂಚುಕೋ ಜಪಾನಿನ ಆಶ್ರಯಕ್ಕೊಳಪಟ್ಟಿತ್ತು.

### *141.5.2 ಮಂಚುಕೋದ ಅಭಿವೃದ್ಧಿ*

ಹೊಸ ಮಂಚುಕೋ ರಾಜ್ಯವನ್ನು ಯಾವ ಪ್ರಬಲ ರಾಷ್ಟ್ರವೂ ಮಾನ್ಯ ಮಾಡದಿದ್ದರೂ ಜಪಾನಿನ ರಾಜಪ್ರತಿನಿಧಿತ್ವದಡಿಯಲ್ಲಿ ಅದರ ಅಭಿವೃದ್ಧಿ ಅತ್ಯಂತ ವೇಗದಿಂದ ಕೂಡಿತ್ತು. ತನ್ನ ಆರ್ಥಿಕ ಜೀವನಾಡಿಯಾಗಿ ಜಪಾನ್ ಮಂಚೂರಿಯಾವನ್ನು ಹಿಂದಿನಿಂದಲೂ ಮತ್ತು ಅದನ್ನು ವಶಪಡಿಸಿಕೊಂಡ ನಂತರ ಮಂಚುಕೋದ ಆರ್ಥಿಕ ಮತ್ತು ಆಯಕಟ್ಟಿನ ಹಿತಾಸಕ್ತಿಗಳನ್ನು ತನ್ನ ತವರಿನವುಗಳೊಂದಿಗೆ ಸಮಗ್ರಗೊಳಿಸಿತು ಬೆಸೆಯಿತು.

ಮಂಚೂರಿಯಾದಲ್ಲಿ ಡಕಾಯಿತಿಯ ಸಮಸ್ಯೆ ಅತ್ಯಂತ ಗಂಭೀರವಾದ ಸಮಸ್ಯೆಯಾಗಿತ್ತು. ವ್ಯವಸಾಯಗಾರರು ಮತ್ತು ರೈತರ ಬೆಳೆಗಳನ್ನು ಲೂಟಿ ಮಾಡಲಾಯಿತು. ಹಳ್ಳಿಗಳಲ್ಲಿ ಜೀವನ ಸುರಕ್ಷಿತವಾಗಿರಲಿಲ್ಲ. ಅವರಂತೆ ಒಂದು ಯೋಜನೆಯನ್ನು ಸಿದ್ಧಪಡಿಸಿ ಪ್ರತಿಯೊಂದು ಹಳ್ಳಿಯಲ್ಲಿಯೂ ಮಣ್ಣಿನ ಗೋಡೆಗಳನ್ನು ನಿರ್ಮಿಸುವ ಮೂಲಕ ಡಕಾಯಿತರು ಸುಲಭವಾಗಿ ತಪ್ಪಿಸಿಕೊಳ್ಳದಂತೆ

ನೋಡಿಕೊಳ್ಳಲಾಯಿತು. ನಂತರ ನಾಣ್ಯ ಪದ್ಧತಿಯನ್ನು ಭದ್ರವಾಗಿ ಇರಿಸುವ ಪ್ರಯತ್ನಗಳನ್ನು ಮಾಡಲಾಯಿತು. ಅದುವರೆಗೆ ಅನೇಕ ಬಗೆಯ ನಾಣ್ಯಗಳು ಚಲಾವಣೆಯಲ್ಲಿದ್ದಿತು. ಹೊಸ ಸರ್ಕಾರವು ತನ್ನ ನಾಣ್ಯಗಳನ್ನು ಜಪಾನಿನ ಯೆನ್‌ನೊಂದಿಗೆ ಸಂಬಂಧ ಕಲ್ಪಿಸಿತು. ಹೀಗೆ ನಾಣ್ಯಗಳ ಗೊಂದಲವನ್ನು ನಿವಾರಿಸಲಾಯಿತು. ಮಿಗಿಲಾಗಿ ಜಪಾನಿನ ನಾಣ್ಯ ಪದ್ಧತಿಯೊಂದಿಗೆ ಚೀನಾದ ನಾಣ್ಯ ಪದ್ಧತಿಯ ಸಂಬಂಧ ಕಲ್ಪಿಸಿದ್ದರಿಂದ ಹೊಸ ಸರ್ಕಾರದ ಆರ್ಥಿಕ ಸ್ಥಿರತೆ ಮತ್ತು ಜನರ ಪ್ರಗತಿಗೆ ಸಹಾಯಕವಾಯಿತು. ಅನೇಕ ಹೊಸ ರಸ್ತೆಗಳನ್ನು ನಿರ್ಮಿಸಲಾಯಿತು ಮತ್ತು ರೈಲು ಮಾರ್ಗಗಳನ್ನು ವಿಸ್ತರಿಸಲಾಯಿತು. ಇವು ಸಂಚಾರದ ಉದ್ದೇಶಗಳಿಗೆ ಅತ್ಯಂತ ಉಪಯುಕ್ತವೆಂದು ದೃಢಪಟ್ಟಿತು ಮತ್ತು ಚೀನಾದೊಂದಿಗೆ ಯುದ್ಧದ ಕಾಲದಲ್ಲಿ ಜಪಾನಿಯರಿಗೆ ಸಹಾಯಕವಾದವು. ದೂರವಾಣಿ ಮತ್ತು ದೂರಸಂಪರ್ಕ ವ್ಯವಸ್ಥೆಗಳೂ ಅಭಿವೃದ್ಧಿ ಹೊಂದಿದವು. ಬಹುಬೇಗನೆ ಅದು ಜಪಾನಿಗೆ ಅತ್ಯಗತ್ಯವಾಗಿದ್ದ ಕಚ್ಚಾವಸ್ತುಗಳು ಮತ್ತು ಆಹಾರ ಪದಾರ್ಥಗಳನ್ನು ಪೂರೈಸುವ ಮತ್ತು ರಕ್ಷಿತ ಮಾರುಕಟ್ಟೆಯ ಅಗತ್ಯವನ್ನು ಒದಗಿಸುವ ಒಂದು ಉತ್ತಮ ವಸಾಹತುವಾಗಿ ಅಭಿವೃದ್ಧಿ ಹೊಂದಿತು. ಒಟ್ಟಿನಲ್ಲಿ ಮಂಚುಕೋ ಜಪಾನಿನ ಬೆಳೆಯುತ್ತಿದ್ದ ಕೈಗಾರಿಕಾ ಸಮಾಜದ ಅಗತ್ಯಗಳನ್ನು ಉತ್ತಮವಾಗಿ ಪೂರೈಸಿತು. ಆದರೆ ಜನರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸುವಾಗಿ ಜಪಾನ್ ಪ್ರತಿಯೊಂದು ಸೌಕರ್ಯದ ಸೈನಿಕ ಮೌಲ್ಯವನ್ನು ಖಚಿತಪಡಿಸಿತು. ಈ ರೀತಿಯಲ್ಲಿ ಆಡಳಿತದ ನಾಗರೀಕ ಅಂಶಗಳಿಗಿಂತಲೂ ಸೇನಾ ಅಂಶಗಳಿಗೆ ಒತ್ತು ನೀಡಲಾಯಿತು.

## 141.6 ಮಂಚೂರಿಯಾ ಬಿಕ್ಕಟ್ಟಿನ ಪರಿಣಾಮಗಳು

ರಷ್ಯಾದ ಆಕ್ರಮಣಗಳ ವಿರುದ್ಧ ರಕ್ಷಾ ಕವಚವಾಗಿ ವರ್ತಿಸುವ ಮತ್ತು ಚೀನಾಕ್ಕೆ ಬರುವ ರಷ್ಯಾದ ನೆರವನ್ನು ತಡೆಯಲು ಮಧ್ಯವರ್ತಿ ತಡೆ ರಾಜ್ಯಗಳನ್ನು ರಚಿಸುವ ದೃಷ್ಟಿಯಿಂದ ಜಪಾನ್ ಉತ್ತರ ಚೀನಾದ ಮೇಲೆ ತನ್ನ ಹತೋಟಿಯನ್ನು ಸ್ಥಾಪಿಸಲು ಬಯಸಿತು. ಮಿಗಿಲಾಗಿ ಉತ್ತರದ ಪ್ರಾಂತಗಳು ಕೆಲಮಟ್ಟಿಗೆ ಜಪಾನಿನ ಆರ್ಥಿಕ ಸಂಕಷ್ಟಗಳನ್ನು ಪರಿಹರಿಸಲು ಜಪಾನಿನ ಬಂಡವಾಳದ ಹೂಡಿಕೆಗೆ ಲಾಭದಾಯಕ ಕ್ಷೇತ್ರಗಳನ್ನು ಒದಗಿಸುತ್ತಿದ್ದವು.

ವಿಚಿತ್ರವೆಂದರೆ ಜಪಾನಿಯರು ತಮ್ಮ ಮಂಚೂರಿಯಾ ದಂಡಯಾತ್ರೆಯನ್ನು ಎಂದಿಗೂ ಯುದ್ಧವೆಂದು ಪರಿಗಣಿಸಿರಲಿಲ್ಲ. ಬದಲಾಗಿ ಅವರು ಅದನ್ನು ಒಂದು ಸಣ್ಣ 'ಘಟನೆ' ಯೆಂದು ಕರೆದಿದ್ದರು. ಆದರೆ ಈ ಘಟನೆಯು ವಿಶೇಷವಾಗಿ ದೂರ ಪ್ರಾಚ್ಯದ ಇತಿಹಾಸದ ಮೇಲೆ ಮತ್ತು ಒಟ್ಟಾರೆ ಸಮಕಾಲೀನ ಪ್ರಪಂಚದ ಇತಿಹಾಸದ ಮೇಲೆ ಗಮನಾರ್ಹ ಪರಿಣಾಮವನ್ನು ಬೀರಿತು. ಅದು ಚೀನಾದ ರಾಷ್ಟ್ರೀಯವಾದಿಗಳು ಮತ್ತು ಕಮ್ಯುನಿಸ್ಟರಿಗೆ ಸಾಮಾನ್ಯ ವೇದಿಕೆಯನ್ನು ಒದಗಿಸಿತು. ಪರಿಣಾಮವಾಗಿ ಚೀನಾದ ಕಮ್ಯುನಿಸ್ಟರೊಂದಿಗೆ ಅದುವರೆಗೂ ಶತೃತ್ವದಿಂದಿದ್ದ ಚಿಯಾಂಗ್ ಕೈ ಷೆಕ್‌ನ ರಾಷ್ಟ್ರೀಯ ಸರ್ಕಾರವು ಈಗ ಅವರೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತು. ಹೀಗೆ ರಾಷ್ಟ್ರೀಯವಾದಿಗಳು ಮತ್ತು ಕಮ್ಯುನಿಸ್ಟರ ನಡುವೆ ಅನಿರೀಕ್ಷಿತ ಹೊಂದಾಣಿಕೆ ಏರ್ಪಟ್ಟಿತು. ಅಲ್ಲದೆ ಹೊಸ ಮಂಗೋಲಿಯಾದ ರಕ್ಷಣೆಯನ್ನು ಬಲಪಡಿಸುವ ಮೂಲಕ ಅದು ರಕ್ಷಣಾತ್ಮಕ ಕ್ರಮವನ್ನು ಕೈಗೊಂಡಿತು. ಮೂರನೆಯದಾಗಿ, ಅಧಿಕೃತವಾಗಿ ಅಮೆರಿಕ ರಾಷ್ಟ್ರಗಳ ಒಕ್ಕೂಟ ಸಂಘದ ಸದಸ್ಯತ್ವವನ್ನು ಹೊಂದಿಲ್ಲದಿದ್ದರೂ ಅದು ಭದ್ರತಾ ಸಮಿತಿಯ ಮಂಚೂರಿಯಾದ ಘಟನೆಯ ಮೇಲಿನ ಕಲಾಪಗಳಲ್ಲಿ ಭಾಗವಹಿಸಲು ಅವಕಾಶ ಪಡೆಯಿತು. ಮಂಚೂರಿಯಾ ವ್ಯಾಜ್ಯದಲ್ಲಿ ಅಮೆರಿಕ ರಾಷ್ಟ್ರಗಳ ಒಕ್ಕೂಟವನ್ನು ಹಿಂದಿನ ಬಾಗಿಲಿನಿಂದ ಪ್ರವೇಶಿಸುವ ಕಡೆಗೆ ಬಹುದೂರ ಹೋಗಿದ್ದಿತೆಂದು ಕೆಲವು ಜನರು ಅಭಿಪ್ರಾಯ ಪಟ್ಟಿದ್ದಾರೆ. ನಾಲ್ಕನೆಯದಾಗಿ, ಜಪಾನಿನ ಮಂಚೂರಿಯಾ ಸಾಹಸವು ರಾಷ್ಟ್ರಗಳ ಒಕ್ಕೂಟಕ್ಕೆ ಮೊದಲ ವಿನಾಶಕಾರಿ ಹೊಡೆತವನ್ನು ನೀಡಿತು ಮತ್ತು ಅದರ ಬೆಂಬಲಿಗರನ್ನು ಭ್ರಮನಿರಸನಗೊಳಿಸಿತು. ರಾಷ್ಟ್ರಗಳ ಒಕ್ಕೂಟದ ಎಲ್ಲಾ ಪ್ರಯತ್ನಗಳೂ ಜಪಾನಿನ ಮೇಲೆ ಪರಿಣಾಮವನ್ನು ಬೀರಲಿಲ್ಲ. ಅದು ಮಂಚೂರಿಯ ಮತ್ತು ಮಂಚುಕೊಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು. ಮಂಚುಕೋ ರಾಜ್ಯದ ರಚನೆಯು ಅಮೆರಿಕಾದ ಮಾನ್ಯತೆ ನಿರಾಕರಣೆಯ ನೀತಿಯನ್ನು ನಿಷ್ಕ್ರಿಯಗೊಳಿಸಿ ಇತರ ರಾಜ್ಯಗಳೊಂದಿಗೆ ಎಲ್ಲಾ ಪ್ರಾಯೋಗಿಕ ಅನುಕೂಲಗಳನ್ನು ಅನುಭವಿಸುವಂತಾಯಿತು. ಅಂತಿಮವಾಗಿ ಪೂರ್ವ ಏಷ್ಯಾದಲ್ಲಿ ಅದು ಹೊಸ ವ್ಯವಸ್ಥೆಯನ್ನು ಆರಂಭಿಸಿತು. ಜಪಾನಿನ ಸಾಮಾನ್ಯ ಬೆದರಿಕೆಯ ಎದುರು ಅವುಗಳನ್ನು ಸುಲಭವಾಗಿ ಅನುಷ್ಠಾನಕ್ಕೆ ತರಬಹುದಾಗಿದ್ದಿತು. ಮಂಚೂರಿಯಾದಲ್ಲಿ ಜಪಾನಿನ ಆಕ್ರಮಣಕಾರಿ ನೀತಿಯು ಚೀನಾದ ಜನರಲ್ಲಿ ರಾಷ್ಟ್ರೀಯ ಚೇತನವನ್ನು ಪ್ರಚೋದಿಸಿತು. ಅವರು ತಾತ್ಕಾಲಿಕವಾಗಿ ತಮ್ಮ ಸೈದ್ಧಾಂತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಜಪಾನ್ 1937 ರಲ್ಲಿ ಪೂರ್ಣಪ್ರಮಾಣದ ದಾಳಿಯನ್ನು ಆರಂಭಿಸಿದಾಗ ದಂಘಟಿತ ಹೋರಾಟವನ್ನು ನೀಡಿದರು. ಜಪಾನ್ ತನ್ನ ಮಂಚೂರಿಯಾ ಆಕ್ರಮಣದಿಂದ ಬಹುತೇಕ ಪ್ರಬಲ ರಾಷ್ಟ್ರಗಳ ವೈಮನಸ್ಯವನ್ನು ಕಟ್ಟಿಕೊಳ್ಳಬೇಕಾಯಿತು.

ಅದರ ಮಂಚುಕೋ ಆಕ್ರಮಣದಿಂದ ಚೀನಾದೊಂದಿಗೆ ಜಪಾನಿನ ಸಂಬಂಧಗಳು ಮತ್ತಷ್ಟು ಹದಗೆಟ್ಟವು. ಅದು ಉತ್ತರ ಮಂಚೂರಿಯಾದಲ್ಲಿ ರಷ್ಯದ ಸ್ಥಾನಕ್ಕೆ ಬೆದರಿಕೆಯೊಡ್ಡಿತು. ಇದು ಅವುಗಳ ನಡುವಿನ ಗಡಿಯುದ್ಧಕ್ಕೂ ಮತ್ತು ಅಮುರ್ ನದಿ ಪ್ರದೇಶ ಮತ್ತು ಹೊರ ಮಂಗೋಲಿಯದಲ್ಲಿ ಮಂಚುಕೋ ಮತ್ತು ರಷ್ಯಾದ ರಕ್ಷಿತ ಪ್ರದೇಶದಲ್ಲಿ ಆಗಿಂದಾಗ್ಗೆ ಘರ್ಷಣೆಗೆ ಕಾರಣವಾಯಿತು. ಉತ್ತರ ಮಂಚೂರಿಯಾದಲ್ಲಿ ತನ್ನ ಹಿತಾಸಕ್ತಿಗಳಿಗೆ ಅಪಾಯವುಂಟಾದಾಗ ರಷ್ಯ ತನ್ನ ಗಮನವನ್ನು ಪೆಸಿಫಿಕ್ ಪ್ರದೇಶಕ್ಕೆ ಬದಲಾಯಿತು. ವಾಷಿಂಗ್ಟನ್ ಸಮ್ಮೇಳನದಲ್ಲಿ ಏರ್ಪಡಿಸಲಾಗಿದ್ದ ಸಮತೋಲನವನ್ನು ಬೆಳೆಸಿಕೊಳ್ಳಲು ಅದು ಪ್ರಯತ್ನಿಸಿದಾಗ ಅದನ್ನು ನಿರ್ದಯವಾಗಿ ನಾಶಪಡಿಸಲಾಯಿತು ಮತ್ತು ಒಂಭತ್ತು ರಾಷ್ಟ್ರಗಳ ಒಪ್ಪಂದ , ರಾಷ್ಟ್ರಗಳ ಒಕ್ಕೂಟ ಸಂಘದ ಪ್ರಣಾಳಿಕೆ ಮತ್ತು ಪ್ಯಾರಿಸ್ ಒಪ್ಪಂದಗಳನ್ನು ಗಾಳಿಗೆ ತೂರಲಾಯಿತು. ಹೀಗೆ ಮಂಚೂರಿಯಾ ಘಟನೆಯು ಸಾಮೂಹಿಕ ರಕ್ಷಣೆಯ ನಿರಾಶೆಯ ಪರೀಕ್ಷೆಯಾಗಿತ್ತು.

## 141.7 ಮುಕ್ತಾಯ

ಈ ಘಟಕದಲ್ಲಿ ನೀವು ಚೀನಾ-ಜಪಾನ್ ಸಂಬಂಧಗಳು ಮತ್ತು 1931 ರ ಮಂಚೂರಿಯಾ ಘಟನೆಯ ಬಗ್ಗೆ ತಿಳಿದುಕೊಂಡಿರಿ. ಜಪಾನ್ ಮಂಚೂರಿಯಾವನ್ನು ಆಕ್ರಮಿಸಿಕೊಂಡಾಗ, ಆಕ್ರಮಣವನ್ನು ತಡೆಯುವಂತೆ ಚೀನ ರಾಷ್ಟ್ರಗಳ ಒಕ್ಕೂಟ ಸಂಘಟಕ್ಕೆ ಮನವಿ ಮಾಡಿಕೊಂಡಿತು. ಆದಾಗ್ಯೂ ಜಪಾನ್ ತಾನು ಪೋಲೀಸ್ ಕ್ರಮವನ್ನು ಕೈಗೊಂಡುದುದಾಗಿ ಸಮರ್ಥಿಸಿಕೊಂಡಿತು. ಆದರೆ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುತ್ತಿದ್ದಂತೆ ಜಪಾನ್ ಮಂಚೂರಿಯಾದಿಂದ ನಿರ್ಗಮಿಸುವುದಾಗಿ ನಿರ್ಣಯವನ್ನು ಅಂಗೀಕರಿಸಿತು. ಆದರೆ ಜಪಾನ್ ನಿರ್ಣಯವನ್ನು ಅನುಮೋದಿಸಲಿಲ್ಲ. ಒಕ್ಕೂಟ ಸಂಸ್ಥೆಯು ಘಟನೆಯ ಬಗ್ಗೆ ವರದಿ ನೀಡಲು ಸ್ಥಳಕ್ಕೆ ಆಯೋಗವೊಂದನ್ನು ಕಳುಹಿಸಲು ನಿರ್ಧರಿಸಿತು. ಒಕ್ಕೂಟ ಸಂಸ್ಥೆಯು ಕಳುಹಿಸಿದ ಆಯೋಗವು ಮಂಚೂರಾಯಾದಲ್ಲಿ ಜಪಾನ್ ಆಕ್ರಮಣಕಾರನೆಂದು ಮೃದು ಮಾತಿನಲ್ಲೇ ವರದಿ ನೀಡಿತು ಮತ್ತು ಅಲ್ಲಿ ಚೀನಾದ ಪ್ರಾದೇಶಿಕ ಸಮಗ್ರತೆಯನ್ನು ರಕ್ಷಿಸುವ ಸರ್ಕಾರವನ್ನು ಸ್ಥಾಪಿಸುವಂತೆ ಸೂಚಿಸಿತು. ಒಕ್ಕೂಟ ಸಂಘವು ಜಪಾನನ್ನು ಆಕ್ರಮಣಕಾರನೆಂದು ಹೆಸರಿಸದೆ ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳುವಂತೆ ಮನವಿ ಮಾಡಿಕೊಂಡಿತು. ಜಪಾನ್ ಒಕ್ಕೂಟ ಸಂಘದಿಂದ ನಿರ್ಗಮಿಸುವ ತನ್ನ ಉದ್ದೇಶಗಳ ಬಗ್ಗೆ ಒಕ್ಕೂಟ ಸಂಘಕ್ಕೆ ತಿಳುವಳಿಕೆ ಪತ್ರವನ್ನು ಕಳುಹಿಸಿತು ಎಂಬುದನ್ನೂ ನೀವು ತಿಳಿದುಕೊಂಡಿರಿ.

ಈ ಘಟಕದಲ್ಲಿ ಕಲಿತ ಮತ್ತೊಂದು ಅಂಶವೆಂದರೆ ಫೆಬ್ರವರಿ, 18, 1932 ರಂದು ಜಪಾನ್ ಮಂಚುಕೋ ಎಂಬ ಹೊಸ ರಾಜ್ಯದ ರಚನೆಯನ್ನು ಪ್ರಕಟಿಸಿತು. ಆ ರಾಜ್ಯದ ಮೂಲಕ ಜಪಾನ್ ಮಂಚೂರಿಯಾದ ಮೇಲೆ ತನ್ನ ಹತೋಟಿಯನ್ನು ಉಳಿಸಿಕೊಂಡಿತು. ಜಪಾನಿನ ಆಕ್ರಮಣವನ್ನು ತಡೆಯಲು ಸಾಧ್ಯವಾಗದಿದ್ದುದರಿಂದ ರಾಷ್ಟ್ರಗಳ ಒಕ್ಕೂಟ ಸಂಘದ ಘನತೆ ಕುಸಿಯಿತು. ರಾಷ್ಟ್ರಗಳ ಒಕ್ಕೂಟ ಸಂಘವು ಬಲಪ್ರಯೋಗ ಅಥವಾ ನಿರ್ಬಂಧಗಳನ್ನು ವಿಧಿಸಲು ಸಾಧ್ಯವಾಗಲಿಲ್ಲವೆಂಬುದನ್ನು ನೀವು ಅರ್ಥಮಾಡಿಕೊಂಡಿರಿ. ದೂರ ಪ್ರಾಚ್ಯದಲ್ಲಿ ಶಾಂತಿಯನ್ನು ರಕ್ಷಿಸಲು ಬೃಹತ್ ರಾಷ್ಟ್ರಗಳು ಈ ತಿಕ್ಕಾಟದಲ್ಲಿ ಭಾಗವಹಿಸಲು ಸಿದ್ಧವಿರಲಿಲ್ಲ.

## 141.8 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

*I* ***ಇವುಗಳಲ್ಲಿ ಪ್ರತಿಯೊಂದಕ್ಕೂ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.***

1. 21 ಬೇಡಿಕೆಗಳು
2. ಮಂಚುಕೋ
3. ಚಿಯಾಂಗ್ ಸೆತ್-ಲಿಯಾಂಗ್
4. ಜನರಲ್ ಹೊನ್ಜೊ
5. ಹೀನ್‌ಕಿಂಗ್

*II ಇವುಗಳಲ್ಲಿ ಪ್ರತಿಯೊಂದಕ್ಕೂ ಹದಿನೈದು ಅಥವಾ ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿ.*

1. 1931 ರವರೆಗೆ ಚೀನಾ ಮತ್ತು ಜಪಾನ್‌ಗಳ ನಡುವಿನ ಸಂಬಂಧಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.
2. ಮಂಚೂರಿಯಾದಲ್ಲಿ ತನ್ನ ಸ್ಥಾನವನ್ನು ಬಲಪಡಿಸಲು ಚೀನಾ ಕೈಗೊಂಡ ಕ್ರಮಗಳನ್ನು ಚರ್ಚಿಸಿ.
3. ಮಂಚುಕೋದ ಪ್ರಗತಿಯನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

## 141.9 ಕೆಲವು ಉಪಯುಕ್ತ ಪುಸ್ತಕಗಳು


1. Harrison .G.M. : China since 1880
2. Dawson Raymond : Imperial China
3. Li Chien-Nung : The Political History of China
4. Bechman G.M. : Modernisation of China
5. Hawn Emily : China only Yesterday

ಟಿಪ್ಪಣಿ

# ಘಟಕ - 142

## ಎರಡನೇ ಮಹಾಯುದ್ಧದ ಕಾಲದ ಚೀನ

*ರಚನೆ*

142.0 ಉದ್ದೇಶಗಳು

142.1 ಪೀಠಿಕೆ

142.2 ಚೀನಾ ಯುದ್ಧವನ್ನು ಪ್ರವೇಶಿಸಲು ಕಾರಣವಾದ ಸನ್ನಿವೇಶಗಳು

142.3 ಎರಡನೇ ಮಹಾಯುದ್ಧವನ್ನು ಸೇರಿದ ಚೀನ

142.3.1 ಬಿರುಗಾಳಿಯಲ್ಲಿ ಚೀನ

142.3.2 ಚೀನಾದ ಅಧೋಗತಿ

142.3.3 ಯುದ್ಧದ ಪರಿಣಾಮಗಳು

142.4 ಯುದ್ಧದ ಪರಿಣಾಮಗಳು

142.5 ಮುಕ್ತಾಯ

142.6 ನಿಮ್ಮ ಪ್ರಗತಿಯನ್ನು ಪರೀಕ್ಷಿಸಲು ಉತ್ತರಗಳು

142.7 ಕೆಲವು ಉಪಯುಕ್ತ ಗ್ರಂಥಗಳು

## 142.0 ಉದ್ದೇಶಗಳು

ಈ ಘಟಕದಲ್ಲಿ ನಾವು ಚೀನಾ ಯುದ್ಧವನ್ನು ಪ್ರವೇಶಿಸಲು ಕಾರಣವಾದ ಸನ್ನಿವೇಶಗಳ ಮಹತ್ವವನ್ನು ವಿವರಿಸಿದ್ದೇವೆ. 1941ರಲ್ಲಿ ಪರ್ಲ್ ಹಾರ್ಬರನ ಮೇಲೆ ಜಪಾನಿನ ಹಠಾತ್ ದಾಳಿಯವರೆಗೆ ಮುಂದುವರಿದ ಯುದ್ಧವು ಎರಡನೇ ಮಹಾಯುದ್ಧದಲ್ಲಿ ವಿಲೀನವಾಯಿತು. ಎರಡು ಅಣು ಬಾಂಬುಗಳನ್ನು ಹಾಕಿದಾಗ ಮತ್ತು ರಷ್ಯಾದ ಆಕ್ರಮಣಗಳು 1945ರಲ್ಲಿ ಜಪಾನ್ ಬೇಷರತ್ತಾಗಿ ಶರಣಾಗುವಂತೆ ಮಾಡಿದಾಗಲೂ ಚೀನಾದ ಹೆಚ್ಚಿನ ಭಾಗಗಳು ಇನ್ನೂ ಜಪಾನಿನ ಹತೋಟಿಯಲ್ಲಿಯೇ ಇದ್ದವು. ಜಪಾನ್ ಚೀನಾದ ಮುಖ್ಯ ಭೂಮಿಯಿಂದ ನಿರ್ಗಮಿಸಬೇಕಾಯಿತು ಮತ್ತು ಕಳೆದ ಐವತ್ತು ವರ್ಷಗಳಿಂದ ಜಪಾನಿಯರು ಆಕ್ರಮಿಸಿಕೊಂಡಿದ್ದ ಎಲ್ಲಾ ಪ್ರದೇಶಗಳನ್ನು ಚೀನಾಕ್ಕೆ ಹಿಂದಿರುಗಿಸಬೇಕಾಯಿತು ಮತ್ತು ಚೀನ ಸ್ವತಂತ್ರವಾಯಿತು. ಕೆಲವು ಇತಿಹಾಸಕಾರರು ಚೀನಾದ ಪ್ರದೇಶಗಳನ್ನು ಹಿಂದುರುಗಿಸಿದುದನ್ನು ಪ್ರಾತಿನಿಧ್ಯದ ಮೂಲಕ ವಿಜಯವೆಂದು ವರ್ಣಿಸಿದ್ದಾರೆ. ಚೀನಿಯರು ಜಪಾನಿಯರನ್ನು ಹೊರಗಟ್ಟಲಿಲ್ಲ ಬದಲಾಗಿ ಅಮೇರಿಕ ಮತ್ತು ರಷ್ಯಾಗಳ ವಿಜಯಗಳಿಂದ ಅವರು ನಿರ್ಗಮಿಸಬೇಕಾಯಿತು.

## 142.1 ಪೀಠಿಕೆ

1941ರಲ್ಲಿ ಪರ್ಲ್ ಹಾರ್ಬರನ್ ಮೇಲೆ ಜಪಾನಿನ ದಾಳಿಯೊಂದಿಗೆ ಚೀನ-ಜಪಾನ್ ಯುದ್ಧ ಹೊಸ ಹಂತವನ್ನು ಪ್ರವೇಶಿಸಿತು ಮತ್ತು ವಿಶ್ವಸಮರದಲ್ಲಿ ಸೇರಿಕೊಂಡಿತು. ಜಪಾನ್ ಈಗಾಗಲೇ ಚೀನಾದ ಕರಾವಳಿಯ ಬಹು ಭಾಗವನ್ನು ಆಕ್ರಮಿಸಿತ್ತು. ಪೂರ್ವ ಮತ್ತು ಆಗ್ನೇಯ ಏಷ್ಯಾಗಳಲ್ಲಿ ಮಿತ್ರ ರಾಷ್ಟ್ರಗಳ ವಶದಲ್ಲಿದ್ದ ಪ್ರದೇಶಗಳನ್ನು ಆಕ್ರಮಿಸುವಲ್ಲಿ ತನ್ನ ಮೊದಲ ವಿಜಯವು ಪಾಶ್ಚಿಮಾತ್ಯ ಪ್ರಪಂಚದೊಂದಿಗೆ ಚೀನಾದ ಸಂಪರ್ಕವನ್ನು ಕಡಿದು ಹಾಕಿತು. ಹೀಗೆ ಚೀನಾದ ಪರಿಸ್ಥಿತಿ ಅತ್ಯಂತ ಗಂಭೀರವಾಗಿದ್ದು, ಜಪಾನ್ ಚೀನಾಕ್ಕೆ ಯಾವುದೇ ನೆರವು ತಲುಪದಂತೆ ತಡೆಯುವ ಸ್ಥಿತಿಯಲ್ಲಿತ್ತು. ಚಿಯಾಂಗ್ ಕೈ ಶೈಕನನ್ನು ಬಹು ಬೇಗನೆ ಹಿಂದಕ್ಕೆ ತಳ್ಳಲಾಯಿತು ಮತ್ತು ಚುಂಕಿಂಗ್‌ನಲ್ಲಿ ಆಶ್ರಯವನ್ನು ಪಡೆಯುವಂತೆ ಉಚ್ಚಾಟಿಸಲಾಯಿತು. ಚಿಯುಂಗನು ತನ್ನ ಸರ್ಕಾರದ ಕೇಂದ್ರವನ್ನು ಚುಕಿಂಗ್‌ಗೆ ವರ್ಗಾಯಿಸಿದನು. ಆದರೆ ಮಿತ್ರ ಪಕ್ಷದ ರಾಷ್ಟ್ರಗಳಿಗೆ ಚೀನಿಯರಿಗೆ ಸೇನಾ ನೆರವನ್ನು ಒದಗಿಸುವುದು ಅತ್ಯಗತ್ಯವಾಯಿತು. ಇದರಿಂದ ಚೀನಿಯರು ತಮ್ಮ ಪ್ರತಿರೋಧವನ್ನು ಮುಂದುವರಿಸಲು ಸಾಧ್ಯವಾಗುವಂತಾಗಬೇಕಿದ್ದಿತು. ಜಪಾನಿನ ಪೂರೈಕೆಯ ಮಾರ್ಗಗಳ ವಿರುದ್ಧದ ಕಾರ್ಯಾಚರಣೆಯ ಮತ್ತು ಜಪಾನಿನ ಮುಖ್ಯ ದ್ವೀಪಗಳ ಮೇಲೆ ದೂರಗಾಮಿ ಬಾಂಬ್ ದಾಳಿಯ ನೆಲೆಯಾಗಿ ಚೀನಾ ಅನುಪಯುಕ್ತವಾಗಿತ್ತು. ಆದ್ದರಿಂದ ಚೀನಾ ಮತ್ತು ಮುಕ್ತ ಚೀನಾಗಳ ನಡುವೆ ಹಿಮಾಲಯದ ದಿಣ್ಣೆ ಮತ್ತು ಎತ್ತರವಾದ ಹಾಗೂ ಉದ್ದನೆಯ ಪರ್ವತ ತಡೆಗೋಡೆಗಳ ಮೇಲೆ ವಿಮಾನ ಸರಬರಾಜಿನ ಮೂಲಕ ಚುಂಕಿಂಗ್‌ನ ರಾಷ್ಟ್ರೀಯ ಸರ್ಕಾರಕ್ಕೆ ನೆರವನ್ನು ನೀಡುವ ಹತಾಶ ಪ್ರಯತ್ನಗಳನ್ನು ಮಾಡಲಾಯಿತು. ಅವರನ್ನು ಮಹಾ ವೈರುದ್ಧಗಳಿಗೆ ಒಳಪಡಿಸಿದಾಗಲೂ ಚೀನಿಯರು ಪ್ರತಿರೋದವನ್ನು ಮುಂದುವರಿಸಿದರು ಮತ್ತು ಅವರ ನೈತಿಕ ಸ್ಥೈರ್ಯವನ್ನು ಮುರಿಯಲು ಜಪಾನೀಯರು ವಿಫಲರಾದರು.

ಅಮೆರಿಕಾ ಮತ್ತು ಬ್ರಿಟನ್‌ಗಳು ಚೀನಾದೊಂದಿಗೆ ತಮ್ಮ ಪ್ರದೇಶದಾಚೆಗಿನ ಹಕ್ಕುಗಳು ಮತ್ತು ವಿಶೇಷ ಸವಲತ್ತುಗಳನ್ನು ರದ್ದು ಪಡಿಸುವ ಒಪ್ಪಂದಗಳನ್ನು ಮಾಡಿಕೊಂಡವು. ಹೀಗೆ ಬೃಹತ್ ರಾಷ್ಟ್ರಗಳು, ಚೀನಾವನ್ನು ಒಪ್ಪಂದದ ಸಂಬಂಧಗಳಿಗೆ ಸಂಬಂಧಿಸಿದಂತೆ ಸಮಾನವಾಗಿ ಪರಿಗಣಿಸಿದವು. ಸಮಾನತೆಯ ತತ್ವವು ಚೀನಾಕ್ಕೆ ಬೃಹತ್ ರಾಷ್ಟ್ರದ ಸ್ಥಾನವನ್ನು ನೀಡಿತು ಮತ್ತು ಅಂತಿಮವಾಗಿ ನಾಲ್ಕು ಪ್ರಮುಖ ರಾಷ್ಟ್ರಗಳಾದ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾಗಳಂತೆ ವಿಟೋ ಅಧಿಕಾರದೊಂದಿಗೆ ಭದ್ರತಾ ಸಮಿತಿಯಲ್ಲಿ ಖಾಯಂ ಸ್ಥಾನವನ್ನು ಪಡೆಯಿತು. 1943ರಲ್ಲಿ ನಡೆದ ಕೈರೋ ಸಮ್ಮೇಳನದಲ್ಲಿ ಜಪಾನ್ ಸೋತ ಪಕ್ಷದಲ್ಲಿ ಅದರ ಮೇಲೆ ವಿಧಿಸಬಹುದಾದ ಷರತ್ತುಗಳನ್ನು ನಿರ್ಧರಿಸಲು ಚಿಯಾಂಗ್ ಕೈ ಷೆಕನು ಚರ್ಚಿಲ್ ಮತ್ತು ಅಧ್ಯಕ್ಷ ರೂಸ್‌ವೆಲ್ಟರ್ ಪಕ್ಕದಲ್ಲಿ ಕುಳಿತನು. ಇದು ಚೀನಾದ ರಾಷ್ಟ್ರೀಯ ಸರ್ಕಾರಕ್ಕೆ ಹೆಚ್ಚಿನ ಗೌರವವನ್ನು ತಂದುಕೊಟ್ಟಿತು. ಅಲ್ಲದೆ ಯುದ್ಧದ ಕಾಲದಲ್ಲಿ ಮೂಲ್ಯ

ಟೆಹರಾನ್ ಮತ್ತು ಮಾಸ್ಕೋದಲ್ಲಿ ನಡೆದ ಎಲ್ಲಾ ಸಮ್ಮೇಳನಗಳಲ್ಲಿ ಚೀನಾಕ್ಕೆ ಪ್ರಧಾನ ಸ್ಥಾನವನ್ನು ನೀಡಲಾಯಿತು. ಮೊಟ್ಟ ಮೊದಲ ಬಾರಿಗೆ ಚೀನ ಸ್ವತಂತ್ರ ರಾಷ್ಟ್ರವಾಯಿತು. ರಾಷ್ಟ್ರೀಯ ಸರ್ಕಾರಕ್ಕೆ ಬ್ರಿಟನ್ ಮತ್ತು ಅಮೆರಿಕಾಗಳ ಸಂಪೂರ್ಣ ಬೆಂಬಲವಿದ್ದು, ಯುದ್ಧದ ನಂತರ ಏಷ್ಯಾವನ್ನು ಸಂಪೂರ್ಣ ಸಾರ್ವಭೌಮ ಸ್ವತಂತ್ರ ಮತ್ತು ಚೀನಾದ ಸುತ್ತ ನಿರ್ಮಿಸಬೇಕಾಗಿದ್ದಿತು.

## 142.2 ಚೀನಾ ಯುದ್ಧವನ್ನು ಪ್ರವೇಶಿಸಲು ಕಾರಣವಾದ ಸನ್ನಿವೇಶಗಳು

ಜುಲೈ 7, 1937ರಲ್ಲಿ ಪೀಕಿಂಗ್‌ಗೆ ಸಮೀಪದ ಮಾರ್ಕೊಪೋಲೋ ಸೇತುವೆಯ ಮೇಲೆ ಜಪಾನಿನ ದಾಳಿಯು ಚೀನಾ ಮತ್ತು ಜಪಾನ್‌ಗಳ ನಡುವೆ ಘರ್ಷಣೆಯ ಆರಂಭದ ಬಿಂದುವಾಗಿತ್ತು. ಚೀನಾದ ರಕ್ಷಣಾ ಪಡೆ ಮತ್ತು ಜಪಾನಿನ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆಯಿತು. ಒಂದು ಗಂಭೀರ ಸನ್ನಿವೇಶವುಂಟಾಯಿತು. ಘರ್ಷಣೆಯನ್ನು ನಿಲ್ಲಿಸುವ ಪ್ರಯತ್ನಗಳು ನಡೆದವು. ನಂತರ ನಡೆದ ಮಾತುಕತೆಗಳಲ್ಲಿ ಚೀನ ಸರ್ಕಾರವು ಉತ್ತರ ಚೀನಾವನ್ನು ಬಿಟ್ಟುಕೊಡುವ ನಿರ್ಣಾಯಕ ಅಂಶವನ್ನು ಹೊರತುಪಡಿಸಿ ಕೆಲವು ರಿಯಾಯಿತಿಗಳನ್ನು ನೀಡಲು ಸಾಧ್ಯವಿದ್ದಿತು. ಆದರೆ ಉತ್ತರ ಚೀನಾದ ವಶ ಮತ್ತು ಹತೋಟಿ ಜಪಾನಿನ ಪ್ರಮುಖ ಧ್ಯೇಯವಾಗಿತ್ತು. ಪರಿಣಾಮವಾಗಿ ಮಾತುಕತೆಗಳು ವಿಫಲವಾದವು. ಹೊಪೀಗೆ (ಹುಪೈ) ಜಪಾನಿನ ಪಡೆಗಳನ್ನು ರವಾನಿಸಲಾಯಿತು. ಸಂತೈಕೆಯ ಸಮಯ ಮೂಡಿದೆಯೆಂದು ನಂಬಿದ ರಾಷ್ಟ್ರೀಯ ಸರ್ಕಾರ ತಾನೂ ಸಹ ಹುಪೆಗೆ ಹೆಚ್ಚುವರಿ ಪಡೆಗಳನ್ನು ಕಳುಹಿಸಿತು. ಜುಲೈ, 27 ರಂದು ಜಪಾನಿಯರು ಪೀಕಿಂಗನ್ನು ವಶಪಡಿಸಿಕೊಂಡರು. ಅವರು ಚಹಾರ್, ಸೂಮಿಯುವಾನ್ ಮತ್ತು ಷನ್ಸಿಗಳ ಕಡೆಗೆ ಮುನ್ನುಗ್ಗಿದರು. ಷನ್ಸಿಯಲ್ಲಿ ಜಪಾನಿಯರು ಕಮ್ಯುನಿಷ್ಟರನ್ನು ಎದುರಿಸಿದರು. ಕಮ್ಯುನಿಸ್ಟ್ ಪಡೆಗಳು ಪ್ರಬಲ ಪ್ರತಿರೋಧವನ್ನು ನೀಡಿದವು ಮತ್ತು ಷನ್ಸಿಯ ಹೆಚ್ಚಿನ ಭಾಗ ಆಕ್ರಮಣಕಾರರ ಕೈ ಸೇರದಂತೆ ಉಳಿಸಿಕೊಂಡರು.

ಮಂಚೂರಿಯದಲ್ಲಿ ಮಾಡಿದಂತೆಯೇ ಜಪಾನಿಯರು ತಮ್ಮ ಹೋರಾಟವನ್ನು ಉತ್ತರಕ್ಕೆ ಸೀಮಿತಗೊಳಿಸಲು ಮತ್ತು ಆ ಪ್ರದೇಶವನ್ನು ಚೀನಾದೊಂದಿಗೆ ಯಾವುದೇ ಯುದ್ಧವಿಲ್ಲದೆ ತಮ್ಮ ಹತೋಟಿಗೆ ಒಳಪಡಿಸುವ ನಿರೀಕ್ಷೆಯನ್ನು ಹೊಂದಿದ್ದರು. ಯುಂಗಿಟ್ಸ ಕಣಿವೆಯ ಅನೇಕ ಪಟ್ಟಣಗಳಲ್ಲಿ ಚೀನಿಯರ ಗುಂಪುಗಳು ಜಪಾನಿಯರ ಮೇಲೆ ದಾಳಿ ಮಾಡಿದವು. ಅನೇಕ ಜಪಾನಿ ರಾಯಭಾರ ಕಛೇರಿಗಳನ್ನು ಮುಚ್ಚಲಾಯಿತು. ಜಪಾನಿನ ಪ್ರಜೆಗಳನ್ನು ತೆರವುಗೊಳಿಸಲಾಯಿತು ಮತ್ತು ಜಪಾನಿನ ಹಿತಾಸಕ್ತಿಗಳನ್ನು ರಕ್ಷಿಸಲು ಬಹುದೊಡ್ಡ ಯುದ್ಧ ನೌಕೆಗಳು ಮತ್ತು ಸೇನಾ ಪಡೆಗಳ ತುಕಡಿಗಳನ್ನು ಕಳುಹಿಸಲಾಯಿತು. ಷಂಘೈನಲ್ಲಿ ಮತ್ತು ಸುತ್ತಮುತ್ತ ಕದನ ಆರಂಭವಾಯಿತು. ಚೀನಿಯರು ರಕ್ಷಣೆಗಾಗಿ ತಮ್ಮ ಅತ್ಯುತ್ತಮ ಪಡೆಗಳ ಮತ್ತು ವಿರಳವಾಗಿದ್ದ ವಾಯುಪಡೆಯನ್ನು ಕಳುಹಿಸಿದರು. ಜಪಾನಿನ ವಿರುದ್ಧ ಭೂಮಿ, ಜಲ ಮತ್ತು ವಾಯು ಪ್ರದೇಶಗಳಲ್ಲಿ ಕಳುಹಿಸಿದರು. ಜಪಾನಿನ ವಿರುದ್ಧ ಭೂಮಿ, ಜಲ ಮತ್ತು ವಾಯು ಪ್ರದೇಶಗಳಲ್ಲಿ ಶ್ರೇಷ್ಠ ದರ್ಜೆಯ ಫಿರಂಗ ಪಡೆಯ ಸಹಾಯದಿಂದ ಚೀನಾದ ಪಡೆಗಳು ಮೂರು ತಿಂಗಳ ಕಾಲ ಎದುರಿಸಿ ನಿಂತಿದ್ದು ಚೀನಿಯರ ನೈತಿಕ ಬಲವನ್ನು ಹೆಚ್ಚಿಸಿತು. ಆದರೆ ಆಕ್ರಮಣಕಾರರು ಯಾಂತ್ರೀಕೃತ ಉಪಕರಣಗಳು, ವಿಮಾನಗಳು ಮತ್ತು ತರಬೇತಿ ಹೊಂದಿದ ಅಧಿಕಾರಿಗಳಿಂದಾಗಿ ಅತ್ಯುತ್ತಮವಾಗಿದ್ದುದು ಸ್ಪಷ್ಟವಾಗಿತ್ತು ಮತ್ತು ನಿರ್ವಿವಾಧಿತವಾಗಿ ಸಮುದ್ರದ ಮೇಲೆ ಹಿಡಿತವನ್ನು ಹೊಂದಿದ್ದು, ಚೀನಿಯರನ್ನು ಸುಲಭವಾಗಿ ಸೋಲಿಸುವಂತಿದ್ದುದರಿಂದ, ಚೀನಿಯರು ತಮ್ಮ ಬಿಗಿಯನ್ನು ಬಹಳ ಕಾಲ ಉಳಿಸಿಕೊಳ್ಳಲಾಗಲಿಲ್ಲ. ನವೆಂಬರ್, 1937ರ ಪ್ರಾರಂಭದಲ್ಲಿ ಚೀನಾದ ಹಿಮ್ಮೆಟ್ಟಿದ ಸೇನೆಗಳು ತಮ್ಮ ಎಲ್ಲಾ ಪಡೆಗಳನ್ನು ಕಳೆದುಕೊಂಡವು. ಡಿಸೆಂಬರ್‌ನಲ್ಲಿ ನಾನ್‌ಕಿಂಗ್ ಜಪಾನಿಯರ ವಶವಾದ ನಂತರ ಉಳಿದಿದ್ದವರೂ ಸ್ವಲ್ಪದರಲ್ಲಿ ಪಾರಾದರು. ಹೀಗೆ ಚೀನಿಯರು ಯುದ್ಧದಲ್ಲಿ ಸೋತರು ಮತ್ತು ಜಪಾನಿಯರು ಚೀನಾದ ಪ್ರಮುಖ ಸೇನೆಯನ್ನು ನಾಶ ಪಡಿಸುವ ತಮ್ಮ ಯುದ್ಧ ಕೌಶಲದ ಉದ್ದೇಶವನ್ನು ಸಾಧಿಸಲು ತೀರಾ ಹತ್ತಿರವಾದರು ನಾನ್‌ಕೆಂಗ್‌ನಲ್ಲಿ ಜಪಾನಿನ ಸೈನಿಕರು ನಿಯಂತ್ರಣವನ್ನು ಮೀರಿ ಕ್ರೂರವಾದ ಲೂಟಿ, ಕೊಲೆ ಮತ್ತು ಮಾನಭಂಗಗಳಲ್ಲಿ ತೊಡಗಿಸಿದರು. ಅವರು ತಾವು ವಶಪಡಿಸಿಕೊಂಡ ಇತರ ನಗರಗಳಲ್ಲಿ ವರ್ತಿಸಿದಂತೆಯೇ ಇಲ್ಲಿಯೂ ವರ್ತಿಸಿದರು. ಈ ದೌರ್ಜನ್ಯಗಳು ಚೀನೀಯರಲ್ಲಿ ಪ್ರತಿರೋದದ ಮನಸ್ಥೈರ್ಯವನ್ನು ಬಲಪಡಿಸಿದವು ಮತ್ತು ಚೀನಾದ

ಸೇನೆಗಳಿಗೆ ಪುನರ್ ಸಹಕಾರ ಮತ್ತು ಪುನರ್ ಸಂಘಟನೆಗೆ ಉಪಯುಕ್ತ ಸಮಯವನ್ನು ನೀಡಿದವು. ನಂತರ ಚೀನಿಯರ ಪ್ರಸಿದ್ಧವಾದ ಹಿನ್ನಡೆ ಪ್ರಾರಂಭವಾಯಿತು. ಅವರು ಪಶ್ಚಿಮಾಭಿಮುಖವಾಗಿ ಹ್ಯಾಂಕೋಗೆ ಹೋದರು ನಂತರ ಅನೇಕ ತಿಂಗಳುಗಳ ನಂತರ ಚುಂಕಿಂಗ್ ತಲುಪಿದರು. ಯುದ್ಧವು ತಿಕ್ಕಾಟದ ಯುದ್ಧವಾಗಿ ಮಾರ್ಪಟ್ಟು, ಅದರಲ್ಲಿ ಜಪಾನಿಯರ ಉತ್ತರ ಮತ್ತು ಮಧ್ಯ ಚೀನಾದ ಬಯಲು ಪ್ರದೇಶಗಳು ಮತ್ತು ಕರಾವಳಿ ಪ್ರದೇಶಗಳನ್ನು ಹಿಡಿದುಕೊಂಡರು. ಜಪಾನಿಯರು ಹ್ಯಾಂಕೋವನ್ನು ವಶಪಡಿಸಿಕೊಂಡರು. ಕೆಲವು ತಿಂಗಳುಗಳ ನಂತರ ಜೂನ್ 1940ರಲ್ಲಿ ಯಾಂಗ್ಸಿ ಕಣಿವೆಯ ಇನ್ನೂ ಮೇಲ್ಭಾಗದಲ್ಲಿದ್ದ ಇಚಾಂಗನ್ನು ವಶಪಡಿಸಿಕೊಂಡರು. ಮಾರ್ಚ್, 1939ರಲ್ಲಿ ಜಪಾನಿಯರು ಕಿಂಗ್ಸಿಯ ರಾಜಧಾನಿ ನಾನ್-ಚೆಯಾಂಗನ್ನು ವಶಪಡಿಸಿಕೊಂಡರು. ನವೆಂಬರ್, 1939ರಲ್ಲಿ ಕ್ಯಾಂಟನ್‌ನ ನೇರುತ್ಯಕ್ಕಿದ್ದ ಬಂದರು ಪಟ್ಟಣ ಪಕೋಯ್‌ಯನ್ನು ಆಕ್ರಮಿಸಲಾಯಿತು. ನಂತರ ನಾನ್‌ಕಿಂಗ್ ಜಪಾನಿನ ವಶವಾಯಿತು. ವಾಯು ಪ್ರದೇಶದಿಂದ ಚೀನಿಯರನ್ನು ಓಡಿಸಿದ ನಂತರ ಜಪಾನಿಯರು ರಕ್ಷಣೆ ದೃಷ್ಟಿಯಿಂದ ಆಯಕಟ್ಟಿನ ಎಲ್ಲಾ ಪಟ್ಟಣಗಳ ಮೇಲೆ ಮನಸ್ಸಿಗೆ ಬಂದಂತೆ ಬಾಂಬುಗಳ ಮಳೆಗೆರೆದರು.

ಜಪಾನಿಯರು ಚೀನಾದಲ್ಲಿ ತಮ್ಮ ಸೈನಿಕ ಮತ್ತು ನೌಕಾ ಚಟುವಟಿಕೆಗಳನ್ನು ಆ ದೇಶದ ಮೇಲೆ ಯುದ್ಧವೆಂದು ಪರಿಗಣಿಸಲಿಲ್ಲ. ಚೀನಾವನ್ನು ದಮನಕಾರಿ ಮತ್ತು ಭ್ರಷ್ಟ ಆಳ್ವಿಕೆಯಿಂದ ಬಿಡುಗಡೆಗೊಳಿಸುತ್ತಿರುವ ಸಿದ್ಧಾಂತದ ಮೇಲೆ ಅವರು ತಮ್ಮ ಚಟುವಟಿಕೆಗಳನ್ನು ನಡೆಸಿದರು. ಮಾರ್ಚ್, 1940ರಲ್ಲಿ ಅವರು ನಾನ್‌ಕಿಂಗ್‌ನಲ್ಲಿ ಕೈಗೊಂಬೆ ಸರ್ಕಾರವನ್ನು ರಚಿಸಲು ಪ್ರಯತ್ನಿಸಿದರು. ನಾನ್‌ಕಿಂಗ್‌ಗೆ ರಾಷ್ಟ್ರೀಯ ಸರ್ಕಾರದ ವಪಸಾತಿಯನ್ನು ಅದ್ದೂರಿಯಾಗಿ ಆಚರಿಸಿದರು. ನಾನ್‌ಕಿಂಗ್‌ನ ಹೊಸ ಸರ್ಕಾರಕ್ಕೆ ಜಪಾನ್ ಮಾನ್ಯತೆ ನೀಡಿತು ಮತ್ತು ಅದರೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು ಅದರಂತೆ ಪರಸ್ಪರ ಸಾರ್ವಭೌಮಾಧಿಕಾರ ಮತ್ತು ಪ್ರದೇಶಗಳನ್ನು ಗೌರವಿಸಲು ಸಮ್ಮತಿಸಲಾಯಿತು. ವ್ಯಾಂಗನ ಸರ್ಕಾರವು ಮಂಚುಕೋ ರಾಜ್ಯವನ್ನು ಮಾನ್ಯ ಮೂಡಿತು ಮತ್ತು ಅದರೊಂದಿಗೆ ಒಂದು ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಚೀನಾ, ಮಂಚುಕೋ ಮತ್ತು ತನ್ನನ್ನು ಒಳಗೊಂಡ "ಸಹ-ಸಹಕಾರದ ವಲಯ"ವನ್ನು ರಚಿಸುವ ಭ್ರಮೆಯಿಂದ ಜಪಾನ್ ಆ ಪ್ರದೇಶದ ಆರ್ಥಿಕ ಸಂಘಟನೆಯನ್ನು ಆರಂಭಿಸಿತು. ಒಟ್ಟಿನಲ್ಲಿ, ಹೊಸ ಸರ್ಕಾರಗಳು ತನ್ನ ಇಷ್ಟಕ್ಕನು ಗುಣವಾಗಿರಬೇಕೆಂಬುದು ಜಪಾನಿನ ನೀತಿಯಾಗಿತ್ತು. ವ್ಯಾಂಗ್ ಚಿಂಗ್-ವೈ ಕನಿಕರ ಅವನು ಅನಾರೋಗ್ಯ ಪೀಡಿತನಾಗಿದ್ದು 1944ರಲ್ಲಿ ಸಾವಿನ ನಂತರ ಬಿಡಿಗಡೆಯಾದನು. ಸೀಮಿತ ಯಶಸ್ಸಿನ ಹೊರತಾಗಿಯೂ, ಜಪಾನಿಯರು ರಾಷ್ಟ್ರೀಯ ಸರ್ಕಾರದ ಪತನಕ್ಕೂ ಕಾರಣವಾಗಲಿಲ್ಲ, ಇಲ್ಲವೇ ಚೀನಿಯರ ಜನಪ್ರಿಯ ವಿರೋಧವನ್ನೂ ಎದುರಿಸಲಿಲ್ಲ ಮತ್ತು ಒಳಗೆ ಚೀನಾದ ಬಹು ಭಾಗವು ರಾಷ್ಟ್ರೀಯವಾದಿಗಳ ಹತೋಟಿಯಲ್ಲಿಯೇ ಉಳಿಯಿತು.

## 142.3 ಚೀನ ಎರಡನೇ ಮಹಾಯುದ್ಧವನ್ನು ಸೇರಿತು

ಸೆಪ್ಟೆಂಬರ್, 1939ರಲ್ಲಿ ಯುರೋಪಿನಲ್ಲಿ ಯುದ್ಧ ಆರಂಭವಾಯಿತು ಮತ್ತು ಬಹು ಬೇಗನೆ ಆ ಖಂಡದ ಬಹು ಭಾಗವನ್ನು ಆವರಿಸಿತು. ನಂತರ ಯುರೋಪಿನ ಯುದ್ಧವು ಬಹುಬೇಗನೆ ಏಷ್ಯಾದ ರಾಜಕೀಯವನ್ನು ಪ್ರವೇಶಿಸಿತು. 1940ರ ಮೇ ಮತ್ತು ಜೂನ್‌ನಲ್ಲಿ ಹಾಲೆಂಡ್, ಬೆಲ್ಜಿಯಂ ಮತ್ತು ಫ್ರಾನ್ಸ್‌ಗಳು ಜರ್ಮನಿಯ ಪಡೆಗಳಿಗೆ ಶರಣಾದವು ಮತ್ತು ಬ್ರಿಟನ್ ಯುದ್ಧ ಆರಂಭವಾಯಿತು. ಈ ಘಟನೆಗಳು ಜಪಾನಿಗೆ ಮುಕ್ತ ಅವಕಾಶವನ್ನು ನೀಡಿದವು. ಅದು ಬ್ರಿಟನ್ ಮತ್ತು ಫ್ರಾನ್ಸ್‌ಗಳ ಮೇಲೆ ಯುದ್ಧವನ್ನು ಘೋಷಿಸಿತು ಮತ್ತು ಆ ದೇಶಗಳು ಚೀನಾದಿಂದ ತಮ್ಮ ಪಡೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿತು. ಇಂಡೋ ಚೀನದಲ್ಲಿ ಫ್ರೆಂಚರು ಸಾಕಷ್ಟು ವಿರೋಧವನ್ನು ನೀಡಲಿಲ್ಲ. ಜಪಾನಿಯರು ವಿಚಿ ಆಡಳಿತದೊಂದಿಗೆ ಒಪ್ಪಂದ ಮಾಡಿಕೊಂಡು ಆ ಪ್ರದೇಶಕ್ಕೆ ಸೈನ್ಯವನ್ನು ಕಳುಹಿಸಲು ಅನುಮತಿಯನ್ನು ಪಡೆದರು. ಇದರಿಂದ ಅವರಿಗೆ ಚೀನಾದ ಆಕ್ರಮಿಸದಿದ್ದ ಭಾಗಕ್ಕೆ ಮತ್ತೊಂದು ಮಾರ್ಗವನ್ನು ಮುಚ್ಚಲು ಸಾಧ್ಯವಾಯಿತು. ಆಗಸ್ಟ್, 1940ರಲ್ಲಿ ಚೀನಾದಲ್ಲಿ ಉಳಿದಿದ್ದ ಬ್ರಿಟಿಷ್ ಪಡೆಗಳು ನಿರ್ಗಮಿಸಿದವು. ಅದು ಜಪಾನಿಗೆ ದೂರದ ವಿಜಯವಾಗಿತ್ತು. ಆನಂತರ ಜಪಾನಿಯರು ಚೀನಾದ ಎಲ್ಲಾ ಕರಾವಳಿಯನ್ನೂ ವಶಪಡಿಸಿಕೊಂಡರು. ಸೆಪ್ಟಂಬರ್, 1940ರಲ್ಲಿ

ಜಪಾನ್, ಜರ್ಮನಿ ಮತ್ತು ಇಟಲಿಗಳೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಅದರಂತೆ ಜರ್ಮನಿ ಮತ್ತು ಇಟಲಿಗಳು ಯುರೋಪಿನ ಮೇಲೆ ಮತ್ತು ಜಪಾನ್ ಏಷ್ಯಾದ ಮೇಲೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಬೇಕಾಗಿತ್ತು. ಅದು ಅಮೆರಿಕಾದ ವಿರುದ್ಧ ಮಾಡಿಕೊಳ್ಳಲಾದ ಒಂದು ಒಪ್ಪಂದವಾಗಿತ್ತು. ಅಮೆರಿಕ ಮತ್ತು ಜಪಾನುಗಳ ನಡುವೆ ಸಂಬಂಧಗಳು ಸ್ನೇಹಯುತವಾಗಿರಲಿಲ್ಲ. ಚೀನಾದಲ್ಲಿ ಜಪಾನಿನ ಆಕ್ರಮಣವನ್ನು ಖಂಡಿಸಿದ ಅಮೆರಿಕ ಜಪಾನಿಗೆ ಯುದ್ಧೋಪಕರಣಗಳ ತಯಾರಿಕೆಗೆ ಬೇಕಾಗಿದ್ದ ಕಚ್ಚಾ ವಸ್ತುಗಳ ಪೂರೈಕೆಯನ್ನು ನಿಲ್ಲಿಸುವುದಾಗಿ ಎಚ್ಚರಿಕೆ ನೀಡಿತು. ನಿಜವಾಗಿಯೂ ಅದು ಜಪಾನಿಗೆ ಪೆಟ್ರೋಲಿಯಂ ಉತ್ಪನ್ನಗಳು ಮತ್ತು ಕಬ್ಬಿಣದ ಅದಿರಿನ ರಫ್ತನ್ನು ನಿಲ್ಲಿಸಿತು. ಪರಿಸ್ಥಿತಿಯ ತೀವ್ರತೆಯನ್ನು ಅರಿತ ಜಪಾನ್ ಅಮೆರಿಕಾದೊಂದಿಗೆ ಸ್ನೇಹದ ನಟನೆಯನ್ನು ಮೂಡಿತು. ಡಿಸೆಂಬರ್, 1941ರಲ್ಲಿ ಮಾತುಕತೆಗಳು ಪ್ರಗತಿಯಲ್ಲಿರುವಾಗಲೇ, ಜಪಾನಿನ ಯುದ್ಧ ವಿಮಾನಗಳು ಪೆರ್ಲ್ ಹಾರ್ಬರ್‌ನ ಅಮೆರಿಕಾದ ಪೆಸಿಫಿಕ್ ನೌಕಾ ಪಡೆಯನ್ನು ಸಾಮರ್ಥ್ಯವನ್ನು ಹಾಳುಗೆಡವಿತು ಮತ್ತು ಹಾವಾಯ್ ದ್ವೀಪಗಳು ಅಮೆರಿಕಾದ ಬಹುಪಾಲು ವಾಯು ಪಡೆಯನ್ನು ನಾಶಪಡಿಸಿತು. 2343 ಜನರು ಸತ್ತರು, 1272 ಜನರು ಗಾಯಗೊಂಡು ಮತ್ತು 960 ಕಾಣೆಯಾದರು. ಎಚ್ಚರಿಕೆ ನೀಡದೆ ಅಥವ ಯುದ್ಧವನ್ನು ಘೋಷಿಸದೆ ಜಪಾನ್ ಪೆರ್ಲ್ ಹಾರ್ಬ್‌ರನ ಅಮೇರಿಕಾದ ನೌಕಾ ನೆಲೆಯ ಮೇಲೆ ಬಾಂಬಿನ ದಾಳಿ ಮಾಡುವ ಮೂಲಕ ಪೆಸಿಫಿಕ್‌ನಲ್ಲಿ ಅಮೇರಿಕಾದ ನೌಕಾ ಪ್ರಾಬಲ್ಯವನ್ನು ನಾಶಪಡಿಸಿತು. ಅದೇ ತಿಂಗಳಿನಲ್ಲಿ ಅಮೆರಿಕ ಜಪಾನಿನ ಮೇಲೆ ಯುದ್ಧವನ್ನು ಘೋಷಿಸಿತು.

### *142.3.1 ಬಿರುಗಾಳಿಯಲ್ಲಿ ಚೀನ*

ಎರಡನೇ ಮಹಾಯುದ್ಧದ ಕಾಲದಲ್ಲಿ ಕುಮಿಂಟಾಂಗ್ ಚೀನಾವನ್ನು ಇಂಗ್ಲೆಂಡ್ ಮತ್ತು ಅಮೆರಿಕಾಗಳ ಪ್ರಮುಖ ಮಿತ್ರರಲ್ಲಿ ಒಂದೆಂದು ಪರಿಗಣಿಸಲಾಗಿತ್ತು. ಜಪಾನಿನ ವಿರುದ್ಧದ ಯುದ್ಧದಲ್ಲಿ ಚೀನಾ ಪ್ರಮುಖ ರಂಗಗಳಲ್ಲಿ ಒಂದಾಗಿದ್ದರಿಂದ ಅಮೆರಿಕಾ ಚೀನಾಕ್ಕೆ ಅಗಾದವಾದ ನೆರವನ್ನು ನೀಡಿತು. ಅಲ್ಲದೆ ಜಪಾನನ್ನು ಸೋಲಿಸುವ ಜವಾಬ್ದಾರಿಯು ಹೆಚ್ಚಿನ ಪಾಲು ಅಮೆರಿಕಾದ ಮೇಲೆ ಬಿದ್ದಿದ್ದಿತು. ಚೀನಾದಲ್ಲಿ ಅಮೆರಿಕಾದ ವಾಯು ಪಡೆಯನ್ನು ನಿರ್ಮಿಸಲಾಯಿತು. ಸೆಜೆಕ್ವಾನ್‌ನಿಂದ ಫುಕೀನ್‌ವರೆಗೆ ವಿಸ್ತರಿಸಿದ್ದ ವಾಯುನೆಲೆಗಳಿಂದ ಅದು ಜಪಾನಿನ ಪಡೆಗಳು ಮತ್ತು ನೌಕೆಗಳ ವಿರುದ್ಧ ಕಾರ್ಯಾಚರಣೆ ನಡೆಸಿತು. ಅಮೇರಿಕಾ ಸರಬರಾಜು ಮಾಡಿದ್ದ ಚೀನಾದ ವಿಮಾನಗಳು ಚೀನಾದಲ್ಲಿ ಜಪಾನಿನ ವಿರುದ್ಧ ಹೋರಾಡಿದವು. ಭಾರತದಿಂದಲೂ ದಾಳಿಯನ್ನು ಸಿದ್ಧಗೊಳಿಸಲಾಗಿತ್ತು. ಬರ್ಮಾದಿಂದ ಹೊರ ಹಾಕಲಾಗಿದ್ದ ಚೀನಿಯರಿಗೆ ಅಮೆರಿಕಾ ಭಾರತದಲ್ಲಿ ತರಬೇತಿ ನೀಡುತು ಮತ್ತು ಸಜ್ಜುಗೊಳಿಸಿತು. ಅಮೆರಿಕಾದ ಚೀನಿಯರು ಮತ್ತು ಬ್ರಿಟಿಷ್ ಪಡೆಗಳು ಜಪಾನಿಯರ ನೆಲೆಗಳನ್ನು ನಾಶಪಡಿಸಲು ಮುನ್ನೆಡೆದವು.

### *142.3.2 ಚೀನಾದ ಹದಗೆಟ್ಟ ಪರಿಸ್ಥಿತಿ*

1944ರಲ್ಲಿ ಚೀನಾದ ಪರಿಸ್ಥಿತಿ ಹಿಂದೆಂದಿಗಿಂತಲೂ ಹದಗೆಟ್ಟಿತ್ತು, ಬ್ರಿಟಿಷ್ ಸಾಮ್ರಾಜ್ಯದ ಮೇಲೆ ತನ್ನ ಆಕ್ರಮಣದ ಮೂಲಕ ಜಪಾನ್ ಚೀನಾದಲ್ಲಿ ಮುನ್ನಡೆ ಮುಂದುವರಿಸಿತು, ಗಡಿಯಲ್ಲಿ ಹಾಂಗ್‌ಕಾಂಗ್ ಮತ್ತು ಬರ್ಮಾಗಳ ಉಳಿದೆರಡು ಮಾರ್ಗಗಳನ್ನು ಮುಚ್ಚುವ ಮೂಲಕ ಜಪಾನ್ ಚೀನಾವನ್ನು ಸುತ್ತುವರಿಯಿತು. ಪೂರ್ವ ಏಷ್ಯಾದಲ್ಲಿ ಜಪಾನ್ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರಿಂದ ಚೀನಾದ ಪರಿಸ್ಥಿತಿ ಮತ್ತಷ್ಟು ಹೀನಾಯವಾಯಿತು. ಅದು ಚೀನಾಕ್ಕೆ ಎಲ್ಲಾ ಪೂರೈಕೆಗಳನ್ನು ಕಡಿದ ಹಾಕಿತು. ತನ್ನ ಬಹುದೊಡ್ಡ ನೆರೆಹೊರೆಯವನಾಗಿದ್ದ ಅಮೇರಿಕಾವನ್ನು ಸೋಲಿಸಿ ಯುದ್ಧದಿಂದ ಹೊರಹಾಕಲು ಜಪಾನ್ ಪ್ರಯತ್ನಗಳನ್ನು ತೀವ್ರಗೊಳಿಸಿತು. ಚೀನಾದಲ್ಲಿದ್ದ ಅಮೆರಿಕಾ ಸರಬರಾಜು ಮಾಡಿದ್ದು ಚೀನಾದ ವಾಯುಪಡೆಗಳು ಚೀನಾದಲ್ಲಿದ್ದ ಜಪಾನಿಯರಿಗೆ ಮಾತ್ರವಲ್ಲದೆ ನಿಜವಾದ ಜಪಾನಿಗೆ ಬೆದರಿಕೆಯೊಡ್ಡಲು ಪ್ರಾರಂಭಿಸಿತು. ಈ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಹೊರತು ಅವು ಜಪಾನಿನಲ್ಲಿ, ಸಮುದ್ರದಲ್ಲಿ ಮತ್ತು ಚೀನಾದಲ್ಲಿ ಜಪಾನಿಯರಿಗೆ ತೀವ್ರವಾಗಿ ಅಪಾಯಕಾರಿಯಾಗಿದ್ದವು. 1944 ರಲ್ಲಿ ಜಪಾನಿನ ಸೇನೆ ಚೀನಾದಲ್ಲಿ ತನ್ನ ಆಕ್ರಮಣವನ್ನು ಕ್ಯಾಂಟುಂಗ್‌ನಿಂದ ದಕ್ಷಿಣದ ಕಡೆಗೆ ಬದಲಾಯಿಸಿದ ವುಚಾಂಗ್‌ನಿಂದ ಕ್ಯಾಂಟನ್‌ವರೆಗಿನ

ರೈಲು ಮಾರ್ಗದ ವಶವನ್ನು ಪೂರ್ಣಗೊಳಿಸಿತು. ಚೀನಿಯರು ಪ್ರಬಲವಾದ ವಿರೋಧವನ್ನೊಡ್ಡಿದರು ಆದರೆ ವಿಫಲರಾದರು. 1944 ರ ಕಡೆಯ ವೇಳೆಗೆ ಜಪಾನ್ ಚೀನಾವನ್ನು ತುಂಡರಿಸಿತು ಮತ್ತು ಪೂರ್ವ ಹಾಗೂ ಪಶ್ಚಿಮಗಳಲ್ಲಿ ಅಮೆರಿಕಾದ ವಾಯು ನೀತಿಗಳನ್ನು ಬಹುಮಟ್ಟಿಗೆ ಕಡಿದುಹಾಕಿತು. ಚೀನಾದ ಪ್ರತಿದಾಳಿಗಳು ಜಪಾನಿಯರನ್ನು ಕೆಲವು ಮಂಚೂಣಿ ನೆಲೆಗಳಿಂದ ಹಿಂದುರುಗುವಂತೆ ಮಾಡಿದವು.

### *142.3.3 ಯುದ್ಧದ ಕಡೆಯ ಹಂತ*

ಮಿತ್ರ ರಾಷ್ಟ್ರಗಳು ಬೋನಿನ್ ದ್ವೀಪಗಳಲ್ಲಿ ಒಂದಾದ ಇವೋಜಿಮಾದ ಮೇಲೆ ಸತತವಾದ ಬಾಂಬು ದಾಳಿಯನ್ನು ಮುಂದುವರಿಸಿದವು ಮತ್ತು ಎರಡು ತಿಂಗಳುಗಳಲ್ಲಿ ಅದನ್ನು ವಶಪಡಿಸಿಕೊಂಡವು. ರೈಕ್ಯ ಗುಂಪಿನ ದ್ವೀಪಗಳಲ್ಲಿ ಒಂದಾದ ಒಕಿನಾವ ಅವರ ಮುಂದಿನ ಗುರಿಯಾಗಿತ್ತು. ಇದನ್ನು ಜಪಾನಿನ ಹೊಸ್ತಿಲೆಂದು ಪರಿಗಣಿಸಿಲಾಗಿದ್ದರಿಂದ ಜಪಾನಿಯರು ಅದನ್ನು ರಕ್ಷಿಸಲು ಬಹಳವಾಗಿ ಪ್ರಯತ್ನಿಸಿದರು. ಅವರು 'ಆತ್ಮಾಹುತಿ ವಿಮಾನ'ಗಳನ್ನು ಬಳಸಿದರು, ಶತೃಗಳ ಅನೇಕ ಯುದ್ಧ ನೌಕೆಗಳು ಮತ್ತು ಅಮೆರಿಕನ್ನರ ಜೀವಗಳನ್ನು ನಾಶಪಡಿಸಿದರು. ಆದರೆ ಅವರ ಪ್ರಯತ್ನಗಳೆಲ್ಲವೂ ವಿಫಲವಾದವು. ಮಿತ್ರ ರಾಷ್ಟ್ರಗಳು ಒಕಿನಾವವನ್ನು ಬಹುಬೇಗನೆ ವಶಪಡಿಸಿಕೊಂಡವು. ಜಪಾನಿನ ದ್ವೀಪಗಳಲ್ಲಿ ಒಂದಾದ ಹೊನ್ಶುವಿನ ಮೇಲೆ, ಜುಲೈ, 1945 ರಲ್ಲಿ ಆಂಗ್ಲೋ-ಅಮೆರಿಕನ್ ಪಡೆಗಳು ಶೆಲ್ ದಾಳಿ ಮಾಡಿದವು. ಎಂದು ಕರೆಯಲಾಗಿದ್ದ ಹೋರಾಟದ ವಾಯು ನೌಕೆಗಳು ಜಪಾನಿನ ಪ್ರಮುಖ ನಗರಗಳ ಮೇಲೆ ಭಾರೀ ಪ್ರಮಾಣದ ದಾಳಿಯನ್ನು ಮಾಡಿದವು. ಈ ನಂತರ ಜಪಾನ್ ಎಲ್ಲಾ ಯುದ್ಧರಂಗಗಳಲ್ಲೂ ಸೋಲತೊಡಗಿತು.

ಈ ಸಂದಿಗ್ಧ ಸನ್ನಿವೇಶದಲ್ಲಿ ಮಿತ್ರ ರಾಷ್ಟ್ರಗಳು ಜುಲೈ, 17, 1945ರಲ್ಲಿ ಪೋಟ್ಸ್‌ಡ್ಯಾಮ್‌ನಲ್ಲಿ ಸಭೆ ಸೇರಿದವು. ಜುಲೈ, 26, 1945ರಂದು ಅಮೆರಿಕ ಪೋಟ್ಸ್ ಡ್ಯಾಮರ ಘೋಷಣೆಯನ್ನು ಹೊರಡಿಸಿತು. ಬ್ರಿಟನ್ ಮತ್ತು ಚೀನಾಗಳು ಜಪಾನಿಗೆ ಬೇಷರತ್ತಾಗಿ ಶರಣಾಗುವಂತೆ ಅಥವಾ 'ಪ್ರಾಮಣಿಕವಾದ ಮತ್ತು ಸಂಪೂರ್ಣ ನಾಶ'ವನ್ನು ಎದುರಿಸುವಂತೆ ಕರೆ ನೀಡಿದವು. ಅದರೊಂದಿಗೆ ಅಮೆರಿಕ ಎರಡು ಅಣು ಬಾಂಬ್‌ಗಳನ್ನು ಹಾಕಿತು. ಒಂದನ್ನು ಆಗಸ್ಟ್‌ರಂದು ಹಿರೋಷಿಮಾದ ಮೇಲೂ ಮತ್ತು ಮತ್ತೊಂದನ್ನು ಆಗಸ್ಟ್ 9 ರಂದು ನಾಗಸಾಕಿಯ ಮೇಲೂ ಹಾಕಿ ಜಪಾನಿನ ಈ ಎರಡು ಪ್ರಮುಖ ನಗರಗಳಿಗೆ ಸರಿಪಡಿಸಲಾಗದ ನಷ್ಟವನ್ನುಂಟು ಮಾಡಲಾಯಿತು. ಈ ನಡುವೆ ಮಂಚೂರಿಯಾದ ಮೇಲೆ ಆಕ್ರಮಣ ಮಾಡುವ ಮೂಲಕ ಆಗಸ್ಟ್ 8, 1945ರಂದು ಜಪಾನಿನ ವಿರುದ್ಧ ರಷ್ಯಾದ ಯುದ್ಧ ಪ್ರವೇಶದಿಂದ ಜಪಾನಿನ ಪರಿಸ್ಥಿತಿ ಮತ್ತಷ್ಟು ಚಿಂತಾಜನಕವಾಯಿತು. ಹೀಗೆ ಜಪಾನನ್ನು ಅಂತಿಮವಾಗಿ ಶರಣಾಗುವಂತೆ ಮಾಡಲಾಯಿತು. ಆಗಸ್ಟ್ 9, 1945ರಂದು ರಾತ್ರಿ ಪೋಟ್ಸ್‌ಡ್ಯಾಮ್ ಘೋಷಣೆಯನ್ನು ಅಂಗೀಕರಿಸುವ ಬಗ್ಗೆ ಪರಿಗಣಿಸಲು ಒಂದು ರಾಷ್ಟ್ರಗಳ ಸಭೆಯನ್ನು ಕರೆಯಲಾಯಿತು. ಹೆಚ್ಚಿನ ಸೇನಾ ವ್ಯಕ್ತಿಗಳು ಘೋಷಣೆಯನ್ನು ಒಪ್ಪಿಕೊಳ್ಳಲು ಹಿಂಜರಿದರು. ಆದರೆ ಮಿತ್ರ ರಾಷ್ಟ್ರಗಳ ಒತ್ತಡದಿಂದ ಜಪಾನಿನ ಚಕ್ರವರ್ತಿ ಹಿರೊ ಹಿಟೊ ಆಗಸ್ಟ್ 14, 1945ರಿಂದ ಬೇಷರತ್ತಾಗಿ ಶರಣಾಗತಿಯನ್ನು ಒಪ್ಪಿಕೊಳ್ಳಲೇ ಬೇಕಾಯಿತು. ಇದರೊಂದಿಗೆ ಜಪಾನಿನ ಹಿಡಿತದಿಂದ ಚೀನಾ ಸಂಪೂರ್ಣವಾಗಿ ಮುಕ್ತವಾಯಿತು. ಕಳೆದ ಐವತ್ತು ವರ್ಷಗಳಲ್ಲಿ ತಾನು ಕಳೆದುಕೊಂಡುದುದೆಲ್ಲವನ್ನೂ ಅದು ಪುನಃ ಪಡೆಯಿತು.

ಆಗಸ್ಟ್, 1945ರಲ್ಲಿ ಜಪಾನಿನ ಶರಣಾಗತಿಯೊಂದಿಗೆ ಚೀನಾದ ಕುಮಿಂಟಾಂಗ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ನಡುವೆ ಬಹಳ ಕಾಲದಿಂದ ನಿರೀಕ್ಷಿಸಲಾಗಿದ್ದ ಅಂತರ್ಯುದ್ಧ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಕುಮಿಂಟಾಂಗ್ ಪಕ್ಷ ವಿಜಯಿಯಾಗಿ ಹೊರಬರುವುದೆಂದು ಕಂಡು ಬಂದಿತು. ಅವರು ಹೆಚ್ಚಿನ ಪಡೆಗಳನ್ನು ಯುದ್ಧಕ್ಕಿಳಿಸಿದರು. ಅಮೆರಿಕಾದಿಂದ ಉಧಾರವಾದ ನೆರವನ್ನು ಪಡೆದರು. ಆದರೆ ರಾಷ್ಟ್ರೀಯ ಪಡೆಗಳು ಮಿತಿಮೀರಿ ಹರಡಿದ್ದವು ಮತ್ತು ಅವರ ಪೂರೈಕೆಯ ಮಾರ್ಗಗಳು ಕಮ್ಯುನಿಸ್ಟರ್ ಗೆರಿಲ್ಲಾ ದಾಳಿಗೆ ಗುರಿಯಾದವು. ಮಿಗಿಲಾಗಿ ರಾಷ್ಟ್ರೀಯ ವಾದಿಗಳು ಸೈನಿಕ ಯಂತ್ರವನ್ನು ನಿಭಾಯಿಸಲು ಬಲಿಷ್ಠವಾದ ಆರ್ಥಿಕ ನೆಲೆಯನ್ನು ಸ್ಥಾಪಿಸುವಲ್ಲಿ ವಿಫಲರಾದರು ಮತ್ತು ತ್ವರಿತವಾದ ಹಣದುಬ್ಬರವುಂಟಾಯಿತು.

1948 ರ ಪ್ರಾರಂಭದಲ್ಲಿ ಕಮ್ಯುನಿಸ್ಟರು ಚೀನಾದ ಉತ್ತರ ಭಾಗದ ಮೇಲೆ ತಮ್ಮ ಹತೋಟಿಯನ್ನು ಸ್ಥಾಪಿಸಿದರು. ನಂತರ ಮಾವೋ ಬೃಹತ್ ಪ್ರಮಾಣದ ಸೇನಾ ಕಾರ್ಯಾಚರಣೆಯನ್ನು ಆರಂಭಿಸಿ ಒಂದರ ನಂತರ ಒಂದರಂತೆ ನಗರಗಳನ್ನು ವಶಪಡಿಸಿಕೊಳ್ಳಲಾಯಿತು. ರಾಷ್ಟ್ರೀಯ ಸೇನಾ ಪಡೆಗಳು ಜನವರಿ, 10, 1949ರಂದು ಶರಣಾದವು. 1949ರ ಬೇಸಿಗೆಯಲ್ಲಿ ಚಿಯಾಂಗ್ ಕೈಷೆಕ್ ಮತ್ತು ರಾಷ್ಟ್ರೀಯವಾದಿಗಳು ತೈವಾನಿಗೆ ಪಲಾಯನ ಮಾಡಿದರು. ಅಮೆರಿಕ ಅದನ್ನು ಚೀನಾದ ಸರ್ಕಾರವೆಂದು ಮಾನ್ಯ ಮಾಡಿತು.

1, ಅಕ್ಟೋಬರ್, 1949ರಂದು ಚೀನಾ ಜನತಾ ಗಣರಾಜ್ಯವನ್ನು ಘೋಷಿಸಲಾಯಿತು. ಮಾವೋ ಕಮ್ಯುನಿಸ್ಟ್ ಪಕ್ಷದ ಆಡಳಿತ ಸಮಿತಿಯ ಅಧ್ಯಕ್ಷರಾಗಿ ಮತ್ತು ಚೌಎನ್‌ಲೈ ಪ್ರಧಾನ ಮಂತ್ರಿ ಮತ್ತು ವಿದೇಶಾಂಗ ಮಂತ್ರಿಯಾಗಿ ನೇಮಕಗೊಂಡರು. ತಕ್ಷಣವೇ ಸೋವಿಯತ್ ರಷ್ಯಾ ಮತ್ತು ಅದರ ಮಿತ್ರರು ಹೊಸ ಆಡಳಿತಕ್ಕೆ ಮಾನ್ಯತೆ ನೀಡಿದರು. ಜುಲೈ 1, 1949 ರಂದು ಮಾವೋ ಹೊಸ ಸರ್ಕಾರವು ಕಮ್ಯುನಿಸ್ಟ್ ನಾಯಕತ್ವದಲ್ಲಿ ಪ್ರಜಾಸತ್ತಾತ್ಮಕ ಮೈತ್ರಿಯ ಆಧಾರದ ಮೇಲೆ ರೂಪುಗೊಂಡ ಜನತಾ ಪ್ರಜಾಸತ್ತಾತ್ಮಕ ಸರ್ವಾಧಿಕಾರವೆಂದು ಘೋಷಿಸಿದರು.

## 142.4 ಯುದ್ಧದ ಪರಿಣಾಮಗಳು

ಈ ಯುದ್ಧವು ಚೀನಾ ಮತ್ತು ಜಪಾನುಗಳ ಇತಿಹಾಸದ ಮೇಲೆ ಅನೇಕ ಪರಿಣಾಮಗಳನ್ನು ಬೀರಿತು. ಅವುಗಳೆಂದರೆ

1. ಈ ಹೋರಾಟದ ಒಂದು ಪರೋಕ್ಷ ಪರಿಣಾಮವೆನೆಂದರೆ ಚಿಯಾಂಗ್ ಕೈಷೆಕನ ಭ್ರಷ್ಟ ಮತ್ತು ಅಸಮರ್ಥ ಸರ್ಕಾರವು ಚೀನಿಯರಲ್ಲಿ ತನ್ನ ಜನಪ್ರಿಯತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿತು ಮತ್ತು ಕಮ್ಯುನಿಸ್ಟರು ತಮ್ಮ ಪ್ರಭಾವವನ್ನು ವಿಸ್ತರಿಸಲು ಒಂದು ಅವಕಾಶವನ್ನು ಪಡೆದರು ಮತ್ತು ಅವರು 1949ರಲ್ಲಿ ಚಿಯಾಂಗ್ ಕೈ ಷೆಕನನ್ನು ಚೀನಾದಿಂದ ಹೊರ ಹಾಕುವಲ್ಲಿ ಯಶಸ್ವಿಯಾದರು.

2. ಜಪಾನಿನ ವಿರುದ್ಧದ ಹೋರಾಟವು ಕಮ್ಯುನಿಸ್ಟರಿಗಂ ತಮ್ಮ ಸೈನ್ಯವನ್ನು ಹೆಚ್ಚಿಸಿಕೊಳ್ಳಲು ಕಮ್ಯುನಿಸ್ಟರಿಗೆ ಅವಕಾಶವನ್ನು ನೀಡಿತು ಮತ್ತು 1945ರಲ್ಲಿ ಯುದ್ಧ ಮುಕ್ತಾಯವಾಗುವ ವೇಳೆಗೆ ಕಮ್ಯುನಿಸ್ಟರು ಅತ್ಯಂತ ಪ್ರಬಲರಾಗಿ ಚಿಯಾಂಗ್ ಕೈ ಷೆಕನಿಗೆ ಚೀನಾದ ಮೇಲೆ ಹತೋಟಿಯನ್ನು ಉಳಿಸಿಕೊಳ್ಳುವುದು ಅಸಾಧ್ಯವಾಯಿತು.

3. ಜಪಾನ್, ಜರ್ಮನಿ, ಇಟಲಿ ಮತ್ತು ಜಪಾನ್‌ಗಳನ್ನು ಒಳಗೊಂಡ ತ್ರಿಪಕ್ಷ ಮೈತ್ರಿಕೂಟದ ಸದಸ್ಯವಾಯಿತು. ಈ ರಾಷ್ಟ್ರಗಳ ಜೊತೆಗೆ ಅವುಗಳ ಪ್ರಭುತ್ವಕೊಳ ಪಟ್ಟಿದ್ದ ರಾಷ್ಟ್ರಗಳು ಚೀನಾದ ಕೈಗೊಂಬೆ ಸರ್ಕಾರಕ್ಕೆ ಮಾನ್ಯತೆ ನೀಡಿದವು ಮತ್ತು ಕುಮಿಂಟಾಂಗ್ ಸರ್ಕಾರದ ಸ್ಥಾನವನ್ನು ದುರ್ಬಲಗೊಳಿಸಿತು.

4. ಚೀನ ಜಪಾನಿನ ಹಿಡಿತದಿಂದ ಮುಕ್ತವಾಯಿತು. ಐವತ್ತು ವರ್ಷಗಳಲ್ಲಿ ತಾನು ಕಳೆದುಕೊಂಡುದುದೆಲ್ಲವನ್ನೂ ಅದು ಪುನಃ ಪಡೆದುಕೊಂಡಿತು. ಜಪಾನ್ ಚೀನಾದಲ್ಲಿನ ತನ್ನ ಸ್ಥಾನಮಾನದ ಎಲ್ಲಾ ಹಕ್ಕುಗಳನ್ನು ತ್ಯಜಿಸಿತು. ಮಿತ್ರ ರಾಷ್ಟ್ರಗಳು ಚೀನಾದ ಪ್ರಾದೇಶಿಕ ಸಮಗ್ರತೆಯನ್ನು ಗೌರವಿಸಿದವು.

5. ಚೀನ ಪ್ರಬಲ ರಾಷ್ಟ್ರವಾಗಿ ತಲೆಯೆತ್ತಿತ್ತು ಮತ್ತು ನಿಜವಾಗಿಯು ನಾಲ್ಕು ಪ್ರಬಲ ರಾಷ್ಟ್ರಗಳಲ್ಲಿ ಒಂದಾಯಿತು. ಅಮೆರಿಕ ಚೀನಾಕ್ಕೆ ಎಲ್ಲಾ ರೀತಿಯಿಂದಲೂ ಸಹಾಯ ಮಾಡಿತು. ಯುದ್ಧದ ಕಾಲದಲ್ಲಿ ಮಾಲ್ಟ, ಟೆಹರಾನ್, ಕೈರೊ ಮತ್ತು ಮಾಸ್ಕೋಗಳಲ್ಲಿ ನಡೆದ ಎಲ್ಲಾ ಸಮ್ಮೇಳನಗಳಲ್ಲೂ ಚೀನಾಕ್ಕೆ ಮಹತ್ವದ ಸ್ಥಾನವನ್ನು ನೀಡಲಾಯಿತು.

6. ವಿಶ್ವಸಂಸ್ಥೆಯ ಸ್ಥಾಪನೆಗೆ ಚೀನ ಸಹಾಯ ಮಾಡಿತು. ರಾಷ್ಟ್ರೀಯವಾದಿ ಚೀನಾಕ್ಕೆ ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯವಾಯಿತು. ಬ್ರಿಟನ್ ಮತ್ತು ಫ್ರಾನ್ಸ್‌ಗಳು ಚೀನಾದಲ್ಲಿ ಅನೇಕ ವರ್ಷಗಳಿಂದ ಅನುಭವಿಸುತ್ತಿದ್ದ ತಮ್ಮ ಸವಲತ್ತುಗಳನ್ನು ತ್ಯಜಿಸಿದವು.

7. ಮೊಟ್ಟ ಮೊದಲ ಬಾರಿಗೆ ಚೀನ ಒಂದು ಸ್ವಾತಂತ್ರ್ಯ ರಾಷ್ಟ್ರವಾಯಿತು. ತಮ್ಮ ಪ್ರದೇಶದಾಚೆಗಿನ ಹಕ್ಕುಗಳನ್ನು ತಕ್ಷಣವೇ ತ್ಯಜಿಸುವ ಮತ್ತು ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳ ಇತ್ಯಾರ್ಥಕ್ಕೆ ಅವಕಾಶ ಮಾಡಿಕೊಡಲು ಬ್ರಿಟನ್ ಮತ್ತು ಅಮೆರಿಕಾಗಳು ಚೀನಾದೊಂದಿಗೆ ಒಂದು ಒಪ್ಪಂದಕ್ಕೆ ಬಂದವು. ಉಳಿದ ಎಲ್ಲಾ 'ಒಪ್ಪಂದದ ರಾಷ್ಟ್ರಗಳು' ಇದೇ ಬಗೆಯ ವಿಶೇಷ ಹಕ್ಕುಗಳ ತ್ಯಾಜ್ಯವು ಚೀನಾದ ಸಂಪೂರ್ಣ ಸಂಪೂರ್ಣ ಸಾರ್ವಭೌಮತ್ವದ ಪುನರನುಷ್ಠಾನ ಮತ್ತು ಮಾನ್ಯತೆಯ ದೀರ್ಘವಾದ ಪ್ರಕ್ರಿಯೆ ಪೂರ್ಣಗೊಂಡಿತು. ರಾಷ್ಟ್ರೀಯ ಸರಕಾರಕ್ಕೆ ಬ್ರಿಟನ್ ಮತ್ತು ಅಮೆರಿಕಾಗಳ ಬೆಂಬಲವಿತ್ತು ಮತ್ತು ಯುದ್ಧಾನಂತರದ ಪೂರ್ವ ಏಷ್ಯಾವನ್ನು ಸಂಪೂರ್ಣ ಸಾರ್ವಭೌಮ ಸ್ವತಂತ್ರ ಮತ್ತು ಬಲಿಷ್ಠ ಚೀನಾದ ಸುತ್ತ ನಿರ್ಮಿಸ ಬಹುದಾಗಿದೆ.

## 142.5 ಮುಕ್ತಾಯ

ಈ ಘಟಕದಲ್ಲಿ ನಾವು ಎರಡನೇ ಮಹಾಯುದ್ಧದಲ್ಲಿ ಚೀನಾದ ಪಾತ್ರದ ಪ್ರಮುಖ ಲಕ್ಷಣಗಳನ್ನು ಗುರಿತಿಸಿದ್ದೇವೆ. 1941ರಲ್ಲಿ ಪರ್ಲ್ ಹಾರ್ಬರ್‌ನ ಮೇಲೆ ಜಪಾನಿನ ದಾಳಿಯೊಂದಿಗೆ ಚೀನಾ-ಜಪಾನ್ ಯುದ್ಧ ಒಂದು ಹೊಸ ಹಂತವನ್ನು ಪ್ರವೇಶಿಸಿತು ಮತ್ತು ವಿಶ್ವ ಸಮರದಲ್ಲಿ ಲೀನವಾಯಿತು. ಚೀನಾಕ್ಕೆ ಸಂಬಂಧಿಸಿದಂತೆ ಎರಡನೇ ಮಹಾಯುದ್ಧದ ಆರಂಭವು 1941ರ ನಂತರ ಮಾರು ವೇಷದಲ್ಲಿ ಬಂದ ವರದಂತಿದ್ದಿತು. ಅದು ಜಪಾನಿನ ಸಾಮ್ರಾಜ್ಯಷಾಹಿ ನೀತಿಯಿಂದ ಚೀನಾವನ್ನು ರಕ್ಷಿಸಿತು. ಚೀನಾದ ಪರಿಸ್ಥಿತಿ ಅತ್ಯಂತ ದಾರುಣವಾಗಿತ್ತು. ಕುಮಿಂಟಾಂಗ್ ಸರ್ಕಾರವನ್ನು ಪಾಶ್ಚಿಮಾತ್ಯ ಮಿತ್ರ ರಾಷ್ಟ್ರಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲಾಯಿತು. ಇದರಿಂದ ಅವುಗಳಿಗೆ ಚೀನಾದ ಅಗತ್ಯತೆಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಆದರೆ ಚಿಯಾಂಗ್ ಕೈ ಷೆಕನ ಧೈರ್ಯ ಮತ್ತು ಸಾಮರ್ಥ್ಯಗಳು ಶ್ಲಾಘನೀಯವಾದವು. ಅಲ್ಲದೆ ಈ ಘಟಕದಲ್ಲಿ ನಾವು ಎರಡು ಅಣು ಬಾಂಬುಗಳನ್ನು ಹಾಕಿದಾಗ ಮತ್ತು ರಷ್ಯಾದ ಆಕ್ರಮಣಗಳು 1945 ಜಪಾನಿಯರು ಒತ್ತಾಯ ಪೂರ್ವಕವಾಗಿ ಶರಣಾಗುವಂತೆ ಮೂಡಿದಾಗಲೂ ಚೀನಾದ ಬಹುಭಾಗಗಳು ಇನ್ನೂ ಜಪಾನಿನ ವಶದಲ್ಲಿದ್ದವೆಂಬುದನ್ನು ತಿಳಿದೆವು. ಜಪಾನ್ ಚೀನಾದ ಮುಖ್ಯ ಭೂಮಿಯಿಂದ ನಿರ್ಗಮಿಸಬೇಕಾಯಿತು ಮತ್ತು ಕಳೆದ ಐವತ್ತು ವರ್ಷಗಳಲ್ಲಿ ಜಪಾನ್ ಆಕ್ರಮಿಸಿಕೊಂಡಿದ್ದ ಎಲ್ಲಾ ಪ್ರದೇಶಗಳನ್ನು ಚೀನಾಕ್ಕೆ ಹಿಂದಿರುಗಿಸಬೇಕಾಯಿತು ಮತ್ತು ಚೀನಾ ಸ್ವಾತಂತ್ರವಾಯಿತು. ಜಪಾನಿಯರನ್ನು ಚೀನ ಹಿಮ್ಮೆಟ್ಟಿಸಲಿಲ್ಲ ಆದರೆ ಅವರು ಅಮೇರಿಕ ಮತ್ತು ರಷ್ಯಾಗಳ ವಿಜಯಗಳಿಂದಾಗಿ ಚೀನಾದಿಂದ ನಿರ್ಗಮಿಸ ಬೇಕಾಯಿತು.

## 142.6 ನಿಮ್ಮ ಪ್ರಗತಿಯ ಪರೀಕ್ಷಿಸಲು ಉತ್ತರಗಳು

**I.** ಇವುಗಳಿಗೆ ಪ್ರತಿಯೊಂದಕ್ಕೂ ಮೂರು ವಾಕ್ಯಗಳಲ್ಲಿ ಉತ್ತರಿಸಿ

1) ಪೆರ್ಲ್ ಹಾರ್ಬರ್

2) ವಿಚಿ ಆಳ್ವಿಕೆ (ಸರ್ಕಾರ)

3) ಒಕಿನಾವ

4) ಪೋಟ್ಸ್‌ಡ್ಯಾಮ್ ಘೋಷಣೆ

5) ಚೌ ಎನ್ ಲೈ

**II.** ಇವುಗಳಿಗೆ ಪ್ರತಿಯೊಂದಕ್ಕೂ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ

1) ಎರಡನೇ ಮಹಾಯುದ್ಧದಲ್ಲಿ ಚೀನಾದ ಪಾತ್ರವನ್ನು ಚಿತ್ರಿಸಿ

2) ಎರಡನೇ ಮಹಾಯುದ್ಧದಲ್ಲಿ ಚೀನಾದ ಪಾಲುದಾರಿಕೆಯಿಂದಾದ ಪರಿಣಾಮಗಳೇನು?

## 142.7 ಕೆಲವು ಉಪಯುಕ್ತ ಪುಸ್ತಕಗಳು


1. HSu .C.Y : The History of Modern China

2. Vinache . H.M : A History of the Far East in Modern Times.

3. R.S. Gupta : History of Modern China.

4. K.S. Latourette : A Short History of the Far East.

5. Immanuel .C.Y. HSu : The Rise of Modern China.

6. S.L. Roy : A Short History of the Far East

# ಟಿಪ್ಪಣಿಗಳು

# ಟಿಪ್ಪಣಿಗಳು

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


Multimedia learning material
STUDENT
INSTRUCTIONAL SYSTEM